

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಅಕ್ಟೋಬರ್ 17 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 180 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಆರ್‌ಎಸ್‌ಎಸ್‌ಗೆ ಬ್ರೇಕ್!

■ ಯಾವುದೇ ಸಂಘ–ಸಂಸ್ಥೆ ಸಾರ್ವಜನಿಕ ಸ್ಥಳದಲ್ಲಿ ಕಾರ್ಯಕ್ರಮ ಮಾಡಲು ಅನುಮತಿ ಕಡ್ಡಾಯ
■ ಸಂಪುಟ ಸಭೆ ನಿರ್ಧಾರ; ಶಾಂತಿ–ಸುವ್ಯವಸ್ಥೆ, ಸಾರ್ವಜನಿಕ ಆಸ್ತಿ ರಕ್ಷಣೆಗೆ ಈ ಕ್ರಮ

ಬೆಂಗಳೂರು, ಅ.16 (ಕೆಎಂಶಿ)– ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಸೇರಿದಂತೆ ಎಲ್ಲಾ ಸಂಘ ಸಂಸ್ಥೆಗಳ ಚಟುವಟಿಕೆಗಳಿಗೆ ಸರ್ಕಾರ ಕಡಿವಾಣ ಹಾಕಿದೆ.

ಸರ್ಕಾರಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಇನ್ನು ಮುಂದೆ ಯಾವುದೇ ಸಂಘ ಸಂಸ್ಥೆಗಳು ಚಟುವಟಿಕೆ ನಡೆಸಲು ಪೂರ್ವಾನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಆರ್‌ಎಸ್‌ಎಸ್ ಶತಮಾನೋತ್ಸವ ಆಚರಣೆ ವೇಳೆ ರಾಜ್ಯಾದ್ಯಂತ ಪಥ ಸಂಚಲನ ಹಾಗೂ ಸಾರ್ವಜನಿಕ ಸಮಾರಂಭಗಳನ್ನು ಹಮ್ಮಿಕೊಂಡಿತ್ತು.

ಪಥಸಂಚಲನದ ಬಗ್ಗೆ ಸಂಪುಟದ ಸಚಿವರೇ ಆಕ್ಷೇಪ ವ್ಯಕ್ತಪಡಿಸಿ, ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ಕಡಿವಾಣ ಹಾಕುವಂತೆ ಮಾಡಿದ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮಿಳುನಾಡು ಸರ್ಕಾರದ ಮಾದರಿಯಲ್ಲೇ ರಾಜ್ಯದಲ್ಲೂ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದರು.

ಇಂದು ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿ, ನೆರೆಯ ತಮಿಳುನಾಡಿನಲ್ಲಿ ತಂದಿರುವ ಕಾನೂನನ್ನೇ ಅಳವಡಿಸಿಕೊಂಡು ಆರ್‌ಎಸ್‌ಎಸ್ ಸೇರಿದಂತೆ ಯಾವುದೇ ಸಂಘ ಸಂಸ್ಥೆಗಳು ಪೂರ್ವಾನುಮತಿ ಪಡೆಯದೆ ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಕ್ರಮ ಆಯೋಜಿಸುವಂತಿಲ್ಲ ಎಂಬ ತೀರ್ಮಾನ ಕೈಗೊಂಡಿದೆ. ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ


ಸಂಗ್ರಹ ಚಿತ್ರ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ್, ಸರ್ಕಾರಿ ಸ್ಥಳಗಳಷ್ಟೇ ಅಲ್ಲದೆ, ಶಾಲಾ–ಕಾಲೇಜು, ಖಾಸಗಿ ಪ್ರದೇಶಗಳಲ್ಲೂ ಸ್ವಯಂ ಪ್ರೇರಿತವಾಗಿ ಚಟುವಟಿಕೆ ನಡೆಸುವಂತಿಲ್ಲ.

ಇರುವ ಕಾನೂನನ್ನು ಮತ್ತಷ್ಟು ಬಿಗಿಗೊಳಿಸಿ ಚಟುವಟಿಕೆಗಳಿಗೆ ನಿರ್ಬಂಧ ಹಾಕಲಾಗಿದೆ. ನಿಬಂಧನೆಗಳಿಗೆ ಸಂಬಂಧಿಸಿದಂತೆ ಗೃಹ ಇಲಾಖೆ ಆದೇಶ ಹೊರಡಿಸಲಿದೆ. ಸಂಘ ಸಂಸ್ಥೆಗಳಿರಬಹುದು, ಇಲ್ಲವೇ ರಾಜಕೀಯ ಪಕ್ಷಗಳಾಗಿರಬಹುದು. ಏನೇ ಚಟುವಟಿಕೆ ಕೈಗೊಳ್ಳಬೇಕಾದರೂ ಕಾರಣ ನೀಡಿ ಗೃಹ ಇಲಾಖೆ ಅನುಮತಿ ಪಡೆಯಬೇಕು.

ಶಾಂತಿ, ಸುವ್ಯವಸ್ಥೆ ಮತ್ತು ಸಾರ್ವಜನಿಕ ಆಸ್ತಿ ಕಾಪಾಡುವ ಉದ್ದೇಶದಿಂದ ಮುಂಜಾಗ್ರತೆಯಾಗಿ ಕಠಿಣ ಕಾನೂನು ಕ್ರಮ ತೆಗೆದುಕೊಂಡಿದೆ ಎಂದರು.

ಧಾರ್ಮಿಕ ಸಂಘಟನೆಗಳಷ್ಟೇ ಅಲ್ಲ, ಯಾವುದೇ ಸಂಸ್ಥೆ, ಪಕ್ಷಗಳಾದರೂ ಕಾನೂನು ಚೌಕಟ್ಟಿನಲ್ಲಿಯೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಸ್ಪಷ್ಟಪಡಿಸಿದರು.

ಆರ್‌ಎಸ್‌ಎಸ್ ವಿರುದ್ಧ ಕ್ರಮ ಪೂರ್ವ ನಿರ್ಧಾರಿತ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿ



ಮೈಸೂರು, ಅ.16– ಸಾರ್ವಜನಿಕ ಸ್ಥಳಗಳ ಬಳಕೆ ಸಂಬಂಧ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ವನ್ನು ಗುರಿಯಾಗಿಸಿಕೊಂಡು ನಿರೀಕ್ಷೆಯಂತೆಯೇ ರಾಜ್ಯದ ಕಾಂಗ್ರೆಸ್ ಸರ್ಕಾರ ನಿರ್ಧಾರ ಕೈಗೊಂಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಿಡಿಕಾರಿದ್ದಾರೆ.

ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಅವರು, ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿಯಂತ್ರಿಸುವುದೇ ತನ್ನ ಆದ್ಯತೆ ಎಂಬಂತೆ ಖಾಸಗಿ ಸಂಘ ಸಂಸ್ಥೆಗಳು ಹಾಗೂ ಸಂಘಟನೆಗಳು ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲು ಅನುಮತಿ ಕಡ್ಡಾಯಗೊಳಿಸುವ ನಿರ್ಧಾರವನ್ನು ಇಂದಿನ ಸಚಿವ ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗುವವರ ಮೇಲೆ ಈವರೆಗೂ ಯಾವ ಕ್ರಮಗಳನ್ನೂ ಜರುಗಿಸಲಿಲ್ಲ. ರಾಷ್ಟ್ರವಿದ್ರೋಹಿ ಚಟುವಟಿಕೆಗಳಲ್ಲಿ ತೊಡಗಿರುವ ಪಿಎಫ್‌ಐ, ಕೆಎಫ್‌ಡಿ, ಎಸ್‌ಡಿಪಿಐ ನಂತಹ ಸಂಘಟನೆಗಳನ್ನು ನಿಷೇಧಿಸುವ ಮಾತಿರಲಿ, ಅವುಗಳ ಚಟುವಟಿಕೆಗಳ ಮೇಲೆ ಕನಿಷ್ಠ ನಿಯಂತ್ರಣ ಸಾಧಿಸುವ ■ 6ನೇ ಪುಟಕ್ಕೆ

ಮೈಸೂರಲ್ಲಿ ನಿಮ್ಹಾನ್ಸ್ ಘಟಕಕ್ಕೆ ಅನುಮೋದನೆ


ಬೆಂಗಳೂರು, ಅ.16(ಕೆಎಂಶಿ)– ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಶಾಖೆಗಳನ್ನು 100 ಕೋಟಿ ರೂ. ವೆಚ್ಚದಲ್ಲಿ ಮೈಸೂರು ಹಾಗೂ ಕಲಬುರಗಿಯ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಆರಂಭಿಸಲು ಸಂಪುಟ ಅನುಮೋದನೆ ನೀಡಿದೆ.

ಜಯದೇವ ಹೃದ್ರೋಗ ಸಂಸ್ಥೆ ರಾಜ್ಯದ ವಿವಿಧ ಭಾಗಗಳಲ್ಲಿ ಶಾಖೆಗಳನ್ನು ತೆರೆದಿರುವ ಮಾದರಿಯಲ್ಲೇ ನಿಮ್ಹಾನ್ಸ್ ಶಾಖೆಗಳನ್ನು ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದೆ. ನರ ರೋಗ, ಮಾನಸಿಕ ಖಾಯಿಲೆಗಳು ಹಾಗೂ ಅಪಘಾತದಲ್ಲಿ ತಲೆಗೆ ಪೆಟ್ಟು ಬಿದ್ದವರು ಬೆಂಗಳೂರಿನ ನಿಮ್ಹಾನ್ಸ್‌ನಲ್ಲೇ ಚಿಕಿತ್ಸೆ ಪಡೆಯಬೇಕಿತ್ತು. ಬೆಂಗಳೂರು ನಿಮ್ಹಾನ್ಸ್ ಆಸ್ಪತ್ರೆ ಮೇಲೆ ಒತ್ತಡ ಹೆಚ್ಚಿರುವುದು ಹಾಗೂ ಸ್ಥಳೀಯವಾಗಿಯೇ ರೋಗಿಗಳಿಗೆ ಚಿಕಿತ್ಸೆ ದೊರೆಯಬೇಕೆಂಬ ಉದ್ದೇಶದಿಂದ ತಲಾ 50 ಕೋಟಿ ರೂ. ವೆಚ್ಚದಲ್ಲಿ ಶಾಖೆಗಳನ್ನು ತೆರೆಯಲು ಸಂಪುಟ ಸಮ್ಮತಿಸಿದೆ. ಸಂಜಯ ಗಾಂಧಿ ಅಪಘಾತ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ ನೂತನ ವ್ಯಾಸ್ಕ್ಯುಲರ್ ಶಸ್ತ್ರ ಚಿಕಿತ್ಸಾ ವಿಭಾಗವನ್ನು 26.09 ಕೋಟಿ ರೂ. ಅಂದಾಜು ಮೊತ್ತದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ. ವಿಜಯಪುರ ಜಿಲ್ಲಾಸ್ಪತ್ರೆ ಆವರಣದಲ್ಲಿ 100 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಪ್ರಾರಂಭಿಸಲು ಸಮ್ಮತಿಸಿದೆ. ■ 6ನೇ ಪುಟಕ್ಕೆ

ಕಾರ್ಯಾಚರಣೆ ವೇಳೆ ಹುಲಿ ದಾಳಿ; ರೈತನಿಗೆ ಮಾರಣಾಂತಿಕ ಗಾಯ

● ಗಾಯಾಳು ಸ್ಥಿತಿ ಚಿಂತಾಜನಕ ● ಮೈಸೂರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ

ಮೈಸೂರು, ಅ.16(ಎಂಟಿವೈ, ನಾಗೇಶ್)– ಅರಣ್ಯದಂಚಿನ ಜಮೀನಿನಲ್ಲಿ ಪ್ರತ್ಯಕ್ಷವಾಗುತ್ತಿದ್ದ ಹುಲಿಯೊಂದರ ಸೆರೆ ಕಾರ್ಯಾಚರಣೆ ವೇಳೆ ಘಾಸಿಗೊಂಡು ರೈತರೊಬ್ಬರ ಮೇಲೆ ದಾಳಿ ನಡೆಸಿ, ಗಂಭೀರವಾಗಿ ಗಾಯಗೊಳಿಸಿರುವ ಘಟನೆ ಜಿಲ್ಲೆಯ ಸರಗೂರು ತಾಲೂಕಿನ ಬಡಗಲಪುರ ಗ್ರಾಮದಲ್ಲಿ (ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ವಲಯ ವ್ಯಾಪ್ತಿಯ ಬಡಗಲಪುರ) ನಡೆದಿದೆ.


ಹುಲಿ ದಾಳಿಯಿಂದ ಮಾರಣಾಂತಿಕವಾಗಿ ಗಾಯಗೊಂಡ ಮಹದೇವ.

ಇದೇ ಗ್ರಾಮದ ನಿವಾಸಿ ಮಹದೇವ(48) ಹುಲಿ ದಾಳಿಯಿಂದ ಗಂಭೀರವಾಗಿ ಗಾಯಗೊಂಡವರು. ಪೊದೆಯೊಂದರಲ್ಲಿ ಅಡಗಿದ್ದ ಹುಲಿಗೆ ಕೆಲವರು ಕಲ್ಲಿನಿಂದ ಹೊಡೆದಾಗ ಅದು ರೊಚ್ಚಿಗೆದ್ದು ಜನರತ್ತ ನುಗ್ಗಿದ್ದು, ಎದುರಿಗೆ ಬಂದ ಮಹದೇವ ಅವರ ಮುಖಕ್ಕೆ ಪಂಜದಿಂದ(ಮುಂಗಾಲಿನಿಂದ) ಬಲವಾಗಿ ಬಡಿದು ಪರಾರಿಯಾಗಿದೆ. ಇದರಿಂದ ಆತನ ಮುಖ, ತಲೆ ಅಪ್ಪಚ್ಚಿಯಾಗಿ, ಎರಡೂ ಕಣ್ಣುಗಳಿಗೆ ಹಾನಿಯಾಗಿದೆ. ಕೂಡಲೇ ಗಾಯಾಳುವನ್ನು ಅರಣ್ಯ ಸಿಬ್ಬಂದಿ ಇಲಾಖಾ ವಾಹನದಲ್ಲಿ ಮೈಸೂರಿಗೆ ಕರೆತಂದು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಕೂಂಬಿಂಗ್ ಕಾರ್ಯಾಚರಣೆ: ಕಳೆದ ಮೂರ್‍ನಾಲ್ಕು ದಿನಗಳಿಂದ ಕಾಡಂಚಿನ ಜಮೀನಿನಲ್ಲಿ ಹುಲಿಯೊಂದು ಪ್ರತ್ಯಕ್ಷವಾಗಿತ್ತು. ಈ ಸಂಬಂಧ ಅರಣ್ಯ ಇಲಾಖೆಗೆ ಗ್ರಾಮಸ್ಥರು ಮಾಹಿತಿ ನೀಡಿದ್ದರು. ಇಂದು ಹುಲಿ ಸೆರೆಗೆ ಕಾರ್ಯಾಚರಣೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ದಸರಾ ಅಂಬಾರಿ ಆನೆ ಅಭಿಮನ್ಯು ಹಾಗೂ ಭಗೀರಥ ಆನೆಗಳನ್ನು ಕರೆತರಲಾಗಿತ್ತು. ಪೊದೆಯೊಂದರಲ್ಲಿ ಅಡಗಿದ್ದ ಹುಲಿಗೆ ಅರವಳಿಕೆ ಮದ್ದು ನೀಡಲು ಮುಂದಾದಾಗ ಸ್ಥಳದಿಂದ ಕಾಲ್ಕಿತ್ತ ಹುಲಿ, ಮತ್ತೊಂದು ಪೊದೆಯಲ್ಲಿ ಹೋಗಿ ಅಡಗಿತ್ತು. ಈ ವೇಳೆ ಉದ್ರಿಕ್ತರ ಕಲ್ಲೇಟಿನಿಂದ ಕೆರಳಿದ ಹುಲಿ ಜನರತ್ತ ನುಗ್ಗಿದೆ. ಎದುರಿಗೆ ಬಂದ ಮಹದೇವ ಅವರ ಮೇಲೆ ದಾಳಿ ನಡೆಸಿದೆ. ■ 6ನೇ ಪುಟಕ್ಕೆ

ಇಂದು ಮೈಸೂರಲ್ಲಿ ವಿಭಾಗ ಮಟ್ಟದ ಉದ್ಯೋಗ ಮೇಳ

● 221 ಕಂಪನಿಗಳು ಭಾಗಿ; 24 ಸಾವಿರ ಅಭ್ಯರ್ಥಿಗಳ ನೋಂದಣಿ ● ಮಹಾರಾಜ ಕಾಲೇಜು ಮೈದಾನದಲ್ಲಿ ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಆಯೋಜನೆ ● ಸ್ಥಳದಲ್ಲೂ ನೋಂದಣಿಗೆ ಅವಕಾಶ

ಮೈಸೂರು, ಅ.16(ಎಂಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಾಳೆ(ಅ.17) 'ಮೈಸೂರು ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳ (ಯುವ ಸಮೃದ್ಧಿ ಸಮ್ಮೇಳನ)' ನಡೆಯಲಿದ್ದು, 221 ಕಂಪನಿಗಳು ಭಾಗವಹಿಸಲಿವೆ.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮೈಸೂರು ನಗರಪಾಲಿಕೆ ಸಂಯುಕ್ತಾಶ್ರಯದಲ್ಲಿ ಈ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದ್ದು, 24 ಸಾವಿರ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ.


{ಪೂರ್ಣವರದಿ ಪುಟ 11ರಲ್ಲಿ}











ಮೈಸೂರು ಮಿತ್ರ ಶುಕ್ರವಾರ 17 ಅಕ್ಟೋಬರ್ 2025

ಯುವ ಜನರ ಭಾಗವಹಿಸುವಿಕೆಗೆ ಸರಕು ಸೇವಾ ತೆರಿಗೆ ಸುಧಾರಣೆ ಉತ್ತಮ ಸಾಧನ

ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಶೃತಿ





ಮೈಸೂರು ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸರಕು ಮತ್ತು ಸೇವಾ ತೆರಿಗೆ ಸುಧಾರಣೆಗಳು (GST 2.0) ಕುರಿತು ವಿಶೇಷ ಉಪನ್ಯಾಸ ಆಯೋಜಿಸಲಾಗಿತ್ತು.

ಮೈಸೂರು,ಅ.16–ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಸರಕು ಮತ್ತು ಸೇವಾ ತೆರಿಗೆ ಸುಧಾರಣೆಗಳು (GST 2.0) ವಿಷಯ ಕುರಿತು ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಟೆರೆಷಿಯನ್ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಶೃತಿ ಮಾತನಾಡಿ, ಸೆಪ್ಟೆಂಬರ್ 2025ರಲ್ಲಿ ಪರಿಚಯಿಸಲಾದ ಸರಕು ಮತ್ತು ಸೇವಾ ತೆರಿಗೆ ಸುಧಾರಣೆಗಳು ಭಾರತದ ಯುವ ಜನರ ಆಕಾಂಕ್ಷೆಗಳನ್ನು ಉತ್ತಮವಾಗಿ ಪೂರೈಸಲು ಭಾರತದ ತೆರಿಗೆ ವ್ಯವಸ್ಥೆಯನ್ನು ಪುನರ್ ರೂಪಿಸುವಲ್ಲಿ ಒಂದು ಹೊಸ ಹೆಜ್ಜೆಯನ್ನು ಇಟ್ಟಿದೆ. ತೆರಿಗೆ ರಚನೆಗಳನ್ನು ಸರಳೀಕರಿಸುವ ಮೂಲಕ ಪ್ರಮುಖ ಕೈಗಾರಿಕೆಗಳಲ್ಲಿ ತೆರಿಗೆ ದರಗಳನ್ನು ಕಡಿತಗೊಳಿಸುವ ಮೂಲಕ ಮತ್ತು ದೀರ್ಘಕಾಲೀನ ವೈಪರೀತ್ಯಗಳನ್ನು ಪರಿಹರಿಸುವ ಮೂಲಕ ಉದ್ಯಮಶೀಲತೆ, ಉದ್ಯೋಗಸೃಷ್ಟಿ ಹಾಗೂ ಕೈಗೆಟಕುವ ಜೀವನಕ್ಕೆ ದಾರಿ ಮಾಡಿಕೊಡುವ ವಾತಾವರಣವನ್ನು ಸೃಷ್ಟಿಸಲು ರೂಪಿತವಾಗಿದೆ ಎಂದರು.

ವಿಶೇಷವಾಗಿ ಶಿಕ್ಷಣ, ಆರೋಗ್ಯ, ಆಟೋಮೊಬೈಲ್, ತಂತ್ರಜ್ಞಾನ, ಕರಕುಶಲ ವಸ್ತುಗಳು, ಪಾದರಕ್ಷೆಗಳು, ಚರ್ಮೋದ್ಯಮ, ಆಹಾರ ಸಂಸ್ಕರಣೆ ಮತ್ತು ಜವಳಿಯಂತಹ ಕ್ಷೇತ್ರಗಳಿಗೆ ಯುವ ಜನರ ಭಾಗವಹಿಸುವಿಕೆಯನ್ನು ಮತ್ತು ಅದರಲ್ಲಿನ ವೆಚ್ಚಗಳನ್ನು ಕಡಿಮೆ ಮಾಡಿ ಸ್ಪರ್ಧೆಯನ್ನು ಉತ್ತೇಜಿಸುವ ಹಾಗೂ ನಾವಿನ್ಯತೆಯನ್ನು ಹೆಚ್ಚಿಸಲು ಆದ್ಯತೆ ನೀಡಿದೆ. ಇದರಿಂದ ಮುಂದಿನ ಪೀಳಿಗೆಯ ಸಮಗ್ರ ಬೆಳವಣಿಗೆ, ಸುಸ್ಥಿರತೆ ಮತ್ತು ಸಬಲೀಕರಣದ ದೃಷ್ಟಿಕೋನವನ್ನು ಬಲಪಡಿಸುತ್ತದೆ ಎಂದರು. ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಅರ್ಥಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ಪುಷ್ಪರಾಣಿ, ಸಿದ್ದಪ್ಪ, ಚಲುವೇಗೌಡ, ವಾಣಿಜ್ಯಶಾಸ್ತ್ರದ ಪ್ರಾಧ್ಯಾಪಕಿ ದಿವ್ಯಾ ಹಾಗೂ ಇನ್ನಿತರರು ಹಾಜರಿದ್ದರು.

ಇಂದು ಸ್ತನ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ


ಮೈಸೂರು, ಅ. 16– ಅ.17ರಂದು ಜೆಎಸ್‌ಎಸ್ ರೇಡಿಯೋ 91.2 ಎಫ್.ಎಂ. ಬಾನುಲಿ ಕೇಂದ್ರದಿಂದ ಸ್ತನ ಕ್ಯಾನ್ಸರ್ ಜಾಗೃತಿ ಕುರಿತು ಆರೋಗ್ಯ ಮಂಥನ, ವೈದ್ಯರೊಂದಿಗಿನ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.



ಕಾರ್ಯಕ್ರಮದಲ್ಲಿ ಮೈಸೂರಿನ ಕೆ.ಆರ್. ಆಸ್ಪತ್ರೆಯ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞ ಡಾ.ಎಂ.ಶ್ರೀನಿಧಿ ಭಾಗವಹಿಸಲಿದ್ದು, ಕೇಳುಗರ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ. ಸಾರ್ವಜನಿಕರು ಸ್ತನ ಕ್ಯಾನ್ಸರ್ ಎಂದರೇನು, ಸ್ತನ ಕ್ಯಾನ್ಸರ್‌ನ ರೋಗ ಲಕ್ಷಣಗಳು, ಕಾರಣಗಳು, ಪರೀಕ್ಷೆ ಗಳ ವಿಧಾನಗಳು, ಚಿಕಿತ್ಸೆಗಳು ಹಾಗೂ ಸ್ತನ ಕ್ಯಾನ್ಸರ್ ಬರದಂತೆ ವಹಿಸಬಹುದಾದ ಮುಂಜಾಗ್ರತಾ ಕ್ರಮಗಳ ಕುರಿತು ಯಾವುದೇ ಪ್ರಶ್ನೆಗಳು ಅಥವಾ ಅನುಮಾನಗಳು ಇದ್ದಲ್ಲಿ ಕರೆಮಾಡಿ ನೇರವಾಗಿ ತಜ್ಞ ವೈದ್ಯರ ಜೊತೆ ಮಾತನಾಡಬಹುದು. ನೀವು ಕರೆ ಮಾಡಬಹುದಾದ ನಿಲಯದ ದೂರವಾಣಿ ಸಂಖ್ಯೆ: 8296725912.

ಜೆಎಸ್‌ಎಸ್ ರೇಡಿಯೋವನ್ನು ಪ್ಲೇಸ್ಟೋರ್ ನಲ್ಲಿ ಲಭ್ಯವಿರುವ ಜೆಎಸ್‌ಎಸ್ ರೇಡಿಯೋ ಆ್ಯಪ್ ಮೂಲಕವೂ ವಿಶ್ವದ ಯಾವುದೇ ಮೂಲೆಯಲ್ಲಾದರು ಆಲಿಸಬಹುದು.

ಸಿಂಧ್ಯಾರಿಗೆ ಅಭಿನಂದನೆ



ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಅವರನ್ನು ಅವರ ಹುಟ್ಟುಹಬ್ಬದ ವೇಳೆ ಮೈಸೂರಲ್ಲಿ ನಡೆದ ಸಮಾರಂಭದಲ್ಲಿ ಮಾಜಿ ಉಪಮೇಯರ್ ಪುಷ್ಪವಲ್ಲಿ, ಅನುರಾಜ್, ಹರೀಶ್, ರಾಜ್ಯ ಎಲ್‌ಪಿಜಿ ಡಿಸ್ಟ್ರಿಬ್ಯೂಟರ್ ಅಧ್ಯಕ್ಷ ಮೆಹುಲ್ ಪಟೇಲ್, ನಾಗನಹಳ್ಳಿ ಗ್ರಾಪಂ ಸದಸ್ಯ ಶಂಕರ್, ದಯಾನಂದ್ ಸನ್ಮಾನಿಸಿದರು.

ದೆಹಲಿ ಹೈಕೋರ್ಟ್ ವರ್ಚುವಲ್ ವಿಚಾರಣೆ ವೇಳೆ ಮಹಿಳೆಗೆ ಚುಂಬಿಸಿದ ವಕೀಲ

ನವದೆಹಲಿ: ಕೋರ್ಟ್ ವರ್ಚುವಲ್ ವಿಚಾರಣೆ ವೇಳೆ ವಕೀಲರೊಬ್ಬರು ಮಹಿಳೆಯೊಬ್ಬರಿಗೆ ಚುಂಬಿಸಿರುವ ವಿಡಿಯೋವೊಂದು ವ್ಯಾಪಕ ವೈರಲ್ ಆಗುತ್ತಿದೆ.

ವರ್ಚುವಲ್ ವಿಚಾರಣೆಗೂ ಕೆಲ ಕ್ಷಣಗಳ ಮುನ್ನ ವಕೀಲರೊಬ್ಬರು ಮಹಿಳೆಗೆ ಚುಂಬಿಸುತ್ತಿರುವುದು ವಿಡಿಯೋದಲ್ಲಿ ದಾಖಲಾಗಿದೆ. ಮೂಲಗಳ ಪ್ರಕಾರ ಈ ಘಟನೆ ಮಂಗಳವಾರ ನಡೆದಿರುವುದಾಗಿ ವರದಿಯಾಗಿದೆ. ಈ ವರ್ತನೆ ವೇಳೆ ನ್ಯಾಯಾಲಯದ ವರ್ಚುವಲ್ ವಿಚಾರಣೆ ಇನ್ನೂ ಆರಂಭವಾಗಿರಲಿಲ್ಲ ಎಂದು ಹೇಳಲಾಗಿದೆ. ಜನರು ಮತ್ತು ವಾದ ಪ್ರತಿವಾದಿಗಳು ನ್ಯಾಯಾಧೀಶರ ಆಗಮನಕ್ಕಾಗಿ ಕಾಯುತ್ತಿದ್ದರು. ಈ ವೇಳೆ ವಕೀಲರು ನ್ಯಾಯಾಲಯದ ಸಮವಸ್ತ್ರ ಧರಿಸಿ ತಮ್ಮ ಕೋಣೆಯಲ್ಲಿ ಕುಳಿತಿದ್ದರು. ಇದೇ ವೇಳೆ ಅವರ ಸಮೀಪಕ್ಕೆ ಸೀರೆಯುಟ್ಟ ಮಹಿಳೆ ಬರುತ್ತಿದ್ದಂತೆಯೇ ವಕೀಲರು ಮಹಿಳೆ ಕೈ ಹಿಡಿದು ಎಳೆದುಕೊಂಡು ಚುಂಬಿಸುತ್ತಾರೆ.

ನಿಧನ

ಚೇರಂಡ ಮೀನಾ

ಮೈಸೂರು, ಅ. 16– ಮೈಸೂರಿನ ವಿಜಯನಗರ ಎರಡನೇ ಹಂತದ ನಿವಾಸಿ ದಿವಂಗತ ಜಯಕುಮಾರ್ ಅವರ ಪತ್ನಿ ಚೇರಂಡ ಮೀನಾ (71) ಬುಧವಾರ ನಿಧನರಾದರು. ಮೃತರು ಮಕ್ಕಳಾದ ಸೂರಜ್, ಮಲ್ಲಂಗಡ ರೋಷನ್ ಕುಟ್ಟಪ್ಪ ಮತ್ತು ಇಟ್ಟೀರಾ ಪ್ರಿಯಾ ಚೇತನ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ಗುರುವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಲಕ್ಷ್ಮಣ್

ಮೈಸೂರಿನ ಗುಂಡೂರಾವ್‌ನಗರದ ನಿವಾಸಿ ಹಾಗೂ ಸಿವಿಲ್ ಕಂಟ್ರಾಕ್ಟರ್ ಲಕ್ಷ್ಮಣ್ (73) ಅನಾರೋಗ್ಯದಿಂದ ಮಂಗಳವಾರ ನಿಧನರಾದರು. ಮೃತರು ಪತ್ನಿ ಲೀಲಾವತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಬುಧವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಾಂತಕುಮಾರ್

ಮೈಸೂರು: ಮೈಸೂರಿನ ಜಯನಗರ (ಬೂದಿಗುಂಡಿ)ದ ನಿವಾಸಿ, ಕೆಎಸ್‌ಆರ್‌ಟಿಸಿ ನಿವೃತ್ತ ಅಧಿಕಾರಿ ಎಸ್.ಶಾಂತಕುಮಾರ್(78) ಗುರುವಾರ ಮಧ್ಯಾಹ್ನ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.



ದಿವಂಗತರು ಪತ್ನಿ ರಾಧಮ್ಮ, ಪುತ್ರರಾದ ವೆಂಕಟೇಶ್, ಮಂಜುನಾಥ್, ಚಂದ್ರಶೇಖರ್, ಸೊಸೆಯಂದಿರು, ಮೊಮ್ಮಕ್ಕಳು, ಸಹೋದರರು, ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶುಕ್ರವಾರ(ಅ.17)ಬೆಳಗ್ಗೆ 11 ಗಂಟೆಗೆ ಅರವಿಂದ ನಗರದಲ್ಲಿರುವ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಯುವ ಸಮೂಹ ಬಲಿ ಪಡೆಯುತ್ತಿರುವ ಸೈಬರ್ ಅಪರಾಧ, ಗಾಂಜಾ

ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ ವಿಷಾದ



ಮೈಸೂರು ವಿಶ್ವವಿದ್ಯಾಲಯವು ಸೆನೆಟ್ ಭವನದಲ್ಲಿ ಗುರುವಾರ ಆಯೋಜಿಸಿದ್ದ ಪ್ರಥಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಭಿವಿನ್ಯಾಸ ಕಾರ್ಯಕ್ರಮವನ್ನು ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಎಸ್.ಎಲ್. ಚನ್ನಬಸವಣ್ಣ ಉದ್ಘಾಟಿಸಿದರು.

ಮೈಸೂರು,ಅ.16(ಜಿಎ)–ಸೈಬರ್ ಅಪರಾಧ ಮತ್ತು ಗಾಂಜಾ ಸರಬರಾಜು ಮೂಲಕ ಯುವ ಸಮೂಹವನ್ನು ಬಲಿ ಪಡೆಯುವ ತಂತ್ರಗಳು ನಡೆಯುತ್ತಿದ್ದು, ಮುನ್ನೆಚ್ಚರಿಕೆಯಿದ್ದಾಗ ಇವುಗಳಿಂದ ದೂರವಿರಲು ಸಾಧ್ಯ ಎಂದು ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಎಸ್.ಎಲ್. ಚನ್ನಬಸವಣ್ಣ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾಲಯವು ಸೆನೆಟ್ ಭವನದಲ್ಲಿ ಗುರುವಾರ ಆಯೋಜಿಸಿದ್ದ ಪ್ರಥಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಭಿವಿನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪೊಲೀಸ್ ವಿದ್ಯಾರ್ಥಿಗಳ ನಡುವಿನ ಸಂವಾದವು ಜವಾಬ್ದಾರಿಯುತ ನಾಗರಿಕನ ಕರ್ತವ್ಯಗಳ ವಿಮರ್ಶೆಯಿಂದ ಕೂಡಿರಬೇಕು ಎಂದರು.

ನಾವು ಡಿಜಿಟಲ್ ಸೃಷ್ಟಿಕರ್ತರಲ್ಲ, ಬದಲಾಗಿ ಬಳಕೆದಾರರಾಗಿದ್ದೇವೆ. ಮೊಬೈಲ್ ಆ್ಯಪ್‌ಗಳಿಗೆ ನೀಡುವ ಮಾಹಿತಿಗಳು ಸೋರಿಕೆಯಾಗುತ್ತಿದೆ. ಇದೇ ಕಾರಣದಿಂದ ಈಚೆಗೆ ಟೆಕ್ನಾಲಜಿ ಬಳಸಿಕೊಂಡು ಮಾಡುವ ಅಪರಾಧಗಳು ಹೆಚ್ಚಿವೆ. ಹೀಗಾಗಿ ವಿದ್ಯಾರ್ಥಿಗಳು ಸಾಮಾಜಿಕ ಮಾಧ್ಯಮ ಬಳಸುವಾಗ ಎಚ್ಚರ ವಹಿಸಿ ಎಂದು ಸಲಹೆ ನೀಡಿದರು.

ಇಂಟರ್‌ನೆಟ್‌ಗೆ ಜೋಡಿಸಿಕೊಂಡಿರುವ ಎಲ್ಲಾ ಸಾಧನಗಳನ್ನು ಹ್ಯಾಕ್ ಮಾಡಬಹುದು. ಆ ಮೂಲಕ ವಿವಿಧ ರೀತಿಯಲ್ಲಿ ನಮ್ಮನ್ನು ವಂಚಿಸುವ ಪ್ರಯತ್ನಗಳು ನಡೆಯುತ್ತಿರುತ್ತವೆ. ವಿದ್ಯಾವಂತರೇ ಈ ರೀತಿಯ ಬಲೆಗೆ ಬೀಳುತ್ತಿದ್ದಾರೆ. ವಂಚನೆಗೊಳಗಾಗಿ ಅಪಾಯದಿಂದ ಹೊರಬರಲಾರದೆ ಸಾಯುತ್ತಿರುವವರ ಸಂಖ್ಯೆ ಹೆಚ್ಚಿದೆ ಎಂದು ಆತಂಕ ವ್ಯಕ್ತಪಡಿಸಿದರು.

ನೆರೆ ರಾಷ್ಟ್ರಗಳು ನಾರ್ಕೋಟಿಕ್ ಡ್ರಗ್ಸ್ ಮೂಲಕ ಭಯೋತ್ಪಾದನೆ ನಡೆಸುತ್ತಿದೆ. ಇದು ಯುವ ಜನರನ್ನು ನಿಧಾನವಾಗಿ ಬಲಿ ಪಡೆಯುತ್ತಿದ್ದು, ಅವುಗಳಿಂದ ದೂರವಿರಬೇಕು. ಅದರೊಂದಿಗೆ ಸ್ನೇಹಿತರಲ್ಲೂ ಜಾಗೃತಿ ಮೂಡಿಸಬೇಕು. ಅಪರಿಚಿತ ಕರೆ ಬಂದಾಗ ಮಾತೃಭಾಷೆಯಲ್ಲಿ ಮಾತನಾಡಿದರೆ ವಂಚನೆಯಿಂದ ದೂರವಿರಬಹುದು. ಆ್ಯಪ್ ಪಾಸ್‌ವರ್ಡ್‌ಗಳನ್ನು ಗೂಗಲ್‌ನಲ್ಲಿ ನಮೂದಿಸಬೇಡಿ ಎಂದರು.

ಕುಲಸಚಿವೆ ಎಂ.ಕೆ.ಸವಿತಾ ಮಾತನಾಡಿ, ಇದು ಸ್ಪರ್ಧಾತ್ಮಕ ಕಾಲವಾಗಿದ್ದು, ಆಸಕ್ತಿಯಿಂದ ಓದಿದರೆ ಮಾತ್ರ ಯಶಸ್ಸು ದೊರೆಯುತ್ತದೆ. ವಿದ್ಯಾರ್ಥಿಗಳು ಕೌಶಲದ ಬೆಳವಣಿಗೆಗೆ ಐಚ್ಛಿಕ ವಿಷಯಗಳ ಜೊತೆಗೆ ಬಹುಶಿಸ್ತಿನ ಅಧ್ಯಯನಕ್ಕೂ ಮಹತ್ವ ನೀಡಿದರೆ ಭವಿಷ್ಯದಲ್ಲಿ ಉದ್ಯೋಗ ಪಡೆಯುವಲ್ಲಿ ಸಹಕಾರಿಯಾಗಲಿದೆ. ನಮ್ಮ ವಿವಿಯಲ್ಲಿ ಸಿಗುವಂತಹ ಎಲ್ಲಾ ಸೌಲಭ್ಯಗಳ ಪ್ರಯೋಜನ ಪಡೆದು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಿ ಎಂದು ತಿಳಿಸಿದರು.

ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಯೋಗಕ್ಕೆ ಸೇರಬೇಕಾದರೆ ಕೌಶಲವನ್ನು ರೂಢಿಸಿಕೊಳ್ಳಬೇಕು. ಅದರಲ್ಲೂ ಸಂಪರ್ಕ ಕೌಶಲ ಇರಬೇಕು. ಕೌಶಲ ರೂಢಿಸಿಕೊಳ್ಳುವ ಮೂಲಕ ಜ್ಞಾನ ವೃದ್ಧಿಸಿಕೊಳ್ಳಬೇಕು. ಜೀವನದಲ್ಲಿ ಯಶಸ್ಸು ಕಾಣಬೇಕಾದರೆ ಅನಗತ್ಯ ಚಟುವಟಿಕೆಗೆ ಕಡಿವಾಣ ಹಾಕಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್, ಕುಲಸಚಿವೆ ಎಂ.ಕೆ. ಸವಿತಾ, ಕೌಶಲಾಭಿವೃದ್ಧಿ ತರಬೇತುದಾರೆ ದೇವಿಪ್ರಭಾ ಆಳ್ವ, ಕೆ.ಎನ್.ಅಮೃತೇಶ್, ಎಸ್.ಟಿ.ರಾಮಚಂದ್ರ ಉಪಸ್ಥಿತರಿದ್ದರು.

ಹೆಚ್.ಡಿ.ಕೋಟೆ, ಸರಗೂರು ತಾಲೂಕು ಕಾಡಂಚಿನ ಜನರ ಹಕ್ಕುಪತ್ರದ ಸಮಸ್ಯೆ ನಿವಾರಿಸಿ

ಕ್ರಮ ವಹಿಸಲು ಅಧಿಕಾರಿಗಳಿಗೆ ಶಾಸಕ ಅನಿಲ್ ಚಿಕ್ಕಮಾದು ಸೂಚನೆ



ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಭೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಕಾಡಂಚಿನ ಜನರ ಸಮಸ್ಯೆ ಆಲಿಸಿದರು. ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ, ಜಿಪಂ ಸಿಇಓ ಯುಕೇಶ್‌ಕುಮಾರ್ ಇನ್ನಿತರರಿದ್ದಾರೆ.

ಮೈಸೂರು,ಅ.16(ಜಿಎ)–ಹೆಚ್.ಡಿ. ಕೋಟೆ ಹಾಗೂ ಸರಗೂರು ತಾಲೂಕಿನ ಕಾಡಂಚಿನಲ್ಲಿ ವಾಸವಾಗಿರುವ ಸಾರ್ವಜನಿಕರ ತೊಂದರೆಗಳನ್ನು ನಿವಾರಿಸಲು ಅಧಿಕಾರಿಗಳು ಕ್ರಮ ವಹಿಸಿ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಭೆಯಲ್ಲಿ ಮಾತನಾಡಿದ ಅವರು, ಅರಣ್ಯ ಭಾಗದಲ್ಲಿ ವಾಸವಾಗಿದ್ದ ಕೆಲವರಿಗೆ ಸರ್ಕಾರದ ವತಿಯಿಂದ ಮನೆ ನಿರ್ಮಾಣ ಮಾಡಿಕೊಡಲಾಗಿದೆ. ಆದರೆ ಅವರ ಬಳಿ ಹಕ್ಕುಪತ್ರ ಇಲ್ಲ. ಇಂತಹ ಸಮಸ್ಯೆಗಳನ್ನು ಪರಿಹರಿಸಿ ಎಂದರು.

ಡಿ.ಬಿ.ಕುಪ್ಪೆಯಲ್ಲಿ 376 ಜನರಿಗೆ ಜಮೀನಿನ ಹಕ್ಕು ಪತ್ರ ನೀಡಲು ದಾಖಲೆಗಳನ್ನು ಪರಿಶೀಲಿಸಲಾಗಿದೆ. ತಿರಸ್ಕೃತಗೊಂಡಿರುವ 90 ಹಕ್ಕು ಪತ್ರಗಳನ್ನು ಮರು ಪರಿಶೀಲಿಸಿ ಅದರಲ್ಲಿ ಅರ್ಹರಿದ್ದಲ್ಲಿ ಹಕ್ಕುಪತ್ರ ನೀಡಿ ಎಂದು ಸೂಚಿಸಿ, ಈ ಹಿಂದೆ ನೀಡಲಾಗಿರುವ ಕೆಲವು ಹಕ್ಕು ಪತ್ರಗಳಲ್ಲಿ ಅವರ ಮಕ್ಕಳ ಹೆಸರು ನಮೂದಿಸಿರುವುದಿಲ್ಲ.ಇದರಿಂದ ಮಕ್ಕಳು ಹಕ್ಕು ಪಡೆಯಲು ಸಮಸ್ಯೆಯಾಗುತ್ತಿದ್ದು, ಸರಿಪಡಿಸಬೇಕಿದೆ ಎಂದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಮಾತನಾಡಿ, ಹೆಚ್.ಡಿ.ಕೋಟೆ ತಾಲೂಕಿನ ಹರಿಹರಪುರ ಗ್ರಾಮದ ಸರ್ವೆ ನಂ.3ರ 530 ಎಕರೆ ಭೂಮಿಯಲ್ಲಿ 370 ಎಕರೆ ಅರಣ್ಯ ಇಲಾಖೆ ವ್ಯಾಪ್ತಿಗೆ ಸೇರಿದ್ದು, ಉಳಿದಿರುವ 160 ಎಕರೆಯಲ್ಲಿ ಈಗಾಗಲೇ ಮಂಜೂರು ಮಾಡಿ ಉಳಿದಿರುವ 30 ಎಕರೆ ಭೂಮಿಯನ್ನು ಮಂಜೂರು ಮಾಡಲು ಕ್ರಮ ವಹಿಸಿ ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಯುಕೇಶ್ ಕುಮಾರ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಲೋಡಿಂಗ್–ಅನ್‌ಲೋಡಿಂಗ್ ಕೂಲಿ ಹೆಚ್ಚಳಕ್ಕೆ ನ.3ರ ಗಡುವು

ತಪ್ಪಿದರೆ ಅನಿರ್ದಿಷ್ಟಾವಧಿ ಮುಷ್ಕರ

ಮೈಸೂರು,ಅ.16(ಎಂಟಿವೈ)– ಆಹಾರ ಇಲಾಖೆ ಗೋದಾಮುಗಳಲ್ಲಿ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸ ಮಾಡುವವರಿಗೆ ಪ್ರತಿ ವರ್ಷ ಕೂಲಿ ಹೆಚ್ಚಳ ಮಾಡುವುದರೊಂದಿಗೆ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕಾರ್ಮಿಕರ ಒಕ್ಕೂಟದ ಅಧ್ಯಕ್ಷ ವರದ ರಾಜೇಂದ್ರ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆ ಅನ್ವಯ ಟೆಂಡರ್ ಹೊರತುಪಡಿಸಿ ಪ್ರತಿ ವರ್ಷವೂ ಕೂಲಿ ಹೆಚ್ಚಳಕ್ಕೆ ನಿಯಮ ರೂಪಿಸಬೇಕು. ಪ್ರಸ್ತುತ ಟೆಂಡರ್ ಜಾರಿಯಾಗಿರುವ ತಾಲೂಕುಗಳಲ್ಲಿ ಕ್ವಿಂಟಾಲ್‌ಗೆ 23.62 ರೂ. ಕೂಲಿ ನೀಡಲಾಗುತ್ತಿದೆ. ಕೆಲವೆಡೆ ಕ್ವಿಂಟಾಲ್‌ಗೆ 10.92 ರೂ. ನೀಡುತ್ತಿದ್ದು, ಈ ತಾರತಮ್ಯ ನಿಲ್ಲಬೇಕು. 2015ರ ಟೆಂಡರ್ ನಿಯಮಾವಳಿಯಲ್ಲಿ ಜಾರಿಗೆ ಬಂದ ಇಎಸ್‌ಐ ಮತ್ತು ಇಪಿಎಫ್ ಪೂರ್ಣ ಪ್ರಮಾಣದಲ್ಲಿ ಕಾರ್ಮಿಕರಿಗೆ ದೊರೆತಿಲ್ಲ. ಕೂಲಿ ಮಾಡುವ ಕಾರ್ಮಿಕರಿಗೆ ಭದ್ರತೆ ಒದಗಿಸಲು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ ಅಕ್ಕಿ ನೀಡುವುದರೊಂದಿಗೆ ಇಂದಿರಾಕಿಟ್ ಯೋಜನೆ ತಂದಿರುವುದನ್ನು ಸ್ವಾಗತಿಸುತ್ತೇವೆ. ಆದರೆ ನೇರವಾಗಿ ನ್ಯಾಯಬೆಲೆ ಅಂಗಡಿಗೆ ಸರಬರಾಜು ಮಾಡುವ ಉದ್ದೇಶ ನಮ್ಮ ದುಡಿಮೆಯನ್ನು ಹಾಳು ಮಾಡಲಿದೆ. ಲೋಡಿಂಗ್ ಮತ್ತು ಅನ್‌ಲೋಡಿಂಗ್‌ಗೆ ಪ್ರತ್ಯೇಕ ದರವನ್ನೂ ನಿಗದಿ ಮಾಡಬೇಕು. ಅನ್ನಭಾಗ್ಯ ಅಕ್ಕಿ ಪ್ರಮಾಣವನ್ನು ಕಡಿತ ಮಾಡಬಾರದು. ತ್ವರಿತವಾಗಿ ಸಮಾನ ಕೂಲಿ ಹೆಚ್ಚಳ ಮಾಡದಿದ್ದರೆ ನ.3ರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಜಿಲ್ಲಾ ಘಟಕದ ಅಧ್ಯಕ್ಷ ಕರಿನಾಯಕ, ಉಪಾಧ್ಯಕ್ಷ ನರಸಿಂಹಮೂರ್ತಿ, ಸದಸ್ಯ ವಿಕ್ರಮ್, ಎಚ್.ನಾಗರಾಜು, ರಾಜಪ್ಪ ಇದ್ದರು.

ಡಾ.ಕೆ.ಎನ್.ಅಮೃತೇಶ್‌ಗೆ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಫೆಲೋಷಿಪ್



ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಮತ್ತು ನಿಕಟಪೂರ್ವ ಅಧ್ಯಕ್ಷರು ಹಾಗೂ ಪ್ರಸ್ತುತ ಆಂತರಿಕ ಗುಣಮಟ್ಟ ಖಾತರಿ ಘಟಕದ ನಿರ್ದೇಶಕ ಡಾ.ಕೆ.ಎನ್. ಅಮೃತೇಶ್ ಅವರು 2025ರ ಸಾಲಿನ ಪ್ರತಿಷ್ಠಿತ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಫೆಲೋಷಿಪ್‌ನ ಗೌರವಕ್ಕೆ ಪಾತ್ರರಾಗಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.10.2025 ಶುಕ್ರವಾರ, ಮಳೆ ನಕ್ಷತ್ರ: ಚಿತ್ತ 11.10.2025 ರಿಂದ 23.10.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಮೂಲವ್ಯಾದಿ/ಪೈಲ್ಸ್, ಲಕ್ವ/ಪ್ಯಾರಾಲಿಸಿಸ್, ಮೈಗ್ರೇನ್ ಹಾಗೂ ಎಲ್ಲಾ ಪ್ರಕಾರದ ತಲೆನೋವುಗಳು ಮತ್ತು ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
- **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಯೂನಿವರ್ಸಿಟಿ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಸ್ಮರಣಾರ್ಥ ಪುರುಷರ ಬ್ಯಾಸ್ಕೆಟ್‌ಬಾಲ್ ಮತ್ತು ಮಹಿಳೆಯರ ಥ್ರೋಬಾಲ್ ಪಂದ್ಯಾವಳಿ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಮಹಾವಿದ್ಯಾಪೀಠ ನಿರ್ದೇಶಕ ಕೆ.ಆರ್. ಸಂತಾನಂ, ಅಧ್ಯಕ್ಷತೆ: ಜೆಎಸ್‌ಎಸ್ ವಿವಿ ಕುಲಪತಿ ಡಾ. ಎ.ಎನ್. ಸಂತೋಷ್ ಕುಮಾರ್, ಪ್ರಿನ್ಸಿಪಾಲ್ ಡಾ. ಸಿ. ನಟರಾಜು, ಕುಲಸಚಿವ ಪ್ರೊ. ಎಸ್.ಎ. ಧನರಾಜ್, ಸ್ಥಳ: ಎಸ್‌ಜೆಸಿಇ ಬ್ಯಾಸ್ಕೆಟ್‌ಬಾಲ್ ಕೋರ್ಟ್, ಬೆಳಗ್ಗೆ 9.30ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಮಕ್ಕಳಲ್ಲಿ ಕಂಡು ಬರುವ ಸೆರೆಬ್ರಲ್ ಪಾಲ್ಸಿ (ಮಾಂಸ ಖಂಡಗಳ ದೌರ್ಬಲ್ಯ, ನಿಲ್ಲಲು ಹಾಗೂ ನಡೆದಾಡಲು ಸಾಧ್ಯವಾಗದಿರುವುದು, ಕುಂಠಿತ ಬೆಳವಣಿಗೆ), ವಯಸ್ಕರಲ್ಲಿ ಕಂಡು ಬರುವ ಸಂಧಿ ನೋವು, ಮಂಡಿ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಶ್ರೀ ಕಾವೇರಿ ಪ್ರಥಮ ದರ್ಜೆ ಕಾಲೇಜು, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ :** ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ, ಮುಖ್ಯ ಅತಿಥಿಗಳು : ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ, ಡಾ.ಮಹಮ್ಮದ್ ಶಿರಾಜ್ ಅಹಮದ್, ಶ್ರೀಮತಿ ಬಿ.ಸವಿತಾ, ಶ್ರೀಮತಿ ಕೆ.ಎಂ. ಪದ್ಮಾವತಿ, ಡಾ.ಸಿ.ಇ.ಸುಬ್ರಹ್ಮಣ್ಯ, ವಿಕ್ರಂ ಅಯ್ಯಂಗಾರ್, ಎಸ್.ಇ. ಗಿರೀಶ್, ಲಯನ್ ಸಿ.ಜಿ. ಮುತ್ತಣ್ಣ, ಸ್ಥಳ: ಶ್ರೀ ಕಾವೇರಿ ಪ್ರಥಮ ದರ್ಜೆ ಕಾಲೇಜು, ಆದಿಚುಂಚನಗಿರಿ ರಸ್ತೆ, ಬೆಳಗ್ಗೆ 10ಕ್ಕೆ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.
- **ರುದ್ರಾಕ್ಷಿ ಸಂಸ್ಥೆ :** ದೀಪಾವಳಿ ಪ್ರಯುಕ್ತ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸಿಪಾಯಿ ಗ್ರಾಂಡ್, ಜೆಎಸ್‌ಎಸ್ ಆಸ್ಪತ್ರೆ ಎದುರು, ಬೆಳಗ್ಗೆ 10.30 ರಿಂದ.
- **ಮೈಸೂರಿನ ಮಹಾರಾಣಿ ಕಲಾ ಕಾಲೇಜು ಮತ್ತು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಎನ್‌ಐಇ) :** 'ಸೈಬರ್ ಸುರಕ್ಷತೆ ಮತ್ತು ಫಿಶಿಂಗ್ ದಾಳಿಗಳ ಕುರಿತು 'ಸಾಮಾಜಿಕ ಜಾಗೃತಿ: ಸವಾಲುಗಳು ಮತ್ತು ತಡೆಗಟ್ಟುವ ತಂತ್ರ' ಕುರಿತ ರಾಷ್ಟ್ರೀಯ ಸಮ್ಮೇಳನ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಸೈನ್ಸ್ ಅಂಡ್ ಟೆಕ್ನಾಲಜಿ ವಿವಿಯ ಪ್ರೊ.ಕೆ.ಎಂ.ಅನಿಲ್‌ಕುಮಾರ್, ಶಾಸಕ ಕೆ.ಹರೀಶ್‌ಗೌಡ, ಮಹಾರಾಣಿ ಕಾಲೇಜು ಅಭಿವೃದ್ಧಿ ಪರಿಷತ್ತಿನ ಅಧ್ಯಕ್ಷೆ ಮತ್ತು ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಡಾ.ಡಿ.ಎಸ್.ಪ್ರತಿಮಾ, ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಎಸ್.ಅನಿತ, ಎನ್‌ಐಇ ಕಾಲೇಜಿನ ಪ್ರಾಂಶುಪಾಲರಾದ ಡಾ.ರೋಹಿಣಿ ನಾಗಪದ್ಮ, ಡೀನ್ ಡಾ.ಸಿ.ವಿದ್ಯಾರಾಜ್, ಸ್ಥಳ: ಮಹಾರಾಣಿ ಕಲಾ ಕಾಲೇಜಿನ ಜಯಲಕ್ಷ್ಮಮ್ಮಣ್ಣಿ ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಜೆಎಸ್‌ಎಸ್ ಮಹಾವಿದ್ಯಾಪೀಠ :** ಸಂಸ್ಕೃತೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಕರ್ನಾಟಕ ಸಂಸ್ಕೃತ ವಿವಿ ಕುಲಸಚಿವ ಪ್ರೊ. ವಿ. ಗಿರೀಶ್ ಚಂದ್ರ, ಉದ್ಘಾಟನೆ: ಶಾಸಕ ಟಿ.ಎಸ್. ಶ್ರೀವತ್ಸ, ಸನ್ಮಾನಿತರು : ಸಂಸ್ಕೃತ ವಿದ್ವಾಂಸ ಡಾ.ಎಚ್.ವಿ. ನಾಗರಾಜರಾವ್, ಜ್ಯೋತಿಷ್ಯ ವಿದ್ವಾಂಸ ಡಾ. ಕೆ.ಜಿ. ಪುಟ್ಟಹೊನ್ನಯ್ಯ, ಆಗಮ ವಿದ್ವಾಂಸ ಪ್ರೊ. ಎಂ. ಮಲ್ಲಣ್ಣ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.
- **ಸಾಧನ ಮಂದಿರ :** ಸರಸ್ವತಿ ಪೂಜಾ, ಸಂಜೆ 4.45 ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ; ರಾತ್ರಿ 6 ರಿಂದ ಶ್ರೀ ಕೃಷ್ಣಮಂದಿರ, ಗೋಕುಲಂ 3ನೇ ಹಂತ; ರಾತ್ರಿ 7 ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.
- **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಕಲ್ಪ ಹೆರಿಟೇಜ್ ಟ್ರಸ್ಟ್ :** ಯುಗ ಪುರುಷ ಬಸವಣ್ಣ ಕುರಿತು ಸಾಕ್ಷ್ಯಚಿತ್ರ ಪ್ರದರ್ಶನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸ್ಥಳ: ಸಿಲ್ವರ್ ಜ್ಯೂಬಿಲಿ ಹಾಲ್, ಜೆಎಸ್‌ಎಸ್ ಕಾನೂನು ಕಾಲೇಜು, ಕುವೆಂಪುನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಂಬಯ್ಯನುಲಿ, ಸದಾಶಿವ ಪಾಟೀಲ್ ಹಾಗೂ ಟಿ.ಎಸ್. ಸ್ನೇಹಾ, ವ್ಯಾಖ್ಯಾನ–ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ವರ್ಲ್ಡ್ ಮೆನೊಪಾಸ್ ಡೇ ಸಂದರ್ಭದಲ್ಲಿ ಮೆನೊಪಾಸ್ ಅಥವಾ ಋತುಬಂಧ ಕುರಿತು ತಿಳಿಸಿಕೊಡುತ್ತಾರೆ ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಸೀನಿಯರ್ ಕನ್ಸಲ್ಟಂಟ್ ಗೈನಕಾಲಜಿಸ್ಟ್ ಡಾ. ಸವಿತಾ ರಾಥೋಡ್ ನಾಯಕ್. ಇವರೊಂದಿಗೆ ಭಾಗವಹಿಸುತ್ತಾರೆ ಡಾ.ಕುಲದೀಪ್ ಎನ್. ನಂತರ ನವಜಾತ ಶಿಶು ಹಾಗೂ ಮಕ್ಕಳಲ್ಲಿ ಹರ್ನಿಯಾ ಮತ್ತು ಅದರ ಸಂಬಂಧದ ತೊಂದರೆ ಕುರಿತು ಡಾ. ಪ್ರಶಾಂತ್ ಕುಮಾರ್ ಎಂ.ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ದಿಗ್ವಿಜಯ್ .ಬಿ, 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ. ಪ್ರಸ್ತುತಿ: ಜಿ.ಎನ್.ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, ಭಾಷಣ –ಮಕ್ಕಳ ಪೋಷಣೆಯಲ್ಲಿ ತಂದೆ–ತಾಯಿಯ ಪಾತ್ರ, ಮಾತನಾಡುತ್ತಾರೆ ಮೈಸೂರಿನ ಗಾಯತ್ರಿ ಚಂದ್ರಶೇಖರ್, 4.30 ಪ್ರಾಯೋಜಿತ ಕಾರ್ಯಕ್ರಮ– ಆಧುನಿಕ ಕೃಷಿ ಚಾವಡಿ ವಿಜ್ಞಾನಿಗಳಿಂದ ಕೃಷಿಕರವರೆಗೆ, 6.50 ಕೃಷಿರಂಗ, ಹಲೋ ಕೃಷಿರಂಗ, ಪ್ರಾಯೋಜಿತ ನೇರ ಫೋನ್ –ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ–ಕಾಫಿ ತೋಟದಲ್ಲಿ ಮಣ್ಣಿನ ಆರೋಗ್ಯ ಮತ್ತು ವೈಜ್ಞಾನಿಕ ಪೋಷಕಾಂಶ ನಿರ್ವಹಣೆ ಮಹತ್ವ ಭಾಗವಹಿಸುತ್ತಾರೆ ಕೊಡಗು ಜಿಲ್ಲೆ ಚಟ್ಟಳ್ಳಿಯ ಕಾಫಿ ಸಂಶೋಧನಾ ಉಪ ಕೇಂದ್ರದ ಡಾ. ಸಯ್ಯದ್ ಸಾಹೇಬ್ ನದಾಫ್, ಪರಾಗ, ಬೇಸಾಯದ ಬದುಕು ಸರಾಗ, 7.45 ಕನ್ನಡದಲ್ಲಿ ಭಾಷಣ, 8.00 ರಸಮಂಜರಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಜನಪದ ಸಂಗೀತ, 10.30 ಸವಿನೆನಪು

ದೈವಾರಾಧನೆ ನೆಪದಲ್ಲಿ ಹುಚ್ಚಾಟ ಆಡಬೇಡಿ

ಕಾಂತಾರಾ ಸಿನಿಮಾ ಹೀರೋ ರಿಷಬ್ ಶೆಟ್ಟಿ ಮನವಿ

- ಚಾಮುಂಡೇಶ್ವರಿ, ನಂಜುಂಡೇಶ್ವರನ ದರ್ಶನ ಪಡೆದ ರಿಷಬ್ ಶೆಟ್ಟಿ
- ದೈವಾರಾಧನೆ ಶಿಸ್ತು ಇದೆ ಎಂಬುದನ್ನು ಮರೆಯದಿರಿ
- ದೈವಕ್ಕೂ ನನಗೂ ಸಂಬಂಧವಿದೆ
- ನನ್ನ ಮುಂದಿನ ಸಿನಿಮಾ 'ಜೈ ಹನುಮಾನ್'



ಕಾಂತಾರ ಚಿತ್ರ ನಾಯಕ ರಿಷಬ್ ಶೆಟ್ಟಿ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದರು.

ಮೈಸೂರು, ಅ.16(ಬಿಎಲ್‌ಯು)– ಥಿಯೇಟರ್‌ಗಳಲ್ಲಿ ದೈವ ಆರಾಧನೆ ನೆಪದಲ್ಲಿ ಹುಚ್ಚಾಟ ಮಾಡಬೇಡಿ, ದೈವಾರಾಧನೆಗೆ ಒಂದು ಕ್ರಮವಿರುತ್ತದೆ. ದೈವಾರಾಧನೆ ಒಂದು ಶಿಸ್ತು ಬದ್ಧ ಕ್ರಮ ಎಂಬುದನ್ನು ಮರೆಯಬೇಡಿ ಎಂದು ಕಾಂತಾರ ಸಿನಿಮಾ ನಾಯಕ ಡಿವೈನ್ ಸ್ಟಾರ್ ರಿಷಬ್ ಶೆಟ್ಟಿ ಸಲಹೆ ನೀಡಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಇಂದು ನಾಡದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ದೈವಾರಾಧನೆ ಮಾಡುವ ನೆಪದಲ್ಲಿ ಮಿತಿದಾಟಬೇಡಿ ಎಂದು ತಾಕೀತು ಮಾಡಿದರು.

ಕಾಂತಾರ 1 ಕೂಡ ಯಶಸ್ವಿಯಾಗಿದ್ದು, ನಮ್ಮ ತಂಡದ ಶ್ರಮವನ್ನು ಜನರು ಒಪ್ಪಿದ್ದಾರೆ. ಈ ಸಿನಿಮಾದ ಯಶಸ್ಸು ಜನರಿಗೆ ಸಲ್ಲಬೇಕು. ದೈವ ಆಶೀರ್ವಾದ ಇರುವುದರಿಂದ ಕೂಡ ಸಿನಿಮಾ ಯಶಸ್ವಿಯಾಗಿದೆ ಎಂದು ರಿಷಬ್ ಶೆಟ್ಟಿ ಹೇಳಿದರು. ನಾನು ದೈವವನ್ನು ನಂಬುತ್ತೇನೆ. ಜೊತೆಗೆ ಆರಾಧನೆ ಮಾಡುತ್ತೇನೆ. ದೈವಕ್ಕೂ ನನಗೂ ಒಂದು ಸಂಬಂಧವಿದೆ. ಈ ಸಿನಿಮಾದಲ್ಲಿ ದೈವವನ್ನು ತೋರಿಸುವಾಗ ಹಿರಿಯರ ಆಶೀರ್ವಾದ ಪಡೆದಿದ್ದೇನೆ ಎಂದು ತಿಳಿಸಿದರು.

ನಾನು ಸಣ್ಣ ಊರಿನಿಂದ ಬಂದವನು. ಕರ್ನಾಟಕದಿಂದ ವಿಶ್ವದಾದ್ಯಾಂತ ನಮ್ಮ ಸಿನಿಮಾವನ್ನು ಜನರು ಇಷ್ಟಪಟ್ಟಿದ್ದಾರೆ. ಇದು ಇಡೀ ಚಿತ್ರರಂಗಕ್ಕೆ ಒಳ್ಳೆಯ ಬೆಳವಣಿಗೆ. ಇದರಿಂದ ನಾನು ಮತ್ತಷ್ಟು ಸಾಧನೆ ಮಾಡಲು ಶಕ್ತಿ ದೊರೆತಂತಾಗಿದೆ ಎಂದು ಅಭಿಪ್ರಾಯಪಟ್ಟರು.

'ಜೈ ಹನುಮಾನ್' ಎಂಬ ಶೀರ್ಷಿಕೆಯಲ್ಲಿ ಮುಂದಿನ ಸಿನಿಮಾ ಮಾಡುತ್ತಿದ್ದೇನೆ ಎಂದು ಇದೇ ವೇಳೆ ರಿಷಬ್ ಶೆಟ್ಟಿ ತಿಳಿಸಿದರು.

ನಾನು ಅಮಿತಾಭ್ ಬಚ್ಚನ್ ಅವರನ್ನು ಭೇಟಿ ಮಾಡಿದ್ದೆ. ಆ ವೇಳೆ ಅವರು ಅಣ್ಣಾವ್ರ ಬಗ್ಗೆ ಬಹಳಷ್ಟು ವಿಚಾರ ಹಂಚಿಕೊಂಡರು. ಅಂತಹ ಲೆಜೆಂಡ್ ಭೇಟಿ ಮಾಡಿರುವುದು ಸಂತೋಷ ತಂದುಕೊಟ್ಟಿದೆ. ಒಟ್ಟಾರೆ ಎಲ್ಲಾ ಸಿನಿಮಾ ನೋಡಿ, ಹಾಗೆಯೇ ಕನ್ನಡ ಸಿನಿಮಾ ಗೆಲ್ಲಿಸಿ ಎಂದು ರಿಷಬ್ ಶೆಟ್ಟಿ ಮನವಿ ಮಾಡಿಕೊಂಡರು.

ನಂಜನಗೂಡು: ರಿಷಬ್ ಶೆಟ್ಟಿ ದಕ್ಷಿಣ ಕಾಶಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಅಲ್ಲಿನ ಶ್ರೀಕಂಠೇಶ್ವರಸ್ವಾಮಿ, ಪಾರ್ವತಿ ದೇವಿ, ಚಂಡಿಕೇಶ್ವರ, ನಾರಾಯಣ ಸ್ವಾಮಿ ಗುಡಿಯಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು, ದೇವಾಲಯ ಬಹಳ ಅದ್ಭುತವಾಗಿದೆ. ಇಲ್ಲಿಗೆ ಬಂದಿದ್ದು ನನ್ನ ಪುಣ್ಯ. ಎಲ್ಲರಿಗೂ ಒಳ್ಳೆಯದಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇನೆ ಎಂದ ಅವರು, ನಂಜನಗೂಡು ಜನತೆಯ ಪ್ರೀತಿ, ವಿಶ್ವಾಸಕ್ಕೆ ಚಿರಋಣಿ. ಮುಂದಿನ ದಿನಗಳಲ್ಲಿ ಕುಟುಂಬ ಸಮೇತರಾಗಿ ಆಗಮಿಸಿ ಸ್ವಾಮಿ ದರ್ಶನ ಪಡೆಯುತ್ತೇವೆ ಎಂದರು.

ಇದೇ ವೇಳೆ ನೆಚ್ಚಿನ ನಟನ ಜೊತೆ ಸೆಲ್ಫಿಗಾಗಿ ಅಭಿಮಾನಿಗಳು ಮುಗಿಬಿದ್ದರು. ಸೆಲ್ಫಿಗೆ ಎಲ್ಲರಿಗೂ ಸಹಕರಿಸಿದ ನಟ ರಿಷಬ್ ಶೆಟ್ಟಿ ಅಭಿಮಾನಿಗಳಿಗೆ ಕೈ ಬೀಸಿ ತೆರಳಿದರು.

ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ನಿಂದನೆ ಪ್ರಕರಣ

ಲಕ್ಷ್ಮಣ್‌ಗೆ ಜಾಮೀನು ಮಂಜೂರು



ಬೆಂಗಳೂರು, ಅ.16(ಬಿಎಲ್‌ಯು)– ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಅವರು ತಮ್ಮ ವಿರುದ್ಧ ನಿಂದನೆ ಮಾಡಿದ್ದಾರೆಂದು ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಸಲ್ಲಿಸಿದ್ದ ದೂರಿನ ಸಂಬಂಧ ವಿಚಾರಣೆ ನಡೆಸಿದ ಬೆಂಗಳೂರಿನ 37 ನೇ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಲಕ್ಷ್ಮಣ ಅವರಿಗೆ ಜಾಮೀನು ಮಂಜೂರು ಮಾಡಿದೆ.

ನಗದು ಶೂರಿಟಿ ಆಧಾರದ ಮೇಲೆ ತಮ್ಮ ಕಕ್ಷಿದಾರನಿಗೆ ಜಾಮೀನು ನೀಡುವಂತೆ ಲಕ್ಷ್ಮಣ್ ಪರ ವಕೀಲರು ನ್ಯಾಯಾಲಯಕ್ಕೆ ಮನವಿ ಮಾಡಿದರು.

ನ್ಯಾಯಾಲಯ 25 ಸಾವಿರ ಮೊತ್ತದ ಪಿಬಿ ಜೊತೆಗೆ 3 ಸಾವಿರದ ನಗದು ಶೂರಿಟಿ ಆಧಾರದ ಮೇಲೆ ಲಕ್ಷ್ಮಣ್‌ಗೆ ಜಾಮೀನು ಮಂಜೂರು ಮಾಡಿದೆ.

ಈ ವೇಳೆ ಲಕ್ಷ್ಮಣ್ ಅವರಿಗೆ ಕೆಲವು ಷರತ್ತು ವಿಧಿಸಿರುವ ನ್ಯಾಯಾಲಯ, ವಿಚಾರಣೆ ವೇಳೆ ನ್ಯಾಯಾಲಯದ ಮುಂದೆ ಹಾಜರಿರಬೇಕು. ಸಾಕ್ಷ್ಯಗಳಿಗೆ ಬೆದರಿಕೆ ಹಾಕಬಾರದು, ಯಾವುದೇ ಅಪರಾಧ ಕೃತ್ಯದಲ್ಲಿ ಭಾಗಿಯಾಗಬಾರದು ಎಂದು ತಾಕೀತು ಮಾಡಿದೆ.

ತಮ್ಮನ್ನು ನಿಂದನೆ ಮಾಡಿದ್ದಾರೆಂದು ಇದೇ ನ್ಯಾಯಾಲಯದಲ್ಲಿ ಪ್ರತಾಪ್ ಸಿಂಹ ಅವರು ಕರ್ನಾಟಕ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ವಿರುದ್ಧ ದೂರು ಸಲ್ಲಿಸಿದ್ದರು.

ಈ ಸಂಬಂಧ ಮುಂದಿನ ವಿಚಾರಣೆ ವೇಳೆ ನ್ಯಾಯಾಲಯದಲ್ಲಿ ಹಾಜರಾಗುವಂತೆ ಪುಷ್ಪಾ ಅಮರನಾಥ್ ಅವರಿಗೆ ನ್ಯಾಯಾಲಯ ಸಮನ್ಸ್ ಜಾರಿ ಮಾಡಿದೆ.

ಪದಾಧಿಕಾರಿಗಳ ಆಯ್ಕೆ

ಮೈಸೂರು, ಅ. 16– ಶ್ರೀ ಅಯ್ಯಪ್ಪಸ್ವಾಮಿ ಹಾಗೂ ಶ್ರೀ ಗುರುವಾಯೂರಪ್ಪನ್ ದೇವಸ್ಥಾನದ ಪದಾಧಿಕಾರಿಗಳಾಗಿ ಜಿ. ಶ್ರೀನಿವಾಸ–ಅಧ್ಯಕ್ಷರು, ಆರ್. ಹರಿದಾಸ್–ಕಾರ್ಯದರ್ಶಿ, ಕೆ.ಎನ್. ಬಸವಾರಾಧ್ಯ–ಖಜಾಂಚಿ, ಕೆ.ಎಸ್.ವಿರೂಪಾಕ್ಷ, ಬಾಲಸುಬ್ರಹ್ಮಣ್ಯ–ಉಪಾಧ್ಯಕ್ಷರು, ಎ.ಎಸ್. ಅಪ್ಪು, ಬಿ.ಎಲ್. ಶಂಕರ್–ಜಂಟಿ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿದ್ದಾರೆ.

ನಮ್ಮನ್ನು ನೋಡಲಿಕ್ಕೆ ನೀವು ಬರಬಹುದು... ನಿಮ್ಮನ್ನ ನೋಡಲಿಕ್ಕೆ ನಾವು ಬರಬಾರದ...

- ಸಿನಿಮಾ ಡೈಲಾಗ್ ಮೂಲಕವೇ ಪ್ರೇಕ್ಷಕ–ಅಭಿಮಾನಿಗಳ ಚಿತ್ ಮಾಡಿದ ಕಾಂತಾರ–1 ನಟ, ನಿರ್ದೇಶಕ ರಿಷಬ್ ಶೆಟ್ಟಿ
- ಮೈಸೂರಿನ ಗಾಯತ್ರಿ ಚಿತ್ರಮಂದಿರದಲ್ಲಿ ಪ್ರೇಕ್ಷಕರ ನಡುವೆ ಸಂಭ್ರಮ



ಅಭಿಮಾನಿಗಳತ್ತ ಕೈ ಬೀಸುತ್ತಿರುವ ನಟ ರಿಷಬ್ ಶೆಟ್ಟಿ.

ಮೈಸೂರು, ಅ.16(ವಿವಿಹೆಚ್)– "ನಮ್ಮನ್ನು ನೋಡಲಿಕ್ಕೆ ನೀವು ಬರಬಹುದು.. ನಿಮ್ಮನ್ನು ನೋಡಲಿಕ್ಕೆ ನಾವು ಬರಬಾರದ..." ಗಾಯತ್ರಿ ಚಿತ್ರಮಂದಿರದಲ್ಲಿ ಅಪಾರ ಪ್ರೇಕ್ಷಕ ಬಂಧುಗಳ ಕುರಿತು ತುಂಬು ಹೃದಯದ ಪ್ರೀತಿಯಿಂದ ಡಿವೈನ್ ಸ್ಟಾರ್ ರಿಷಬ್ ಶೆಟ್ಟಿ ಹೇಳಿದ ಮಾತುಗಳಿವು...

ಕಾಂತಾರ– ಚಾಪ್ಟರ್ 1 ಚಿತ್ರದ ಯಶಸ್ಸಿಗೆ ಕಾರಣರಾದ ಪ್ರೇಕ್ಷಕ ಅಭಿಮಾನಿ ಬಂಧುಗಳಿಗೆ ಕೃತಜ್ಞತೆ ಸಲ್ಲಿಸುವ ಸಲುವಾಗಿ ಮೈಸೂರಿನ ಗಾಯತ್ರಿ ಚಿತ್ರಮಂದಿರಕ್ಕೆ ಗುರುವಾರ ಭೇಟಿ ನೀಡಿದ್ದ ನಟ, ನಿರ್ದೇಶಕ ರಿಷಬ್ ಶೆಟ್ಟಿ ತಮ್ಮದೆ ಚಿತ್ರದ ಡೈಲಾಗ್ ಹೊಡೆದು ಅಭಿಮಾನಿಗಳತ್ತ ಕೈಬೀಸಿದರು. ರಿಷಬ್ ಡೈಲಾಗ್‌ಗೆ ನೆರೆದಿದ್ದವರೆಲ್ಲಾ ಶಿಳ್ಳೆ, ಚಪ್ಪಾಳೆಗಳ ಮೂಲಕ ಹರ್ಷೋದ್ಗಾರಗೈದರು.

ಈ ವೇಳೆ ಅಭಿಮಾನಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಕಾಂತಾರ ಯಶಸ್ಸಿಗೆ ಅಭಿಮಾನಿಗಳು, ಪ್ರೇಕ್ಷಕರೇ ಕಾರಣ. ದೈವದ ಅನುಮತಿ ಪಡೆದ ನಂತರವೇ ಚಿತ್ರ ಮಾಡಿದ್ದೇನೆ. ನಿಮ್ಮೆಲರ ಆಶೀರ್ವಾದದಿಂದ ಚಿತ್ರ ಗೆದ್ದಿದೆ. ಮೈಸೂರಲ್ಲಿ ಕಾಂತಾರ ಸಕ್ಸಸ್ ಪಾರ್ಟಿ ಮಾಡುತ್ತಿರುವುದು ಸಂತಸ ತಂದಿದೆ. ಇಲ್ಲಿನ ಜನತೆ ತುಂಬಾ ಪ್ರೀತಿ ಕೊಟ್ಟಿದ್ದಾರೆ. ಮೈಸೂರು ಚಾಮುಂಡೇಶ್ವರಿ ದೇವಿಯ ಆಶೀರ್ವಾದ ಪಡೆದು ಬಂದಿದ್ದೇನೆ. ಇದರ ಜೊತೆಗೆ ನಿಮ್ಮೆಲ್ಲರ ಪ್ರೀತಿ ಮತ್ತು ಅಭಿಮಾನ ಹೀಗೆ ಇರಲಿ ಎಂದು ಮನವಿ ಮಾಡಿದರು.

ಸಿನಿಮಾ ಕೊನೆಯಲ್ಲಿ ಸ್ತ್ರೀ ಶಕ್ತಿ ಬಗ್ಗೆ ತೋರಿಸಲಾಗಿದ್ದು, ಚಿತ್ರದ ಗೆಲುವಿಗೆ ಆಶೀರ್ವದಿಸಿದ ಎಲ್ಲಾ ತಾಯಂದಿರಿಗೂ ನನ್ನ ಕೃತಜ್ಞತೆಗಳು. ಇದೊಂದು ಋಣ ತೀರಿಸುವ ಕೆಲಸವಾಗಿದ್ದು, ಮುಂದಿನ ದಿನಗಳಲ್ಲಿಯೂ ಇನ್ನೂ ಉತ್ತಮ ಕಥೆ ಹೇಳುವ ಕೆಲಸ ಮಾಡುತ್ತೇನೆ. ಇದಕ್ಕೆ ನಿಮ್ಮ ಬೆಂಬಲವಿರಲಿ ಎಂದರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ಮೈಸೂರು ಜನರು ಒಳ್ಳೆಯ ಸಿನಿಮಾಗಳು ಬಂದಾಗ ಬಹುದೊಡ್ಡ ಬೆಂಬಲ ಸೂಚಿಸಿದ್ದಾರೆ. ಸಿನಿಮಾ ಜನರಿಗೆ ಇಷ್ಟ ಆಗಬೇಕು ಎಂಬುದೇ ನಮ್ಮ ಮೂಲ ಉದ್ದೇಶ. ಈ ಹಿನ್ನೆಯೆಲ್ಲಿಯೇ ಕೆಲಸ ಮಾಡಿದ್ದು, ಅಭಿಮಾನಿಗಳಿಗೆ ಇಷ್ಟವಾಗಿದೆ. ಹೀಗಾಗಿ ಕಾಂತಾರ ಚಾಪ್ಟರ್–2 ಸಿನಿಮಾ ಅಪ್‌ಡೇಟ್ ಬಗ್ಗೆ ಪ್ರೇಕ್ಷಕರು ಕೇಳುತ್ತಿದ್ದಾರೆ ಎಂದು ತಿಳಿಸಿದರು.

ದೈವವನ್ನು ನಮ್ಮ ಮನೆಯಲ್ಲಿಯೂ ಪೂಜೆ ಮಾಡುತ್ತೇನೆ. ಚಿತ್ರದಲ್ಲಿ ಎಲ್ಲಿಯೂ ದೈವವನ್ನು ತಪ್ಪಾಗಿ ಬಿಂಬಿಸಿಲ್ಲ. ಹಿರಿಯರು ಮತ್ತು ದೈವಾರಾಧಕರ ಸಲಹೆ ಮೇರೆಗೆ, ದೈವದ ಅನುಮತಿ ಪಡೆದು ಚಿತ್ರ ಮಾಡಿದ್ದೇನೆ. ಯಾರ ನಂಬಿಕೆಯನ್ನು ಸಿನಿಮಾಕ್ಕಾಗಿ ಬಳಸಿಕೊಂಡಿಲ್ಲ. ದೈವದ ವಿಚಾರದಲ್ಲಿ ಯಾವುದೇ ಚ್ಯುತಿ ಬಾರದಂತೆ ಮುಂದೆಯೂ ನೋಡಿಕೊಳ್ಳಲಾಗುವುದು ಎಂದರು.

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ನಾನು ಪತ್ನಿ ಎಂಬ ಕೆಲಸಕ್ಕೆ ರಾಜೀನಾಮೆ ನೀಡುತ್ತಿದ್ದೇನೆ.
ಗಂಡ : ಆಯ್ತು. ಮತ್ತೊಬ್ಬಳು ಬರುವವರೆಗೆ ನೀನು ಕೆಲಸ ಬಿಡಬಾರದು...

ಮೈಸೂರು ಮಿತ್ರ
ಶುಕ್ರವಾರ, 17 ಅಕ್ಟೋಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಪ್ರತಿ ಸಮಸ್ಯೆಯೂ ನಮಗೆ ಜೀವನದಲ್ಲಿ ಒಂದು ಕೊಡುಗೆಯಿದ್ದಂತೆ. ಏಕೆಂದರೆ ಸಮಸ್ಯೆಗಳಿಲ್ಲದೆ ನಾವು ಬೆಳೆಯಲಾರೆವು. – ಟೋನಿ ರಾಬಿನ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಾಲ್ಗಾರ ಸುಮ್ಮನಿದ್ರು ಸಾಕ್ಷಿಗಾರ ಸುಮ್ಮನಿರ.

ನಿಮ್ಮ ಪತ್ರಗಳು

ಸಿಎಂ ಸಿದ್ದರಾಮಯ್ಯರಲ್ಲಿ ಒಂದು ಮನವಿ

ಮಾನ್ಯರೆ,

ಮೈಸೂರಲ್ಲಿ ಕೆ.ಆರ್.ಮಾರುಕಟ್ಟೆ ಈಗಾಗಲೇ ಒಂದು ಭಾಗ ಬಿದ್ದಿದೆ. ಉಳಿದ ಭಾಗಗಳು ಯಾವಾಗ ಬೀಳುತ್ತವೋ ಗೊತ್ತಿಲ್ಲ. ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಬಿದ್ದು ಬಹಳ ವರ್ಷಗಳೇ ಆಯಿತು. ನಗರಪಾಲಿಕೆಗೆ ಆದಾಯ ಮೂಲವಾಗಿದ್ದ ಈ ಕಟ್ಟಡ ಕಳೆದ 10 ವರ್ಷಗಳಿಂದಲೂ ಹೊಸ ಕಟ್ಟಡವಾಗದೇ ನೆನೆಗುದಿಗೆ ಬಿದ್ದಿದೆ. ಇನ್ನು ಸರಸ್ವತಿಪುರಂ ಅಗ್ನಿಶಾಮಕ ದಳದ ಕಟ್ಟಡವು ಮುರಿದು ಬಿದ್ದಿದೆ. ಮೈಸೂರಿನ ಪ್ರಖ್ಯಾತ ವೈದ್ಯಕೀಯ ಕಾಲೇಜು ಬೀಳುವ ಸ್ಥಿತಿಯಲ್ಲಿದೆ. ಹೀಗೆ ಮೈಸೂರಲ್ಲಿ ಹಲವಾರು ಕಟ್ಟಡಗಳು ಬೀಳುವ ಸ್ಥಿತಿಯಲ್ಲಿವೆ. ನೀವು ರಾಜ್ಯದ ಮುಖ್ಯಮಂತ್ರಿಗಳು ನಿಮ್ಮದೇ ತವರು ಜಿಲ್ಲೆ ಅಲ್ಲದೆ ಮೈಸೂರಿಗೆ ಸಾಂಸ್ಕೃತಿಕ ರಾಜಧಾನಿ ಎಂಬ ಪಟ್ಟ ಬೇರೆ ಇಷ್ಟೆಲ್ಲಾ ಇದ್ದು, ಈ ಪಾರಂಪರಿಕ ಕಟ್ಟಡಗಳಿಗೆ ಮುಕ್ತಿ ಕಾಣಿಸಬೇಡವೇ. ಮುಖ್ಯಮಂತ್ರಿಗಳು ಮನಸ್ಸು ಮಾಡಿದರೆ ರಾಜ್ಯದ ಬೊಕ್ಕಸಕ್ಕೆ ಇದೇನು ಹೊರೆಯಾಗಲಾರದು. ತಮ್ಮ ಅವಧಿಯಲ್ಲಾದರೂ ಈ ಕಟ್ಟಡಗಳು ಆಗಲಿ ಎಂಬುದು ಮೈಸೂರಿಗರ ಆಗ್ರಹ. ಅಂತೆಯೇ ಈ ಕ್ಷೇತ್ರದ ಶಾಸಕರು ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಒತ್ತಡ ತಂದು ಈ ಕಟ್ಟಡಗಳ ನಿರ್ಮಾಣಕ್ಕೆ ಚಾಲನೆ ನೀಡುವಂತೆ ಒತ್ತಾಯಿಸುತ್ತೇವೆ.

–ಬಿ.ಜಿ.ರಂಗೇಗೌಡ, ವಿಜಯನಗರ 4ನೇ ಹಂತ, ಮೈಸೂರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘ ನಿಷೇಧಿಸುವ ಚಿಂತನೆ ಸರಿಯಲ್ಲ

ಮಾನ್ಯರೆ,

ನಮ್ಮ ರಾಜ್ಯದ ಉತ್ತರ ಭಾಗದಲ್ಲಿ ಅತೀ ಹೆಚ್ಚಿನ ಮಳೆಯು ಬಿದ್ದಿರುವ ಕಾರಣದಿಂದಾಗಿ ಅಲ್ಲಿನ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಸಹಸ್ರಾರು ಎಕರೆಯಲ್ಲಿ ಬೆಳೆದು ನಿಂತಿದ್ದ ಪೈರು ನೀರು ಪಾಲಾಗಿದೆ. ಸಹಸ್ರಾರು ಜಾನುವಾರುಗಳು ನೀರಿನಲ್ಲಿ ಕೊಚ್ಚಿ ಹೋಗಿವೆ. ನೂರಾರು ಮನೆಗಳು ಮಳೆಯ ಕಾರಣದಿಂದ ಬಿದ್ದು ಹೋಗಿದ್ದು ಜನರು ಬೀದಿಯಲ್ಲಿಂಯೇ ಜೀವಿಸುವಂತೆ ಆಗಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಮಂತ್ರಿ ಮಂಡಲ ಹಾಗೂ ಇತರೆ ಸದಸ್ಯರಿಗೆ ಔತಣಕೂಟವನ್ನು ಏರ್ಪಡಿಸಿ ಮೋಜು ಮಾಡುತ್ತಿದ್ದಾರೆ.

ಇದು ಯಾವ ಸಾಧನೆಗೋ ಜನತೆಗೆ ತಿಳಿಯುತ್ತಿಲ್ಲ. ಜನರ ಮನಸ್ಸನ್ನು ಬೇರೆಡೆ ತಿರುಗಿಸಲು ಈ ರೀತಿ ಮಾಡುತ್ತಿದ್ದಾರೆ ಎಂದು ಜನತೆಯ ಆರೋಪವಾಗಿದೆ. ಜನತೆಯ ಮನಸ್ಸನ್ನು ಹೇಗೆ ಬೇರೆ ಕಡೆಗೆ ತಿರುಗಿಸಿ ತಮ್ಮತ್ತ ಬರುತ್ತಿರುವ ಬಾಣದಿಂದ ತಪ್ಪಿಸಿಕೊಳ್ಳಬೇಕು ಎಂದು ಯೋಚಿಸುತ್ತಾ ಇರುವಾಗಲೇ ಸಚಿವ ಪ್ರಿಯಾಂಕ ಖರ್ಗೆಅವರು ತಮ್ಮ ತಂದೆಯವರಿಗೆ ಪತ್ರವೊಂದನ್ನು ಬರೆದು ಆರ್‌ಎಸ್‌ಎಸ್ ಅನ್ನು ಬ್ಯಾನ್ ಮಾಡುವಂತೆಯೂ, ಆ ಸಂಸ್ಥೆಯ ಚಟುವಟಿಕೆಗಳನ್ನು ನಿರ್ಬಂಧಿಸುವಂತೆಯೂ ಸಲಹೆಯನ್ನು ಕೊಟ್ಟಿದ್ದಾರೆ.

ಏಕೆ ಅವರಿಗೆ ಆರ್.ಎಸ್.ಎಸ್. ಒಂದು ದೇಶ ಪ್ರೇಮಿ ಸಂಘಟನೆಯಾಗಿದೆ ಎಂಬ ವಿಷಯವು ತಿಳಿದಿಲ್ಲವೇ? ಈ ಹೇಳಿಕೆಯು ಅವರ ಮೂರ್ಖತನವನ್ನೂ, ಭೌದ್ಧಿಕ ದಾರಿದ್ರ್ಯವನ್ನೂ, ಅವರ ಸಮಯ ಸಾಧಕತನವನ್ನೂ ಬಯಲಿಗೆಳೆದಿದೆ. ಅನೇಕ ಸಂದರ್ಭಗಳಲ್ಲಿ ನಮ್ಮ ದೇಶವು ಸಂಕಷ್ಟಗಳಿಗೆ ಸಿಲುಕಿದ್ದಾಗ ಆರ್.ಎಸ್.ಎಸ್. ಸಂಸ್ಥೆಯ ಕಾರ್ಯಕರ್ತರು ತಮ್ಮ ಜೀವದ ಹಂಗನ್ನು ತೊರೆದು ಹೋರಾಡಿದ್ದಾರೆ. ಹಿಂದೆ ಹಲವಾರು ಸಲ ಈ ಸಂಸ್ಥೆಯನ್ನು ಬ್ಯಾನ್ ಮಾಡಲು ಕಾಂಗ್ರೆಸ್ ಸರ್ಕಾರವು ಯೋಚಿಸಿದ್ದು, ಆರ್.ಎಸ್.ಎಸ್. ಬಗ್ಗೆ ಇರುವ ಜನತೆಯ ಪ್ರೀತಿ, ಆದರ ಇವುಗಳನ್ನು ಕಂಡು ಅಚ್ಚರಿಯನ್ನು ಪಡುತ್ತಿದೆಯಲ್ಲದೆ, ಅಸೂಯೆಯನ್ನೂ ತಾಳಿದೆ ಎಂಬುದು ಸ್ಪಷ್ಟ, ಸಿದ್ದರಾಮಯ್ಯನವರೇಕೋ ಮೌನವನ್ನು ವಹಿಸಿದ್ದಾರೆ. 'ಬಾಯ್ಬಿಟ್ಟರೆ ಬಣ್ಣಗೇಡು' ಎಂಬ ಗಾದೆಯಂತೆ ತಮ್ಮ ಸ್ಥಿತಿಯಾಗುತ್ತದೆ ಎಂಬುದು ಅವರಿಗೆ ಗೊತ್ತು.

–ಪ್ರಕಾಶ್ ಡಿ.ಎಸ್., ಹೊಸ ಬಂಡಿಕೇರಿ, ಮೈಸೂರು

ನಿಕಟಪೂರ್ವ ಪಾಲಿಕೆ ಸದಸ್ಯರಿಗೆ ಧನ್ಯವಾದಗಳು



ಮಾನ್ಯರೆ,

ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರ ಮನೆಯ ಬಳಿ, ವಿ.ವಿ. ಮೊಹಲ್ಲಾ, 4ನೇ ಮೇನ್ ಕೆಳಗೆ ರಸ್ತೆ ಹಾಳಾಗಿ ಮಣ್ಣಿನ ಕಂದಕವೊಂದು ನಿರ್ಮಾಣವಾಗಿತ್ತು. ರಾತ್ರಿಯ ವೇಳೆ ಅನೇಕ ದ್ವಿಚಕ್ರ ವಾಹನ ಚಾಲಕರು ಇದನ್ನು ಗುರುತಿಸದೇ ಬಿದ್ದು ಮೂಳೆ ಮುರಿದುಕೊಂಡು ಆಸ್ಪತ್ರೆಗೆ ಸೇರಿದ್ದುಂಟು. ಇದನ್ನು ಹಾಲಿ ನಿಕಟಪೂರ್ವ ಸದಸ್ಯರಾದ ಭಾಗ್ಯ ಮಹದೇಶ್ ಹಾಗೂ ವಾರ್ಡ್ ಉಸ್ತುವಾರಿ ಪುಟ್ಟಣ್ಣನವರ ಗಮನಕ್ಕೆ ತಂದಾಗ ತಕ್ಷಣ ಸ್ಪಂದಿಸಿ ನೂತನವಾಗಿ ರಸ್ತೆ ನಿರ್ಮಿಸಿ ಸಮಸ್ಯೆ ಬಗೆಹರಿಸಿದ್ದಾರೆ. ಇವರಿಗೆ ಧನ್ಯವಾದಗಳು.

–ಜಿ.ಪಿ.ರಾಜೇಶ್ ಮತ್ತು 19ನೇ ವಾರ್ಡಿನ ನಿವಾಸಿಗಳು, ಮೈಸೂರು.

ನಾಂದಿ–ಹಾದಿ!

ಮಾನ್ಯರೆ,
ಗಾಂಧಿ–
ಅದೊಂದು ಬರಿಯ ಬರಡು ಹೆಸರೆ?
ಜೀವಂತ ತತ್ತ್ವ, ಸತ್ವ;
'ನವ'ಯುಗಕ್ಕೆ ನಾಂದಿ!
(ಕ್ಷೇಮಕರ ಹಾದಿ ಕೂಡ)

ವಿದ್ಯಮಾನ: ದಿವಂಗತ ಮೊಗಳ್ಳಿ ಗಣೇಶ್ ಅವರ ಕೃತಿ ರಚನೆ ಎಷ್ಟು ವಿಫುಲ ಮತ್ತು ಮೌಲಿಕ! (ಅವರೊಂದು ವಿಶೇಷ ವಾಙ್ಮಯ ವಿದ್ಯಮಾನ).

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ದೈವತ್ವದ ಬಗ್ಗೆ ಹೆಚ್ಚು ಚರ್ಚೆ ಬೇಡ; ಆ ವಿಷಯ ಜನರ ಅನುಭವಕ್ಕೆ ಬಿಡೋಣ...

–ರಿಷಬ್ ಶೆಟ್ಟಿ

ರಿಷಬ್ ಶೆಟ್ಟಿ ನಿರ್ದೇಶಿಸಿ, ನಟಿಸಿರುವ 'ಕಾಂತಾರ ಚಾಪ್ಟರ್ 1' ಸಿನಿಮಾ ಜಗತ್ತಿನಾದ್ಯಂತ ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಹೊಂಬಾಳೆ ಫಿಲ್ಮ್ಸ್ ಬ್ಯಾನರ್‌ನಡಿ ನಿರ್ಮಾಣಗೊಂಡಿರುವ ಈ ಸಿನಿಮಾ, ಭಾರತೀಯ ಚಿತ್ರರಂಗಕ್ಕೆ ಕನ್ನಡದ ಮಹತ್ವದ ಕೊಡುಗೆ. ಸಿನಿಮಾ ರಂಗದಿಂದ ಪ್ರೇಕ್ಷಕ ಹಿಮ್ಮುಖರಾಗುತ್ತಿದ್ದಂತಹ ಸಂದರ್ಭದಲ್ಲಿ ರಿಷಬ್ ಅವರ ಚಿತ್ರಗಳು ಹೊಸ ಚೈತನ್ಯ ತಂದಿವೆ. ಮುಚ್ಚಿದ್ದ ಏಕಪರದೆ ಸಿನಿಮಾ ಮಂದಿರಗಳ ಬಾಗಿಲು ತೆರೆದಿವೆ. ವಿಜಯದಶಮಿಯಂದು(ಅ.2) ಬಿಡುಗಡೆಗೊಂಡು ವಿಜಯಪತಾಕೆ ಹಾರಿಸುತ್ತಿರುವ ಕಾಂತಾರಾದ ಹೀರೋ ರಿಶಬ್ ಶೆಟ್ಟಿ, ಗುರುವಾರ ಮೈಸೂರು ಪ್ರವಾಸದ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ತಮ್ಮ ಪರಿಶ್ರಮ–ಯಶಸ್ಸಿನ ಹಲವು ಮಹತ್ವದ ವಿಚಾರಗಳನ್ನು ಹಂಚಿಕೊಂಡಿದ್ದಾರೆ.



–ವೆಂಕಟನಾಗ್ ಸೋಬರ್ಸ್/ ಎಸ್.ಬಿ.ದೇವರಾಜ

ಮೈಸೂರು ಮಿತ್ರ: 'ಕಾಂತಾರ ಚಾಪ್ಟರ್ 1' ಸಿನಿಮಾ ಕುರಿತ ಪ್ರೇಕ್ಷಕರ ಪ್ರತಿಕ್ರಿಯೆ ಬಗ್ಗೆ ಏನು ಹೇಳುವಿರಿ?.

ರಿಷಬ್ ಶೆಟ್ಟಿ: ಸಿನಿಮಾ ಬಗ್ಗೆ ನಾವು ಮಾತನಾಡುವುದಕ್ಕಿಂತ ಜನ ಮಾತನಾಡಬೇಕು ಎಂದು ನಿರೀಕ್ಷಿಸುತ್ತೇವೆ. ಜನ ಮಾತನಾಡಿದರೆ ನಮ್ಮ ಕೆಲಸಕ್ಕೆ ನಿಜ ಯಶಸ್ಸು ಸಿಕ್ಕಿದೆ ಎಂದು ಭಾವಿಸುತ್ತೇವೆ. ಅದೇ ರೀತಿ ಜನ ಸಿನಿಮಾವನ್ನು ಬಹಳ ದೊಡ್ಡ ಮಟ್ಟಕ್ಕೆ ಪ್ರಶಂಸಿಸಿದ್ದಾರೆ. ಕಾಂತಾರ ಹಾಗೂ ಕಾಂತಾರ 1, ಎರಡೂ ಸಿನಿಮಾಗಳಿಗೂ ಬಹುದೊಡ್ಡ ಯಶಸ್ಸು ನೀಡಿದ್ದಾರೆ. ಮುಖ್ಯವಾಗಿ ಕನ್ನಡಿಗರ ಪ್ರೀತಿಯೇ ವಿಶೇಷ ಅನುಭವ. ನಮ್ಮ ಮಣ್ಣಿನ ಕತೆ, ನಮ್ಮ ಮಣ್ಣಿನ ಜನರಿಗೆ ಇಷ್ಟ ಆಗಬೇಕು, ನಮ್ಮ ನಾಡಲ್ಲಿ ಸಂಭ್ರಮಿಸಬೇಕು ಎಂಬ ಮಹದಾಸೆಯಿಂದ ಸಿನಿಮಾ ಮಾಡುತ್ತೇವೆ. ಈ ವಿಚಾರದಲ್ಲಿ ತುಂಬಾ ಖುಷಿ ಇದೆ.

ಮೈಸೂರು ಮಿತ್ರ: 'ಕಾಂತಾರ ಚಾಪ್ಟರ್ 1' (ಹೊಸ ಸಿನಿಮಾ) ಕತೆಯನ್ನ ಮೊದಲ ಚಿತ್ರ 'ಕಾಂತಾರ' ಯಶಸ್ಸಿನ ನಂತರ ಮಾಡಿದ್ದ ಇಲ್ಲವೇ ಮುಂಚೆಯೇ ಯೋಜನೆ ತಯಾರಾಗಿತ್ತಾ?.

ರಿಷಬ್ ಶೆಟ್ಟಿ: 'ಕಾಂತಾರ' ನಂತರ ಸೀಕ್ವೆಲ್ (ಉತ್ತರ ಭಾಗ) ಮಾಡುವ ಯೋಜನೆ ಇತ್ತು. ಆದರೆ ಕತೆಯನ್ನು ಬರೆಯುತ್ತಾ ಹೋದಾಗ ಹಿಂದಿನ ಕತೆಗಳನ್ನು ಹೆಕ್ಕಲಾಯಿತು. ಒಂದು ಕತೆ ಮಾಡುವಾಗ ಸೀಮಿತ ಚೌಕಟ್ಟು ಇರುವುದಿಲ್ಲ. ಅದೊಂದು ಹುಡುಕಾಟ, ಪಯಣ ಇದ್ದಂತೆ. ಈ ರೀತಿಯ ಸಿನಿಮಾ ಮಾಡುವಾಗ ಕತೆಯ ಹಿಂದೆ ಹೋಗಬೇಕಾಗುತ್ತದೆ. ಆ ಅಧ್ಯಯನದಲ್ಲಿ ಇನ್ನೊಂದಷ್ಟು ಪದರಗಳು ಎದುರಾಗಿ ಚಾಪ್ಟರ್ 1 (ಪ್ರೀಕ್ವೆಲ್) ಆಗಿ ಬದಲಾಯಿತು. ಬಿಡುಗಡೆಯಾಗಿದ್ದ ಸಿನಿಮಾಗೆ ಪೂರಕವಾದ ಕತೆಗಳನ್ನು ಮಾಡಿಕೊಂಡು ಹೋಗಬೇಕಾಗುತ್ತದೆ. ಹಾಗೆಯೇ ಹಿಂದಿನ ಸಿನಿಮಾದ ಯಶಸ್ಸನ್ನು ಜವಾಬ್ದಾರಿಯಾಗಿ ಸ್ವೀಕರಿಸಿದ್ದರಿಂದ ಬೇರೆ ಯಾವುದೇ ಒತ್ತಡ ಆಗಲಿಲ್ಲ. ಇನ್ನೂ ಹೆಚ್ಚು ಕೆಲಸ ಮಾಡಬೇಕು ಎಂಬುದಂತೂ ಮನಸ್ಸಲ್ಲಿ ಇತ್ತು. ಹಾಗಾಗಿ ಈ ಕತೆ ತುಂಬಾ ದೊಡ್ಡದಾಯಿತು.

ಮೈಸೂರು ಮಿತ್ರ: ಈ ಎರಡೂ ಸಿನಿಮಾಗಳ ನಿರ್ಮಾಣದ ಪ್ರತಿ ಹಂತದಲ್ಲೂ ವ್ಯತ್ಯಾಸಗಳಿವೆ. ಕಾಂತಾರ ಒಂದು ಪ್ರದೇಶಕ್ಕೆ ಸೀಮಿತವಾಗಿತ್ತು. ಕಾಂತಾರ 1 ಅಂತೂ ಅತ್ಯಂತ ಭವ್ಯವಾಗಿ ಮೂಡಿ ಬಂದಿದೆ ಈ ಬಗ್ಗೆ ಏನ ಹೇಳುವಿರಿ?.

ರಿಷಬ್ ಶೆಟ್ಟಿ: ಎರಡರಲ್ಲೂ ಮನುಷ್ಯ ಮತ್ತು ಪ್ರಕೃತಿ ನಡುವಿನ ಸಂಘರ್ಷವನ್ನು ಹೇಳುವ ಪ್ರಯತ್ನ ವಿದೆ. ಕಾಂತಾರ ಎಂದರೆ ಒಂದು ನಿಗೂಢವಾದ ಕಾಡು. ಅದರಲ್ಲಿರುವ ಅಂಶಗಳು, ರಹಸ್ಯಗಳು, ವಿಚಾರಗಳ ಬಗ್ಗೆ ನಾವು ಮಾತನಾಡಬೇಕಾಗುತ್ತದೆ. ಒಂದು ಸಿನಿಮಾದಿಂದ ಮತ್ತೊಂದು ಸಿನಿಮಾ ನಡುವಿನ ಪ್ರಕ್ರಿಯೆಯಲ್ಲಿ ಬದಲಾವಣೆ ಇರುತ್ತದೆ. ಥೀಮ್ ಒಂದೇ ಇದ್ದರೂ ಕತೆಯಲ್ಲಿ ಅಜಗ ಜಾಂತರ ವ್ಯತ್ಯಾಸವಿದೆ. ಸಿನಿಮಾ ನಿರ್ಮಾಣದಲ್ಲೂ ಅಷ್ಟೇ. ಪ್ರತಿ ಸಿನಿಮಾ ಅಧ್ಯಯನ ವಸ್ತುವಾಗಿರುತ್ತದೆ. ಆ ಪ್ರಕ್ರಿಯೆಗಳಲ್ಲಿ ಹಿಂದಿನ ತಪ್ಪುಗಳನ್ನು ಸರಿಪಡಿಸಿ ಕೊಂಡು, ಅಗತ್ಯ ತಂತ್ರಜ್ಞಾನ ಅಳವಡಿಸಿಕೊಂಡು ಕತೆಯನ್ನು ಇನ್ನೂ ಬೇರೆ ರೀತಿಯಲ್ಲಿ ಹೇಳಬೇಕೆಂಬ ತುಡಿತ ಎಲ್ಲಾ ಸಿನಿಮಾ ತಯಾರಕರಲ್ಲೂ ಇರುತ್ತದೆ. ಅವರಂತೆಯೇ ನಾನೂ ಹಾಗೂ ನನ್ನ ಎಲ್ಲಾ ತಂತ್ರಜ್ಞರು ಕೂಡ. ಸಿನಿಮಾದಿಂದ ಸಿನಿಮಾಗೆ ಸುಧಾರಣೆ, ಬೆಳವಣಿಗೆ ಆಗಬೇಕಾಗುತ್ತದೆ. ಅಲ್ಲಿ ಕಲಿತಿದ್ದನ್ನು ಮತ್ತಷ್ಟು ಉತ್ತಮಗೊಳಿಸುವುದು ನಿರಂತರ ಪ್ರಕ್ರಿಯೆ. ಕತೆ ಬಯಸುವುದನ್ನು ಗುರುತಿಸಿ, ಅದಕ್ಕೆ ನ್ಯಾಯ ಕೊಡುವ ನಿಟ್ಟಿನಲ್ಲಿ ಪಯಣಿಸುತ್ತೇವೆ.

ಮೈಸೂರು ಮಿತ್ರ: ಕಾಂತಾರ ಚಾಪ್ಟರ್ 1 ಸಿನಿಮಾದಲ್ಲಿ ನಾಯಕಿ ಪಾತ್ರಧಾರಿ ಬದಲಾಗಿದ್ದಾರೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?.

ರಿಷಬ್ ಶೆಟ್ಟಿ: ಒಂದು ಪಾತ್ರದ ಬಗ್ಗೆ ಮಾತನಾಡಲಾಗದು. ಪ್ರತಿಯೊಂದು ಸಣ್ಣ ಸಣ್ಣ ಪಾತ್ರವೂ ಸಿನಿಮಾದ ಜೀವಾಳ. ಅದೇ ರೀತಿಯಲ್ಲಿ ಎಲ್ಲಾ ಪಾತ್ರಗಳೂ ಆಗಿವೆ. ಆದಷ್ಟು ಪ್ರತಿಭಾವಂತರು, ಹೊಸಬರನ್ನು ಪರಿಚಯಿಸುವ ಪ್ರಯತ್ನ ಮಾಡುತ್ತಿರುತ್ತೇನೆ. ಆ ಪಾತ್ರಗಳು ಜನರ ಮನಸ್ಸಿನಲ್ಲಿ ಉಳಿಯುವಂತಾಗಲಿ ಎಂಬ ಆಶಯ ನನ್ನದು. ಚಿತ್ರದಲ್ಲಿ ರುಕ್ಮಿಣಿ, ಜಯರಾಂ ಅಭಿನಯಿಸಿರುವಷ್ಟೇ ಪ್ರಾಮುಖ್ಯತೆ ಇರುವಂತಹ ಸಾಕಷ್ಟು ಪಾತ್ರಗಳಿವೆ. ಹೊಸಬರು, ರಂಗಭೂಮಿಯಿಂದ ಬಂದ ಕಲಾವಿದರಿದ್ದಾರೆ. ಅವರೆಲ್ಲಾ ಮೈಸೂರು, ಬೆಂಗಳೂರು ಪ್ರದೇಶದಿಂದ ಬಂದವರು. ಭಾಷೆಯಲ್ಲಿ ಅವರಿಗೆ ತರಬೇತಿ ಬೇಕಾಗುತ್ತದೆ. ಹಾಗಾಗಿ ರುಕ್ಮಿಣಿ ಸೇರಿದಂತೆ ಎಲ್ಲಾ ಪಾತ್ರಧಾರಿಗಳಿಗೂ ಕಾರ್ಯಾಗಾರ ನಡೆಸಲಾಗಿತ್ತು. ಒಂದು ಸಿನಿಮಾ ಮಾಡುವಾಗ ಎಲ್ಲರೂ ವಿದ್ಯಾರ್ಥಿಗಳಾಗಿರಬೇಕು. ಆಗ ಮಾತ್ರ ಸಿನಿಮಾ ತುಂಬಾ ಚೆನ್ನಾಗಿ ಮೂಡಿಬರಲು ಸಾಧ್ಯ.

ಮೈಸೂರು ಮಿತ್ರ: 'ಜೈ ಹನುಮಾನ್', ಕಾಂತಾರ ಮತ್ತೊಂದು ಭಾಗ ಬರುತ್ತಿದೆ ಮುಂದಿನ ಯೋಜನೆಗಳಿಗೆ ನಿಮ್ಮ ತಯಾರಿ ಹೇಗಿದೆ?.

ರಿಷಬ್ ಶೆಟ್ಟಿ: ಸದ್ಯಕ್ಕೆ ಏನು ಮಾತನಾಡುವುದಿಲ್ಲ. ಜೈ ಹನುಮಾನ್ ಸಿನಿಮಾದಲ್ಲಿ ಅಭಿನಯಿಸುತ್ತಿದ್ದೇನೆ ಎಂದಷ್ಟೇ ಹೇಳುತ್ತೇನೆ. ಇದರ ಹೊರತು ಬೇರೆ ಏನೂ ಹೇಳುವುದಿಲ್ಲ.

ಮೈಸೂರು ಮಿತ್ರ: ಕಾಂತಾರ ಭಾಗ 1ರ ಕ್ಲೈಮ್ಯಾಕ್ಸ್‌ನಲ್ಲಿ ನೀವು ಈಶ್ವರನ ಆಶೀರ್ವಾದ ಪಡೆಯಲು ಹೋದಾಗ ನಂದಿಯನ್ನು ವಿಭಿನ್ನವಾಗಿ ದೃಶ್ಯೀಕರಿಸಲಾಗಿದೆ ಎಂಬ ಪ್ರೇಕ್ಷಕರ ಅಭಿಪ್ರಾಯದ ಬಗ್ಗೆ ಏನು ಹೇಳುವಿರಿ?.

ರಿಷಬ್ ಶೆಟ್ಟಿ: ಹಲವು ಜನರಿಗೆ ಈ ಗೊಂದಲ ಇದೆ. ಬ್ರಹ್ಮರಾಕ್ಷಸನ ಪರಿಕಲ್ಪನೆಯಲ್ಲಿ ಸಿನಿಮಾದಲ್ಲಿ ದೃಶ್ಯೀಕರಿಸಲಾಗಿದೆ. ನಂದಿಯನ್ನು ಆ ರೀತಿಯಲ್ಲಿ ತೋರಿಸಲು ಸಾಧ್ಯವೇ ಇಲ್ಲ. ನಂದಿ ತುಂಬಾ ದೈವಕಳೆ ಇರುವಂತದ್ದು, ಅದನ್ನು ಪೂಜಿಸಲಾಗುತ್ತದೆ. ಬ್ರಹ್ಮರಾಕ್ಷಸನಿಗೆ ಸಂಬಂಧಪಟ್ಟಂತೆ ಹಲವಾರು ಕತೆಗಳಿವೆ. ನಾವು ಕತೆಗೆ ಯಾವುದು ಹೊಂದಿಕೊಳ್ಳುತ್ತದೆ ಎಂಬುದನ್ನು ಸಾಕಷ್ಟು ಚರ್ಚೆ ಮಾಡಿ, ಅಳವಡಿಸಿಕೊಂಡಿದ್ದೇವೆ. ಇದರ ಬಗ್ಗೆ ತುಂಬಾ ಚರ್ಚೆ ಮಾಡುವುದಕ್ಕಿಂತ ಜನರ ದೃಷ್ಟಿಕೋನಕ್ಕೆ ಬಿಡುವುದು ಸೂಕ್ತ.

ಮೈಸೂರು ಮಿತ್ರ: ಹೊಸ ಸಿನಿಮಾ ಕಾಂತಾರ–1ರಲ್ಲಿ ಗುಳಿಗ ಸೇರಿದಂತೆ ಹಲವು ದೇವತೆಗಳನ್ನು ತೋರಿಸಿರುವುದರ ಹಿನ್ನೆಲೆ ಬಗ್ಗೆ ಹೇಳಬಹುದೇ?.

ರಿಷಬ್ ಶೆಟ್ಟಿ: ದೈವತ್ವದ ವಿಚಾರದಲ್ಲಿ ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ಅದನ್ನೆಲ್ಲಾ ಅವರವರ ಅನುಭವಕ್ಕೆ ಬಿಡಬೇಕು. ಅದರ ಬಗ್ಗೆ ಹೆಚ್ಚು ವಿಶ್ಲೇಷಣೆ ಮಾಡಬಾರದು. ಇಡೀ ಕತೆಯಲ್ಲಿ ಅವಿಭಜಿತ ದಕ್ಷಿಣ ಕನ್ನಡದ ದೈವಾರಾಧನೆಯಲ್ಲಿ ಬರುವಂತಹ ಪಾಡ್ದನ(ತುಳುನಾಡಿನ ಜನಪದ) ಗಳಲ್ಲಿರುವ ವಿಚಾರಗಳು, ನಮ್ಮ ಜನಪದದ ಹಾಡುಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿದ್ದೇವೆ. ಅದನ್ನೆಲ್ಲಾ ಸಿನಿಮಾನುಭವದ ಮೂಲಕ ಜನರಿಗೆ ತಲುಪಿಸುವ ಕೆಲಸ ಮಾಡಿದ್ದೇವೆ ಅಷ್ಟೆ.

> **ಒಂದು ಸಿನಿಮಾದಿಂದ ಮತ್ತೊಂದು ಸಿನಿಮಾ ನಡುವಿನ ಪ್ರಕ್ರಿಯೆಯಲ್ಲಿ ಬದಲಾವಣೆ ಇರುತ್ತದೆ. ಥೀಮ್ ಒಂದೇ ಇದ್ದರೂ ಕತೆಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಸಿನಿಮಾ ನಿರ್ಮಾಣದಲ್ಲೂ ಅಷ್ಟೇ. ಪ್ರತಿ ಸಿನಿಮಾ ಅಧ್ಯಯನ ವಸ್ತುವಾಗಿರುತ್ತದೆ. ಆ ಪ್ರಕ್ರಿಯೆಗಳಲ್ಲಿ ಹಿಂದಿನ ತಪ್ಪುಗಳನ್ನು ಗುರುತಿಸಿಕೊಂಡು, ಅಗತ್ಯ ತಂತ್ರಜ್ಞಾನ ಅಳವಡಿಸಿಕೊಂಡು ಕತೆಯನ್ನು ಇನ್ನೂ ಬೇರೆ ರೀತಿಯಲ್ಲಿ ಹೇಳಬೇಕೆಂಬ ತುಡಿತ ಎಲ್ಲಾ ಸಿನಿಮಾ ತಯಾರಕರಲ್ಲೂ ಇರುತ್ತದೆ. ಅವರಂತೆಯೇ ನಾನೂ ಹಾಗೂ ನನ್ನ ಎಲ್ಲಾ ತಂತ್ರಜ್ಞರು ಕೂಡ. ಸಿನಿಮಾದಿಂದ ಸಿನಿಮಾಗೆ ಸುಧಾರಣೆ, ಬೆಳವಣಿಗೆ ಆಗಬೇಕಾಗುತ್ತದೆ. ಅಲ್ಲಿ ಕಲಿತಿದ್ದನ್ನು ಮತ್ತಷ್ಟು ಉತ್ತಮಗೊಳಿಸುವುದು ನಿರಂತರ ಪ್ರಕ್ರಿಯೆ. ಕತೆ ಬಯಸುವುದನ್ನು ಗುರುತಿಸಿ, ಅದಕ್ಕೆ ನ್ಯಾಯ ಕೊಡುವ ನಿಟ್ಟಿನಲ್ಲಿ ಪಯಣಿಸುತ್ತೇವೆ.**

ಮೈಸೂರು ಮಿತ್ರ: ನಿರ್ದೇಶನ ಮತ್ತು ನಟನೆ, ಇದರಲ್ಲಿ ನಿಮಗೆ ಯಾವುದು ಇಷ್ಟ?.

ರಿಷಬ್ ಶೆಟ್ಟಿ: ಯಾವತ್ತೂ ನಾನು ನಿರ್ದೇಶನಕ್ಕೆ ಆದ್ಯತೆ ನೀಡುತ್ತೇನೆ.

ಕಾವೇರಿಯ ತೀರ್ಥೋದ್ಭವ



ಡಾ॥ ಸುಧಾ ಎಂ.ಎನ್
ಆಯುರ್ವೇದ ಮತ್ತು ಯೋಗ ತಜ್ಞರು
ಮೊ.: 9448071933.

ಅಗ್ನಿ ಮತ್ತು ಸ್ಕಂದ ಪುರಾಣಗಳ ಪ್ರಕಾರ ರಾಜರ್ಷಿ ಕವೇರನು ಸಂತಾನಕ್ಕಾಗಿ ಬ್ರಹ್ಮಗಿರಿಯಲ್ಲಿ ಬ್ರಹ್ಮನ ಕುರಿತು ತಪಸ್ಸು ಮಾಡಿದ, ಪೂರ್ವಜನ್ಮದ ಕರ್ಮಾನುಸಾರ ಕವೇರನಿಗೆ ಸಂತಾನ ಭಾಗ್ಯವಿಲ್ಲ ಎಂದು ತಿಳಿದಿದ್ದ ಬ್ರಹ್ಮ ತನ್ನ ಮಾನಸ ಪುತ್ರಿ ಲೋಪಾ ಮುದ್ರೆಯನ್ನೇ ಅವನಿಗೆ ಮಗಳಾಗಿ ಕರುಣಿಸಿ ದನು. ಹಾಗೇ ಕವೇರನ ಮಗಳಾಗಿ ಲೋಪಾ ಮುದ್ರೆಯು ಕಾವೇರಿಯಾದಳು. ಜಗತ್ತಿನ ಕ್ಷೇಮ ಕ್ಕಾಗಿ ಸರ್ವ ಜೀವಜಂತುಗಳ ಕಲ್ಯಾಣಕ್ಕಾಗಿ ಹಿಮಾ ಲಯದಲ್ಲಿ ತಪಸ್ಸು ಮಾಡಿ ವಿಷ್ಣುವನ್ನು ಸಾಕ್ಷಾ ತ್ಕಾರಗೊಳಿಸಿಕೊಂಡಿದ್ದ ಆಕೆಯ ಒಂದಂಶ ಜಲರೂಪದಲ್ಲಿರಬೇಕೆಂದು ವಿಶೇಷವಾಗಿ ತಪಃಶಕ್ತಿಯಿಂದ ನದಿಯಾಗುವ ವರವನ್ನು ಬ್ರಹ್ಮನಿಂದ ಪಡೆದ ಲೋಪಮುದ್ರೆಯು ಕವೇರನ ಆಶ್ರಮದಲ್ಲಿ ಕಾವೇರಿಯಾಗಿ ಬೆಳೆಯುತ್ತಿದ್ದಳು.

ಉತ್ತರದಿಂದ ದಕ್ಷಿಣಕ್ಕೆ ಬಂದ ಅಗಸ್ತ್ಯರು ಕಾವೇರಿಯನ್ನು ಕಂಡು ತಮ್ಮ ತಪೋಬಲದಿಂದ ಅವರ ಜೀವನೋದ್ದೇಶವನ್ನು ಅರಿತು, ಕವೇರನಲ್ಲಿ ಆಕೆಯನ್ನು ಮದುವೆಯಾಗುವುದಾಗಿ ಬೇಡಿಕೆ ಇಟ್ಟರು. ಆಗ, ಕಾವೇರಿ ತನ್ನನ್ನು ಎಂದೂ ಬಿಟ್ಟು ಹೋಗಬಾರದೆಂದು ಷರತ್ತು ಹಾಕಿದಳು; ಅಗಸ್ತ್ಯರೂ ಒಪ್ಪಿ ಮದುವೆಯಾದರು. ದಕ್ಷಿಣ ಪಥದ ಸಹ್ಯಾದ್ರಿಯ ಬ್ರಹ್ಮಗಿರಿಗೆ ಬಂದು ತಪಸ್ಸು ಮಾಡಿ ಶೂರ ಮತ್ತು ಪದ್ಮಾಸುರರೆಂಬ ರಾಕ್ಷಸರು ತಮ್ಮ ಶಕ್ತಿಯಿಂದ ಮಳೆಯನ್ನು ತಡೆ ಹಿಡಿದಿದ್ದರು. ಅಸಹಾಯಕನಾದ ಇಂದ್ರ, ಗಣೇಶನಲ್ಲಿ ಈ ಕುರಿತು ಸ್ತುತಿಸಿದನು. ಲೋಕ ಪಾವನಕ್ಕಾಗಿ ಹುಟ್ಟಿದ್ದ ಲೋಪಮುದ್ರೆಯು ಕಾವೇರಿಯ ರೂಪದಲ್ಲಿ ನಿಮಿತ್ತವೊಂದಕ್ಕೆ ಕಾಯುತ್ತಿದ್ದಳು; ಒಮ್ಮೆ ಅಗಸ್ತ್ಯರು ಸ್ನಾನಕ್ಕೆಂದು ಹೋಗಿದ್ದಾಗ ಈ ಸೃಷ್ಟಿಯ ಉದ್ದೇಶವನ್ನು ಅರಿತ ಗಣಪತಿಯು ಈಶ್ವರನ ಅಣತಿಯಂತೆ ಕಮಂಡಲವನ್ನು ಉರು ಳಿಸಿದರು. ಕಮಂಡಲದಲ್ಲಿದ್ದ ಕಾವೇರಿಯು ಉಕ್ಕಿ ಹರಿದಳು, ಯಾರು ಹೇಳಿದರೂ, ತಡೆದರೂ ಲೆಕ್ಕಿಸದೇ ಹರಿಯುವಾಗ ಅಲ್ಲಿನ ಕೊಡವ ಹೆಂಗಳೆ ಯರು ತಮ್ಮ ಸೆರಗೊಡ್ಡಿ ಆಕೆಯನ್ನು ಹೋಗ ಬಾರದೆಂದು ಬೇಡಿದರು. ಕಾವೇರಿ ಧುಮ್ಮಿಕ್ಕುವ ರಭಸಕ್ಕೆ ಅವರ ಸೆರಗು ಹಿಂದೆ ಸರಿಯಿತು. ಹಾಗಾಗಿ ಇಂದಿಗೂ ಕೊಡವ ಸ್ತ್ರೀಯರು ತಮ್ಮ ಸೆರಗನ್ನು ಹಿಂಬದಿಯಲ್ಲಿಯೇ



ಹಾಕಿ ಸೀರೆ ಉಡು ತ್ತಾರೆ ಎಂಬ ಪ್ರತೀತಿ ಇದೆ. ಆಕೆಯ ಲೋಕ ಕಲ್ಯಾಣದ ಜನ್ಮ ರಹಸ್ಯವನ್ನು ಅರಿತಿದ್ದ ಅಗಸ್ತ್ಯರು ಆಕೆಯ ಹಿಂದೆಯೇ ಹಿಂಬಾಲಿಸಿದರು. ಆಕೆ ಕಡಲು ಸೇರುವವರೆಗೂ ಆಕೆಯ ಜೊತೆಗೇ ನಡೆದು ಜನ ಕಲ್ಯಾಣವನ್ನು, ಪತಿ ಧರ್ಮವನ್ನು ಪಾಲಿಸಿದರು. ವರ್ಷಕ್ಕೊಮ್ಮೆ ತುಲಾಮಾಸದಲ್ಲಿ ಕೊಡಗಿಗೆ ತುಲಾ ಸಂಕ್ರಮಣದಲ್ಲಿ ದರ್ಶನ ನೀಡುವ ವಚನದಂತೆ ಇಂದಿಗೂ ತುಲಾ ಸಂಕ್ರಮಣದಂದು ಕಾವೇರಿ ಉಗಮವನ್ನು ನಾವು ನೋಡಬಹುದು.

ಕಾವೇರಿಯು ನದಿಯಾಗಿ ಹರಿದಲ್ಲೆಲ್ಲ, ಬರಡು ನೆಲ ಹಸಿರಾಯಿತು. ಭೂತಾಯಿಗೆ ಹೂ ಹಾರ ಹಾಕಿ ಸಿಂಗರಿಸಿದಂತೆ ಕಾವೇರಿ ಹರಿದಲ್ಲೆಲ್ಲ, ಅವಳನ್ನು ಹಿಂಬಾಲಿಸಿ ಬಂದ ಅಗಸ್ತ್ಯರಿಂದ ಸನಾತನ ಧರ್ಮದ ಹೊಸ ಅರ್ಥ ಸಂದೇಶವನ್ನು ನೀಡಿದರು. ಹೊಸ ಭಾಷೆ, ಸಂಸ್ಕೃತಿ, ಆಚರಣೆ, ದೈವ ಕ್ಷೇತ್ರಗಳು ಹುಟ್ಟಿದವು. ಸಮೃದ್ಧಿ ನೆಲೆಸಿತು. ಲೋಪಾಮುದ್ರೆ ಹೆಸರಿಗೆ ತಕ್ಕಂತೆ ಲೋಕಪಾವನೆಯೇ ಆದಳು! ಹೊಸ ನಾಗರಿಕತೆಯ ದೇವತೆಯಾದಳು. ಸಪ್ತ ನದಿಗಳಲ್ಲಿ ಒಂದಾಗಿ ಭಾರತದಾದ್ಯಂತ ಪೂಜ ನೀಯಳಾದಳು. ತಲಕಾವೇರಿಯಿಂದ ಹೊರಟ ಅಗಸ್ತ್ಯ ಕಾವೇರಿಯರ ಪ್ರತೀ ಹೆಜ್ಜೆಯನ್ನು ನೋಡಿದರೆ ಅವರು ಹಿಂದೂ ಧರ್ಮಕ್ಕೆ ಸಾರಿದ ಸಂದೇಶಗಳು ಮೌಲ್ಯಗಳು ಆದರ್ಶಗಳು ಅಪಾರ! ಮನುಕುಲದ ಉದ್ಧಾರಕ್ಕಾಗಿಯೇ ಜಲ ಕ್ಷಾಮದ ಕೊರತೆಯನ್ನು ನೀಗಿಸಲೆಂದೇ ಬ್ರಹ್ಮನು ಲೋಪಾಮುದ್ರೆಯನ್ನು ಕಮಂಡಲದಿಂದ ಭೂಮಿಗೆ ಇಳಿಸಲು ಸಾಕ್ಷಾತ್ ಗಣಪತಿಯೇ ಕಾಗೆಯ ರೂಪದಲ್ಲಿ ಬಂದು ಕಾರಣಕರ್ತ ನಾದನೆಂದೂ ಏನೇ ಹಲವಾರು ಅಂದಿನ ಪುರಾಣ ಕಥೆಗಳಿರಲಿ, ಇಂದಿಗೂ ಕಾವೇರಿ ನಮ್ಮ ಜನರ ಜೀವನಾಡಿಯಾಗಿರುವುದು ಉತ್ಪ್ರೇಕ್ಷೆಯೇನಲ್ಲ!

ಕಾವೇರಿ ಉಗಮದ ತಲಕಾವೇರಿ ಇಂದಿಗೂ ಭೂಗರ್ಭ ಶಾಸ್ತ್ರರ ಪಾಲಿಗೆ ವಿಸ್ಮಯವೇ, ಪುಟ್ಟ ಕುಂಡಿಕೆಯಲ್ಲಿ ಹುಟ್ಟಿ 765 ಕಿ.ಮೀ ಉದ್ದಕ್ಕೂ ಹಲವರ ಪಾಪವನ್ನು

> **“ ಮನುಕುಲದ ಉದ್ಧಾರಕ್ಕಾಗಿಯೇ ಜಲ ಕ್ಷಾಮದ ಕೊರತೆ ನೀಗಿಸಲೆಂದೇ ಬ್ರಹ್ಮನು ಲೋಪಾಮುದ್ರೆಯನ್ನು ಕಮಂಡಲದಿಂದ ಭೂಮಿಗೆ ಇಳಿಸಲು ಸಾಕ್ಷಾತ್ ಗಣಪತಿಯೇ ಕಾಗೆಯ ರೂಪದಲ್ಲಿ ಬಂದು ಕಾರಣ ಕರ್ತನಾದನೆಂದೂ ಏನೇ ಹಲವಾರು ಅಂದಿನ ಪುರಾಣ ಕಥೆಗಳಿರಲಿ, ಇಂದಿಗೂ ಕಾವೇರಿ ನಮ್ಮ ಜನರ ಜೀವನಾಡಿಯಾಗಿರುವುದು ಉತ್ಪ್ರೇಕ್ಷೆಯೇನಲ್ಲ!**

ತೊಳೆಯುವ ಕಾವೇರಿ ಯಾರಿಗೂ, ಎಲ್ಲಿಯೂ ತಾರತಮ್ಯ ಮಾಡಿಲ್ಲ, ಎಲ್ಲ ರೀತಿಯ ಜನರನ್ನು ಒಂದುಗೂಡಿಸಿ ಏಕತೆಯಿಂದ ಹರಿದಳು! ತಲಕಾವೇರಿಯ ಅಗಸ್ತ್ಯ ನಿರ್ಮಿತ ಪೂಜಿತ ಶಿವಲಿಂಗ ಪ್ರತಿಷ್ಠಾಪನೆಯಿಂದ ಶುರುವಾದ ಶೈವಾರಾಧನೆಯಿಂದ ನೂರಾರು ಶೈವ ಕ್ಷೇತ್ರಗಳು ಪ್ರತಿಷ್ಠಾಪಿಸಲ್ಪಟ್ಟವು, ಕಾವೇರಿಯ ದಡದಲ್ಲಿಯೇ ಭಗಂಡೇಶ್ವರ, ಹರಿಶ್ಚಂದ್ರೇ ಶ್ವರ, ಪಾಲೂರಪ್ಪ, ಮುನೀಶ್ವರ, ಪಾತಾಳೇಶ್ವರ, ಗುಹೇಶ್ವರ, ಗಂಗಾಧರೇಶ್ವರ, ಅರ್ಕೇಶ್ವರ, ವೈದ್ಯೇಶ್ವರ, ಮರುಳೇಶ್ವರ ಹೀಗೆ ತಲಕಾಡಿನ ಪಂಚಲಿಂಗದಿಂದ ಶುರುವಾದದ್ದು ತಮಿಳುನಾಡಿನ ನೆರೂರು, ರಾಮ ಸಮುದ್ರಂ ತಿರುಂ ಗೋಮರ್ರ್ಯೆ, ಗುಣಶೀಲ, ಕುಳಿತಳ್ಳೆ, ತಿರುಚನಾಪಳ್ಳಿ, ತಂಜಾವೂರಿನ ಬೃಹದೀಶ್ವರ ಮುಂತಾದ ಸಾವಿರಾರು ಶೈವ ಕ್ಷೇತ್ರಗಳಿವೆ. ಯಾವುದೇ ಪಂಥಗಳ ಹಂಗಿಲ್ಲದೇ ಅಗಸ್ತ್ಯ ಕಾವೇರಿಯರು ಶ್ರೀರಂಗಪಟ್ಟಣ, ಶಿವನಸಮುದ್ರ ಶ್ರೀರಂಗಂನಂತಹ ವೈಷ್ಣವ ಕ್ಷೇತ್ರಗಳು, ಆದಿರಂಗ, ಮಧ್ಯರಂಗ, ಅಂತ್ಯರಂಗವೆಂದು ಪ್ರಸಿದ್ಧಿ ಪಡೆದ ವೈಷ್ಣವ ಕ್ಷೇತ್ರಗಳಿಗೂ ಕಾರಣಕರ್ತರಾದರು.

ಎಷ್ಟೋ ಶಿವ ಮತ್ತು ವಿಷ್ಣು ಕ್ಷೇತ್ರಗಳು ದೇವಾಲಯಗಳನ್ನು ಒಟ್ಟಿಗೇ ಪ್ರತಿಷ್ಠಾಪಿಸಿ ಏಕತೆಯನ್ನು ಸಾರಿದರು. ಹಲವು ದೇವಿಯರ ಕ್ಷೇತ್ರಗಳು, ಹನುಮಾನ್ ಮಂದಿರಗಳು, ರಾಮಕ್ಷೇತ್ರಗಳು, ಸರಸ್ವತೀ ಮಂದಿರಗಳು ಎಲ್ಲವೂ ಪ್ರತಿಷ್ಠಾಪಿಸಲ್ಪ ಟ್ಟವು. ಈ ಕಾವೇರಿ ತೀರದ ಯಾವುದೇ ಕ್ಷೇತ್ರವನ್ನು ನೋಡಿದರೂ ಇಲ್ಲಿ ಜಾತಿ–ಮತ–ಪಂಥಗಳ ತಡೆಗೋಡೆ ಇತ್ತು ಎಂಬ ಕುರುಹೇ ಕಾಣುವುದಿಲ್ಲ! ಕಾವೇರಿ ಅಗಸ್ತ್ಯರು ನಡೆದಾಡಿದಲ್ಲೆಲ್ಲ ಆದರ್ಶಗಳೇ ಮೇಳೈಸಿವೆ. ಈ ಸಮಾನತೆಯ ಆದರ್ಶವೇ ಸಮಾನತೆಯ ಸಮಾಜ ರೂಪಿಸಿವೆ. ಅದೇ ಪ್ರೇರಣೆಯೇ ಇಂದೂ ಮುಂದುವರೆದಿದೆ. ತ್ಯಾಗರಾಜರಂತಹ ಸಂಗೀತ ವಿದ್ವಾಂಸರು, ಬ್ರಹ್ಮೇಂದ್ರರಂಥ ಸಂತ ಶ್ರೇಷ್ಠರು, ಚೋಳ, ಚೇರ; ಪಾಂಡ್ಯ, ಗಂಗ, ಹೊಯ್ಸಳ, ಇಕ್ಕೇರಿಯ ಅರಸರಂಥಹ ಮಹಾನ್ ಸಾಮ್ರಾಜ್ಯವನ್ನಾಳಿದ ರಾಜರು ಎಲ್ಲರಿಗೂ ಮಾದರಿ ಸಂಸ್ಥಾನವನ್ನೇ ಕಟ್ಟುವ ಜೀವನಾಡಿಯಾದವರೇ ಈ ಋಷಿ ದಂಪತಿಗಳು! ಇಂದಿಗೂ ಉಡುಪಿಯ ಅಷ್ಠಮಠದ ಎಲ್ಲ ಯತಿಗಳೂ ಕಾವೇರಿ ತಾಯಿಗೆ ಕುಂಕುಮಾರ್ಚನೆ ಮಾಡುವ ಶಿಷ್ಯ ಪರಂಪರೆಯನ್ನು ಉಳಿಸಿ ಕೊಂಡು ಬಂದಿದ್ದಾರೆ. ಕಂಚಿಯ ಗುರುಗಳು, ಶೃಂಗೇರಿಯ ಪರಮಾಚಾರ್ಯರು, ಬೇಲೂರು ಮಠದ ಯತಿಗಳು, ಕಾಶಿ ಮಠದವರು ಎಲ್ಲರೂ ಕಾವೇರಿಯ ಉಪಾಸನೆಯನ್ನು ಮಾಡುತ್ತಾರೆ.

ಹೇಗೆ ನಿಷ್ಕಾಮ, ನಿರ್ಲಿಪ್ತ, ಸಮರ್ಪಣೆಯೊಂದಿಗೆ ಹರಿಯುವ ಕಾವೇರಿ ನಮ್ಮ ಕರ್ನಾಟಕದ ಜೀವನಾಡಿಯಾದರೆ, ತಮಿಳುನಾಡಿನ ಪಾಲಿಗೆ ಅವರು ಅನ್ನದಾತೆ, ಭಾಗ್ಯಲಕ್ಷ್ಮಿ, ಅದಕ್ಕೇ ಎಲ್ಲ ವೇದ ಗಳೂ, ಪೆರಿಯ ಪುರಾಣದಂತಹ ಮಹಾ ಪುರಾಣ ಗಳು, ಸ್ಕಂದ ಪುರಾಣಗಳು, ಹಲವಾರು ಮಹಾ ಕವಿಗಳು, ತಮಿಳು, ಕನ್ನಡ ಶಾಸನಗಳು ಕಾವೇರಿಯನ್ನು ಹಾಡಿ ಹೊಗಳುತ್ತವೆ. ತಾನು ಹರಿದಲ್ಲೆಲ್ಲ, ತನ್ನ ಋಷಿ ಪತಿ ಅಗಸ್ತ್ಯರ ಸಂದೇಶ ಗಳನ್ನೂ, ಹಸಿರನ್ನೂ, ಉಸಿರನ್ನೂ ಸಂಸ್ಕಾರ ವನ್ನೂ ಮೂಡಿಸಿದ ಕಾವೇರಿಯ ಬಗ್ಗೆ ಬರೆ ದಷ್ಟೂ, ಪೊಗೆದಷ್ಟೂ ಗೌರವ, ಭಕ್ತಿ ಭಾವನೆಯು ಉಕ್ಕಿ ಹರಿಯುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಟ ರಿಷಬ್ ಶೆಟ್ಟಿಗೆ ಸಾಂಪ್ರದಾಯಿಕ ಸ್ವಾಗತ...



ಮಾಜಿ ಸಂಸದ ಪ್ರತಾಪ್‌ಸಿಂಹ ನೇತೃತ್ವದಲ್ಲಿ ಮೈಸೂರಿಗೆ ಆಗಮಿಸಿದ್ದ ದಾಖಲೆಯ 'ಕಾಂತಾರ-1'ರ ನಟ ರಿಷಬ್‌ಶೆಟ್ಟಿ ಅವರಿಗೆ ಸಾಂಪ್ರದಾಯಿಕ ಸ್ವಾಗತ ಕೋರಲಾಯಿತು. ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ನಗರ ಯುವಮೋರ್ಚಾ ನಿಕಟಪೂರ್ವ ಅಧ್ಯಕ್ಷ ಎಂ.ಜಿ.ಕಿರಣ್‌ಗೌಡ, ಅರ್ಜುನ್‌ಗೌಡ, ಕಾರ್ತಿಕ್ ಮರಿಯಪ್ಪ, ಪುನೀತ್‌ಕುಮಾರ್, ಸಂತೋಷ್‌ಕುಮಾರ್, ಶ್ರೀಧರ್ ಮಾಯಪ್ಪ, ಪರಮೇಶ್‌ಗೌಡ, ಕಿಶೋರ್, ಕುಂಬಾರಕೊಪ್ಪಲು ಬಂಗಾರಪ್ಪ, ಪ್ರದೀಪ್ ಉಪಸ್ಥಿತರಿದ್ದರು.

ದೀಪಾವಳಿ ಅಂಗವಾಗಿ ಮೈಸೂರಿಂದ ಜೈಪುರಕ್ಕೆ ವಿಶೇಷ ರೈಲು ಸಂಚಾರ

ಸಂಸದ ಯದುವೀರ್ ಮನವಿಗೆ ರೈಲ್ವೆ ಇಲಾಖೆ ಸ್ಪಂದನೆ



ಮೈಸೂರು, ಅ.16– ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನಿಂದ ರಾಜಸ್ತಾನದ ಜೈಪುರಕ್ಕೆ ಹೆಚ್ಚುವರಿ ರೈಲುಗಳ ಸಂಚಾರಕ್ಕೆ ರೈಲ್ವೆ ಇಲಾಖೆ ಕ್ರಮ ಕೈಗೊಂಡಿದೆ.

ಮೈಸೂರು–ಕೊಡಗು ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನಿಂದ ರಾಜಸ್ಥಾನದ ಜೈಪುರಕ್ಕೆ ತೆರಳುವವರ ಸಂಖ್ಯೆ ಹೆಚ್ಚಾಗಿದ್ದು, ಪ್ರಯಾಣಿಕರ ದಟ್ಟಣೆ ನಿರ್ವಹಣೆ ನಿಟ್ಟಿನಲ್ಲಿ ಹೆಚ್ಚುವರಿ ರೈಲು ಸಂಚಾರ ಕಲ್ಪಿಸಬೇಕೆಂದು ಮನವಿ ಮಾಡಿದ್ದರು. ಸಂಸದರ ಮನವಿಗೆ ಸ್ಪಂದಿಸಿರುವ ರೈಲ್ವೆ ಇಲಾಖೆ, ಮೈಸೂರಿನಿಂದ ಜೈಪುರಕ್ಕೆ ತಾತ್ಕಾಲಿಕವಾಗಿ ಹೊಸ ರೈಲು ಕಲ್ಪಿಸಲು ಕ್ರಮ ಕೈಗೊಂಡಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ನೀಡಿರುವ ಸಂಸದ ಯದುವೀರ್, ಪ್ರಯಾಣಿಕರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದ್ದಾರೆ.

ಸರಳ ಜೀವನದೊಂದಿಗೆ ಸಮಾಜಕ್ಕೆ ಕೊಡುಗೆ ನೀಡಿ

● ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಸಲಹೆ ● ವಿಜಯನಗರ ಸರ್ಕಾರಿ ಮಹಿಳಾ ಕಾಲೇಜಲ್ಲಿ ಪಠ್ಯಪೂರಕ ಚಟುವಟಿಕೆಗೆ ಚಾಲನೆ

ಮೈಸೂರು, ಅ.16– ಆಡಂಬರಕ್ಕೆ ಮಾರುಹೋಗದೆ ಸರಳ ಜೀವನ ನಡೆಸಿದರೆ ಸಮಾಜಕ್ಕೆ ಏನಾದರೂ ಕೊಡುಗೆ ನೀಡಲು ಸಾಧ್ಯ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಮೈಸೂರು ವಿಜಯನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 2025–26ನೇ ಸಾಲಿನ ಪಠ್ಯ ಪೂರಕ ಚಟುವಟಿಕೆಗಳ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣ ಮುಗಿಸಿ ಉನ್ನತ ಮಟ್ಟಕ್ಕೇರಿದಾಗ ಸಾಮಾಜಿಕ ಜವಾಬ್ದಾರಿ ಮರೆಯಬಾರದು. ಸರಳ ಜೀವನದೊಂದಿಗೆ ಸಮಾಜಕ್ಕೆ ಕೊಡುಗೆ ನೀಡಬೇಕು ಎಂದರು.

ಸಾಧಕಿಯಾದರೂ ಸರಳತೆ ಮರೆಯದ ಡಾ.ಸುಧಾಮೂರ್ತಿ ಅವರು ಇನ್ಫೋಸಿಸ್ ಸಂಸ್ಥೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದರು. ಈಗಲೂ ಒಂದಿಲ್ಲೊಂದು ಸಾಮಾಜಿಕ ಸೇವೆಯಲ್ಲಿ ಸಕ್ರಿಯರಾಗುತ್ತಾರೆ. ಮದರ್ ತೆರೇಸಾ ಅವರು ಸಾಮಾಜಿಕ ಸೇವೆಯ ಮೂಲಕ ಇಂದಿಗೂ ಜನಮಾನಸದಲ್ಲಿ ಉಳಿದಿದ್ದಾರೆ. ಸಾವಿತ್ರಿ ಬಾಯಿ ಬಾಪುಲೆ ಶಿಕ್ಷಣ ಕ್ರಾಂತಿ ಮೂಲಕ ಅಜರಾಮರರಾಗಿದ್ದಾರೆ. ಇವರ್‍ಯಾರೂ ಚಿನ್ನಾಭರಣ ಧರಿಸಿದವರಲ್ಲ, ಅದ್ಧೂರಿ, ಆಡಂಬರದ ಜೀವನ ನಡೆಸಿದವರಲ್ಲ. ಸರಳ ಬದುಕಿನಿಂದ ಜೀವನ ಸಾಗಿಸಿದವರು ಸಮಾಜಕ್ಕೆ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ ಎಂದು ತಿಳಿಸಿದರು.

ಬಹುತೇಕ ವಿವಾಹ ಸಮಾರಂಭಗಳು ಅದ್ದೂರಿಯಾಗಿ ನಡೆಯುತ್ತವೆ. ವಧು ಸೇರಿದಂತೆ ಮನೆಯವರು, ಸಂಬಂಧಿಕರೆಲ್ಲಾ ಹೆಚ್ಚು ಚಿನ್ನಾಭರಣ ಧರಿಸುತ್ತಾರೆ. ಬಂದವರೆಲ್ಲಾ ನವ ದಂಪತಿಗಳಿಗೆ ಆಶೀರ್ವದಿಸಿ, ಹರಸುವುದನ್ನು ಬಿಟ್ಟು ಚಿನ್ನಾಭರಣವನ್ನೇ ನೋಡುತ್ತಾರೆ. ಆರ್ಥಿಕ ಪರಿಸ್ಥಿತಿ ಮೀರಿ ಅದ್ಧೂರಿ ಜೀವನ ಮಾಡಲು ಮುಂದಾಗಬಾರದು. ನಮ್ಮ ಸ್ವಂತ ಪರಿಶ್ರಮದಿಂದ ಬದುಕು ಕಟ್ಟಿಕೊಳ್ಳಬೇಕು. ನಾನು ಹತ್ತನೆ ತರಗತಿವರೆಗೆ ಮಾತ್ರ ಓದಿದ್ದರೂ ಜೀವನಾನುಭದಿಂದ ಹಂತ ಹಂತವಾಗಿ ಬೆಳೆದುಬಂದವನು. ಸಹಕಾರ ಮಂತ್ರಿ, ಉನ್ನತ ಶಿಕ್ಷಣ ಸಚಿವನಾಗಿಯೂ ಕೆಲಸ ಮಾಡಿದ್ದೇನೆ. 19 ವಿಶ್ವವಿದ್ಯಾನಿಲಯಗಳ ಕುಲಪತಿಗಳ ಸಭೆ ನಡೆಸಿ, ವಿವಿಯ ಕಾರ್ಯ ಚಟುವಟಿಕೆ ಹಾಗೂ ಗುರಿಯ ಬಗ್ಗೆ ಸಲಹೆ ನೀಡಿದ್ದೇನೆ ಎಂದು ಹೇಳುವ ಮೂಲಕ ವಿದ್ಯೆ ಜೊತೆಗೆ ಜೀವನಾನುಭವವೂ ಮುಖ್ಯ ಎಂದು ಮನವರಿಕೆ ಮಾಡಿದರು.



ಮೈಸೂರು ವಿಜಯನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವತಿಯಿಂದ ಆಯೋಜಿಸಿದ್ದ ಪಠ್ಯಪೂರಕ ಚಟುವಟಿಕೆಗಳ ಸಮಾರಂಭವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು. ಇನ್ಫೋಸಿಸ್ ಸಂಸ್ಥೆಯ ವಿನಾಯಕ್ ಪಿ.ಹೆಗಡೆ, ಸುಧೀರ್, ಹೂಟಗಳ್ಳಿ ನಗರಸಭೆ ಆಯುಕ್ತ ಬಿ.ಎನ್.ಚಂದ್ರಶೇಖರ್, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರಾದ ಪ್ರೊ.ಡಿ.ಎಸ್.ಪ್ರತಿಮಾ, ವಿಜಯನಗರ ಕಾಲೇಜು ಪ್ರಾಂಶುಪಾಲ ಡಾ.ಕೆ.ಸಿ.ಭದ್ರಗಿರಿಯಯ್ಯ ಮತ್ತಿತರರು ಉಪಸ್ಥಿತರಿದ್ದರು.


ಸಾಧಕರು, ಗಣ್ಯರ ಅಮೂಲ್ಯವಾದ ಸಲಹೆಗಳನ್ನು ಕೇಳಿ, ಮರೆಯಬಾರದು. ಅವುಗಳನ್ನು ಬರೆದಿಟ್ಟುಕೊಂಡು ಸದಾ ಮನನ ಮಾಡಿಕೊಳ್ಳಬೇಕು. ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು ಏಕಾಗ್ರತೆಯಿಂದ ಅಧ್ಯಯನ ಮಾಡಬೇಕು. ಮೊಬೈಲ್ ಗೀಳಿಗೆ ಗುರಿಯಾಗದೆ ಶಿಕ್ಷಣದಲ್ಲಿ ಉತ್ತಮ ಸಾಧನೆ ಮಾಡುವ ಗುರಿಯತ್ತ ಮುನ್ನಡೆಯಬೇಕು. ನಿಮ್ಮ ಜೀವನ ರೂಪಿಸಲು ಶ್ರಮಿಸುವ ಕುಟುಂಬವನ್ನು ಎಂದಿಗೂ ಮರೆಯಬಾರದು ಎಂದು ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

ಈ ಕಾಲೇಜಿನ ಮಕ್ಕಳಿಗೆ ಮುಂದಿನ ವಾರದಿಂದ ಊಟದ ವ್ಯವಸ್ಥೆ ಕಲ್ಪಿಸಲು ಇಸ್ಕಾನ್ ಸಂಸ್ಥೆಯವರು ಒಪ್ಪಿದ್ದಾರೆ. ಅದೇ ರೀತಿ ಇನ್ಫೋಸಿಸ್ ಸಂಸ್ಥೆಯವರು ನೀಡಿದ ಲ್ಯಾಪ್‌ಟಾಪ್‌ಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಐಎಎಸ್, ಐಪಿಎಸ್, ಐಎಫ್‌ಎಸ್‌ನಂತಹ ಉನ್ನತ ಹುದ್ದೆಗಳನ್ನು ಪಡೆಯುವ ಗುರಿ ಹೊಂದಬೇಕು. ಮಹಿಳೆಯರು ಉನ್ನತ ಶಿಕ್ಷಣ ಪಡೆದು ಆರ್ಥಿಕವಾಗಿ ಶಕ್ತರಾದರೆ ಕುಟುಂಬದ ಶಕ್ತಿ ಹೆಚ್ಚುತ್ತದೆ ಎಂದು ಸಲಹೆ ನೀಡಿದ ಅವರು, ಇನ್ಫೋಸಿಸ್ ವತಿಯಿಂದ ಪ್ರತ್ಯೇಕ ವಿದ್ಯಾರ್ಥಿನಿಲಯ ನಿರ್ಮಿಸಿಕೊಟ್ಟರೆ, ನಾನು ಊಟದ ವ್ಯವಸ್ಥೆಯ ಜವಾಬ್ದಾರಿ ಹೊರುವುದಾಗಿ ಭರವಸೆ ನೀಡಿದರು.

> ಮೈಸೂರು ನಗರದ ಮತ್ತು ಹೊರಗಿನ ಪ್ರದೇಶಗಳ ಅಭಿವೃದ್ಧಿಗಾಗಿ 'ಗ್ರೇಟರ್ ಮೈಸೂರು' ರಚನೆ ಮಾಡಲೇಬೇಕೆಂದು ಸರ್ಕಾರದ ಮೇಲೆ ಒತ್ತಡ ಹೇರಿದ್ದೇನೆ. ಕೆಲವರು ಹೇಳುತ್ತಿರುವಂತೆ ನನ್ನ ಕುಟುಂಬ ಅಥವಾ ಸಂಬಂಧಿಕರ ಜಮೀನು ಇಲ್ಲ. ತಮ್ಮ ಜಮೀನು ಇರುವ ಕಾರಣಕ್ಕಾಗಿ ಗ್ರೇಟರ್ ಮೈಸೂರು ರಚನೆಗೆ ಮುಂದಾಗಿದ್ದಾರೆ ಎಂಬ ಆರೋಪಕ್ಕೆ ನಾನು ತಲೆಕೆಡಿಸಿಕೊಂಡಿಲ್ಲ.
> -ಜಿ.ಟಿ.ದೇವೇಗೌಡ, ಶಾಸಕರು.

ಇನ್ಫೋಸಿಸ್ ಸಂಸ್ಥೆ ಉಪಾಧ್ಯಕ್ಷ ವಿನಾಯಕ್ ಪಿ.ಹೆಗಡೆ, ವಿದ್ಯಾರ್ಥಿಗಳಿಗೆ ಹಲವು ಉಪಯುಕ್ತ ಸಲಹೆ ನೀಡಿದರು. ಇನ್ಫೋಸಿಸ್ ಸಂಸ್ಥೆಯ ಸುಧೀರ್, ಹೂಟಗಳ್ಳಿ ನಗರಸಭೆ ಆಯುಕ್ತ ಬಿ.ಎನ್. ಚಂದ್ರಶೇಖರ್, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರಾದ ಪ್ರೊ.ಡಿ.ಎಸ್. ಪ್ರತಿಮಾ, ಪ್ರಾಂಶುಪಾಲ ಡಾ.ಕೆ.ಸಿ.ಭದ್ರಗಿರಿಯಯ್ಯ, ನಿವೃತ್ತ ಪ್ರಾಧ್ಯಾಪಕ ಪ್ರೊ.ಜಿ.ಹೆಚ್.ಮಹದೇವಸ್ವಾಮಿ, ಮಹಾರಾಣಿ ಮಹಿಳಾ ಕಲಾ ಕಾಲೇಜು ಪ್ರಾಂಶುಪಾಲೆ ಪ್ರೊ.ಎಂ.ಎಸ್.ಅನಿತಾ, ವಿವಿಧ ಸಮಿತಿಗಳ ಸಂಚಾಲಕರಾದ ಪ್ರೊ.ರಶ್ಮಿ ಚೆನ್ನಯ್ಯ, ಆನಂದ ಕುಮಾರ್, ಮೀರಾ ಓಂಕಾರ ಶೆಟ್ಟಿ, ಡಾ.ಎಸ್. ಮೋಹನ್, ಆರ್.ರಶ್ಮಿ, ಡಾ.ನಮ್ರತಾ, ಡಾ.ರಾಜೇಂದ್ರ, ವಿದ್ಯಾರ್ಥಿ ಪ್ರತಿನಿಧಿಗಳಾದ ಸಂಭ್ರಮಾ ಟಿ.ಗೌಡ, ಪಿ.ಹರ್ಷಿತಾ, ಎನ್.ರಶ್ಮಿ ಲಕ್ಷ್ಮೀ, ಪುಣ್ಯ, ಆರ್.ಮೋನಿಕಾ ಮತ್ತಿತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಮನೆ ಮನೆಗೆ ಪೊಲೀಸ್ ಕಾರ್ಯಾಚರಣೆ ಪುನಾರಂಭ





ಮೈಸೂರು ನಗರಾದ್ಯಂತ ಮನೆ ಮನೆಗೆ ಪೊಲೀಸ್ ಕಾರ್ಯಾಚರಣೆ ಪುನಾರಂಭಿಸಿರುವುದು. ಬಲಚಿತ್ರದಲ್ಲಿ ಸ್ಟಿಕ್ಕರ್ ಅಂಟಿಸಿರುವುದು.

ಮೈಸೂರು,ಅ.16(ಆರ್‌ಕೆ)– ಮೈಸೂರು ನಗರ ಪೊಲೀಸರು ಜನ ಸಂಪರ್ಕದೊಂದಿಗೆ ಅಪರಾಧಗಳ ಪತ್ತೆಹಚ್ಚು ಪ್ರಯತ್ನವಾಗಿ ಇದೀಗ ಮನೆ ಮನೆಗೆ ಪೊಲೀಸ್ ಕಾರ್ಯಾಚರಣೆ ಪುನಾರಂಭಿಸಿದ್ದಾರೆ.

ಗೃಹಸಚಿವ ಡಾ.ಜಿ.ಪರಮೇಶ್ವರ್ ಮಾರ್ಗದರ್ಶನದಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ ಸಲೀಂ ನಿರ್ದೇಶನದ ಮೇರೆಗೆ ಮೈಸೂರು ನಗರ ಪೊಲೀಸ್ ಆಯುಕ್ತಾದ ಸೀಮಾ ಲಾಟ್ಕರ್, ನಗರಾದ್ಯಂತ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆ ಮನೆಗೆ ಪೊಲೀಸ್ ಕಾರ್ಯಾಚರಣೆಗೆ ಸೂಚನೆ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಆರ್.ಎನ್. ಬಿಂದುಮಣಿ, ಠಾಣಾ ಅಧಿಕಾರಿಗಳೊಂದಿಗೆ ಬುಧವಾರ ಕೆಲ ಬಡಾವಣೆಯ ಮನೆಗಳಿಗೆ ತೆರಳಿ ಕುಟುಂಬಸ್ಥರಿಂದ ಪ್ರಾಥಮಿಕ ಮಾಹಿತಿಗಳ ಕಲೆ ಹಾಕುವ ಕಾರ್ಯಕ್ಕೆ ಚಾಲನೆ ನೀಡಿದ್ದರು. ಅದರಂತೆ ಆಯಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಿಯೋಜಿಸಿರುವ ಸಿಬ್ಬಂದಿ ಪ್ರತಿ ಮನೆಗೆ ತೆರಳಿ ಆಯಾಯ ಕುಟುಂಬದ ಮುಖ್ಯಸ್ಥರು, ಸದಸ್ಯರ ಹೆಸರು, ವೃತ್ತಿ, ವೃದ್ಧರು, ಅಂಗವಿಕಲರ ಬಗ್ಗೆ ಮಾಹಿತಿ, ಹೊಂದಿರುವ ವಾಹನಗಳು, ಮನೆಯಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆಯೇ ಎಂಬಿತ್ಯಾದಿ ಮಾಹಿತಿಗಳನ್ನು ಕಲೆ ಹಾಕುತ್ತಿದ್ದಾರೆ. ಒಂದು ವೇಳೆ ನಿಮಗೆ ಯಾವುದೇ ಸಮಸ್ಯೆಯಾದಲ್ಲಿ, ಅನುಮಾನಾಸ್ಪದ ವ್ಯಕ್ತಿಗಳು ಅಥವಾ ವಾಹನಗಳು ಓಡಾಡುತ್ತಿದ್ದಲ್ಲಿ, ಪೊಲೀಸರಿಂದ ಯಾವುದೇ ಸಹಾಯ ಅಗತ್ಯವಿದ್ದಲ್ಲಿ ಇಲ್ಲವೇ ಯಾರಿಂದಲಾದರೂ ಬೆದರಿಕೆ, ಕಿರುಕುಳವಾಗುತ್ತಿದ್ದರೆ ತಕ್ಷಣ ಮಾಹಿತಿ ನೀಡುವಂತೆ ಮನೆಯವರಿಗೆ ಸಲಹೆ ನೀಡಿ, ಬಾಗಿಲ ಬಳಿ ಮಾಹಿತಿ ನೀಡಲು ಅನುಕೂಲವಾಗುವಂತಹ ಸ್ಟಿಕ್ಕರ್‌ವೊಂದನ್ನು ಅಂಟಿಸಲಾಗುತ್ತದೆ ಅದರಲ್ಲಿ ಪೊಲೀಸ್ ಠಾಣೆ ಹೆಸರು, ಸ್ಥಿರ ದೂರವಾಣಿ ಸಂಖ್ಯೆ, ಇನ್ಸ್‌ಪೆಕ್ಟರ್ ಮೊಬೈಲ್ ಸಂಖ್ಯೆ ಎಸಿಪಿ ರವರ ಮೊಬೈಲ್ ಸಂಖ್ಯೆ, ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ, ತುರ್ತು ಸಂದರ್ಭದಲ್ಲಿ ಕರೆ ಮಾಡಬೇಕಾದ 112, 1908, ಹಿರಿಯ ನಾಗರಿಕ ಸಹಾಯ ವಾಣಿ 1090, ಮಹಿಳಾ ಸಹಾಯ ವಾಣಿ 1091, ಸೈಬರ್ ಅಪರಾಧ ಸಹಾಯ ವಾಣಿ 1930 ಹಾಗೂ ಚೈಲ್ಡ್ ಲೈನ್ 1098 ನಮೂದಿಸಲಾಗಿದೆ. ಈ ಹಿಂದೆ ಮೈಸೂರು ನಗರ ಪೊಲೀಸ್ ಆಯುಕ್ತರಾಗಿದ್ದ ಡಾ.ಎಂ.ಎ.ಸಲೀಂ, ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತಂದಿದದ್ದರಲ್ಲದೆ, ಮನೆ ಮನೆಗೆ ಪೊಲೀಸ್ ಕಾರ್ಯಾಚರಣೆಯನ್ನು ಆರಂಭಿಸಿದ್ದರು.

ಮೈಸೂರಲ್ಲಿ ಐ ಲವ್ ಆರ್‌ಎಸ್‌ಎಸ್ ಅಭಿಯಾನ



ಮೈಸೂರಿನ ಚೆಲುವಾಂಬ ಉದ್ಯಾನವನದಲ್ಲಿ ಆರ್‌ಎಸ್‌ಎಸ್ ಅಭಿಮಾನಿಗಳು, ಹಿಂದೂಪರ ಹೋರಾಟಗಾರರು ಮತ್ತು ಸಾರ್ವಜನಿಕರು 'ಐ ಲವ್ ಆರ್‌ಎಸ್‌ಎಸ್' ಅಭಿಯಾನ ನಡೆಸಿದರು. ಈ ಸಂದರ್ಭದಲ್ಲಿ ಮಾಜಿ ಸಂಸದ ಪ್ರತಾಪ್‌ಸಿಂಹ, ಬಿಜೆಪಿ ಹಿರಿಯ ಮುಖಂಡರಾದ ಮೈ.ವಿ.ರವಿಶಂಕರ್, ಎಸ್.ಕೆ.ದಿನೇಶ್, ಸೋಮಶೇಖರರಾಜು, ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್‌ಗೌಡ, ಉಮೇಶ್, ಟೆನಿಸ್ ಗೋಪಿ, ಜಯಣ್ಣ, ನಂಜಪ್ಪ, ಅಶೋಕ್, ಶ್ರೀನಿವಾಸ್, ಮಹೇಶ್, ಹರೀಶ್, ಪ್ರಕಾಶ್, ಆರ್‌ಎಕ್ಸ್ ಪ್ರಕಾಶ್, ಶ್ಯಾಮ್, ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

ಎ. ಸುದರ್ಶನ್ ಕುಮಾರ್‌ಗೆ ಪಿಎಚ್.ಡಿ ಪದವಿ



ಮೈಸೂರು, ಅ. 16– ಡಾ. ಪಿ. ಸರ್ತಾಜ್ ಖಾನ್ ಅವರ ಮಾರ್ಗದರ್ಶನದಲ್ಲಿ ಎ. ಸುದರ್ಶನ್ ಕುಮಾರ್ ಅವರು ಇಂಗ್ಲೀಷ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಚಿವ ಪ್ರಿಯಾಂಕ್ ಖರ್ಗೆಗೆ ಬೆದರಿಕೆ ಕರೆ ಖಂಡಿಸಿ ಪಂಜು ಹಿಡಿದು ಪ್ರತಿಭಟನೆ



ಮೈಸೂರಿನ ಪುರಭವನ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಆವರಣದಲ್ಲಿ ಪಂಜು ಹಿಡಿದು ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಅ.16(ಪಿಎಂ)–ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿಷೇಧಿಸುವಂತೆ ಸರ್ಕಾರಕ್ಕೆ ಪತ್ರ ಬರೆದ ಕಾರಣಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಬೆದರಿಕೆಯೊಡ್ಡುತ್ತಿರುವ ಕಿಡಿಗೇಡಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ಜಾತಿ ವಿಭಾಗದ ವತಿಯಿಂದ ಗುರುವಾರ ಪಂಜು ಹಿಡಿದು ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಪುರಭವನ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಪ್ರಜಾಪ್ರಭುತ್ವ ವಿರೋಧಿ ಆರ್ ಎಸ್‌ಎಸ್ ಅನ್ನೇ ನಿಷೇಧಿಸಿ, ಕೋಮುವಾದಿ ಆರ್‌ಎಸ್‌ಎಸ್ ಸಂಘಟನೆ ಬ್ಯಾನ್ ಆಗಲಿ ಎಂಬಿತ್ಯಾದಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರಿಯಾಂಕ್ ಖರ್ಗೆಯವರಿಗೆ ದೂರವಾಣಿ ಕರೆ ಮೂಲಕ ಅಶ್ಲೀಲ ಪದಗಳನ್ನು ಬಳಸಿ ನಿಂದಿಸಲಾಗುತ್ತಿದೆ. ಅಲ್ಲದೆ, ಸಾಮಾಜಿಕ ಜಾಲತಾಣಗಳ ಮೂಲಕ ಬೆದರಿಕೆ ಹಾಕಲಾಗುತ್ತಿದೆ. ಇಂತಹ ಆರ್‌ಎಸ್‌ಎಸ್ ಗೂಂಡಾಗಳನ್ನು ಗಡಿಪಾರು ಮಾಡಬೇಕು ಎಂದು ಕಿಡಿಕಾರಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನರೇಂದ್ರ, ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ನಡೆಸುವ ಸಂಬಂಧ ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಪ್ರಿಯಾಂಕ್ ಖರ್ಗೆ, ಸರ್ಕಾರಕ್ಕೆ ಪತ್ರ ಬರೆದಿದ್ದರು. ಮಹನೀಯರ ಜಯಂತಿ ಆಚರಿಸಲೂ ಪೊಲೀಸ್ ಮತ್ತು ಸ್ಥಳೀಯ ಸಂಸ್ಥೆಗಳಿಂದ ಅನುಮತಿ ಪಡೆದು ಆಯೋಜಿಸುವ ವ್ಯವಸ್ಥೆ ಇದೆ. ಆದರೆ ಆರ್‌ಎಸ್‌ಎಸ್‌ನವರು ಬಿಕಾಬಿಟ್ಟಿಯಾಗಿ ಮನಬಂದಂತೆ ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಪಥಸಂಚಲನ ನಡೆಸುವ ಮೂಲಕ ಅಶಾಂತಿ ಸೃಷ್ಟಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸುಪ್ರೀಂಕೋರ್ಟ್ ಸಿಜೆಐ ಅವರತ್ತ ಶೂ ಎಸೆಯಲೆತ್ನ ನಡೆಸಿದ ಘಟನೆ ವಿರುದ್ಧ ಆರ್‌ಎಸ್‌ಎಸ್‌ನವರು ಒಬ್ಬರೂ ಬಾಯಿಬಿಚ್ಚಲ್ಲ. ಆರ್‌ಎಸ್‌ಎಸ್ ಅನ್ನು ಬ್ಯಾನ್ ಮಾಡಬೇಕೆಂದು ಪ್ರಿಯಾಂಕ್ ಖರ್ಗೆಯವರು ಹೇಳಿಲ್ಲ. ಆದರೆ ನಾವು ಅದನ್ನು ಬ್ಯಾನ್ ಮಾಡಲೇಬೇಕೆಂದು ಒತ್ತಾಯಿಸುತ್ತಿದ್ದೇವೆ ಎಂದು ಕಿಡಿಕಾರಿದರು.

ಕೆಪಿಸಿಸಿ ಸಂಯೋಜಕ ಎಸ್.ವಿಜಯ ಕುಮಾರ್, ದಲಿತ ಸಂಘರ್ಷ ಸಮಿತಿ ಮುಖಂಡ ಕಲ್ಲಹಳ್ಳಿ ಕುಮಾರ್, ದಲಿತ ಸಂಘರ್ಷ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರಾದ ಗೋವಿಂದ ರಾಜು, ಬಬಿತಾ, ಪುಟ್ಟಸ್ವಾಮಿ, ಕುಂಬೇರ, ಪ್ರಸನ್ನ, ಮಹೇಶ್, ಮಂಜು, ಧನಗಳ್ಳಿ ಕುಮಾರ್, ಗುರು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮಹಾರಾಜ ಕಾಲೇಜಲ್ಲಿ ಗ್ರಂಥಾಲಯ ಶುಲ್ಕ ಇಳಿಕೆ, ಮೂಲ ಸೌಕರ್ಯಕ್ಕೆ ಆಗ್ರಹಿಸಿ ವಿದ್ಯಾರ್ಥಿ ಹೋರಾಟ ಸಮಿತಿ ಪ್ರತಿಭಟನೆ



ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಎಐಡಿಎಸ್‌ಓ ಸಹಯೋಗದೊಂದಿಗೆ ಮೈಸೂರಿನ ಮಹಾರಾಜ ಕಾಲೇಜು ವಿದ್ಯಾರ್ಥಿ ಹೋರಾಟ ಸಮಿತಿ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಅ.16(ಎಂಕೆ)– ಮೈಸೂರು ಮಹಾರಾಜ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಲ್ಲದೆ ಹೆಚ್ಚಿಸಿರುವ ಗ್ರಂಥಾಲಯ ಶುಲ್ಕವನ್ನು ಹಿಂಪಡೆಯುವಂತೆ ಆಗ್ರಹಿಸಿ, ಎಐಡಿಎಸ್‌ಓ(ಅಖಿಲ ಭಾರತ ಪ್ರಜಾಪ್ರಭುತ್ವ ವಿದ್ಯಾರ್ಥಿ ಸಂಘಟನೆ) ಸಹಯೋಗದೊಂದಿಗೆ ಮಹಾರಾಜ ಕಾಲೇಜು ವಿದ್ಯಾರ್ಥಿ ಹೋರಾಟ ಸಮಿತಿ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಕಾಲೇಜಿನ ತರಗತಿಗಳು, ಶೌಚಾಲಯ, ಜೂನಿಯರ್ ಮತ್ತು ಸೀನಿಯರ್ ಬಿಎ ಹಾಲ್‌ನಲ್ಲಿ ಸ್ವಚ್ಛತೆ ಎಂಬುದಿಲ್ಲ. ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ತರಗತಿಗಳಲ್ಲಿ ಲೈಟ್, ಫ್ಯಾನ್‌ಗಳಿಲ್ಲ ಎಂದು ಕಾಲೇಜಿನ ದುಸ್ಥಿತಿಯನ್ನು ತೆರೆದಿಟ್ಟ ವಿದ್ಯಾರ್ಥಿಗಳು, ಕೂಡಲೇ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಆಗ್ರಹಿಸಿದರು.

ಹಾಗೆಯೇ ಏರಿಕೆ ಮಾಡಿರುವ ಲೈಬ್ರರಿ ಶುಲ್ಕವನ್ನು ಆದೇಶವನ್ನು ಹಿಂಪಡೆಯಬೇಕು. ವಾಚನಾಲಯಕ್ಕೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ದಿನ ಪತ್ರಿಕೆ, ವಾರ ಮತ್ತು ವೃತ್ತ ಪತ್ರಿಕೆಗಳು ಲಭ್ಯವಾಗುತ್ತಿಲ್ಲ. ದ್ವಿತೀಯ ವರ್ಷದ ಬಿಕಾಂನಲ್ಲಿ ತೆರಿಗೆ(Income tax) ವಿಷಯಕ್ಕೆ ಹಾಗೂ ಅಂತಿಮ ವರ್ಷದ ಬಿಕಾಂನಲ್ಲಿ 'ಇನ್ಸೂರೆನ್ಸ್' ವಿಷಯಕ್ಕೆ ಉಪನ್ಯಾಸಕರ ನೇಮಕವಾಗಬೇಕು ಎಂದು ಒತ್ತಾಯಿಸಿದರು.

ಐಡಿ ಕಾರ್ಡ್ ಕೊಡದಿದ್ದರೂ ಶುಲ್ಕ ಪಡೆದುಕೊಳ್ಳಲಾಗಿದೆ. ಹಾಸ್ಟೆಲ್‌ನ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕಾರ್ಯ ನಿರ್ವಹಣೆ ವ್ಯವಸ್ಥಿತವಾಗಿ ನಡೆಯುತ್ತಿಲ್ಲ. ಹಾಗೆಯೇ ಪತ್ರಿಕೋದ್ಯಮ ವಿಭಾಗಕ್ಕೆ ಅಗತ್ಯವಾಗಿ ಬೇಕಾದ ಕಂಪ್ಯೂಟರ್ ಮುಂತಾದ ಕಲಿಕಾ ಸಲಕರಣೆಗಳನ್ನು ಒದಗಿಸಬೇಕು. ಇಲ್ಲವಾದರೆ ತರಗತಿಗಳನ್ನು ಬಹಿಸ್ಕರಿಸಲಾಗುವುದು ಎಂದು ಎಚ್ಚರಿಸಿದರು. ಬಳಿಕ ಮೈಸೂರು ವಿವಿ ಕುಲಸಚಿವರಿಗೆ ಕಾಲೇಜಿನ ಪ್ರಾಂಶುಪಾಲರ ಮೂಲಕ ಮನವಿ ಸಲ್ಲಿಸಲಾಯಿತು.

ಜಾನಪದ ನೃತ್ಯಕ್ಕೆ ಶಾಸ್ತ್ರೀಯತೆಯ ಕೊರತೆ: ಪಿಹೆಚ್.ಡಿ ಸಂಶೋಧನೆ ನಡೆಯುವ ಅಗತ್ಯವಿದೆ

ಹಂಸಲೇಖ ದೇಸಿ ವಿದ್ಯಾಸಂಸ್ಥೆಯ ಪ್ರಾಂಶುಪಾಲ ಡಾ.ಹಂಸಲೇಖ ಅಭಿಪ್ರಾಯ

ಮೈಸೂರು,ಅ.16(ಜಿಎ)–ಜಾನಪದ ನೃತ್ಯಕ್ಕೆ ಶಾಸ್ತ್ರೀಯತೆ ಕೊರತೆ ಇದೆ. ಆದ್ದರಿಂದ ಈ ವಿಷಯದಲ್ಲಿ ಪಿಎಚ್.ಡಿ ಸಂಶೋಧನೆಗಳು ನಡೆದು ಮಾನ್ಯತೆ ದೊರೆಯುವಂತಾಗಬೇಕಿದೆ ಎಂದು ಸಂಗೀತ ನಿರ್ದೇಶಕ, ಹಂಸಲೇಖ ದೇಸಿ ವಿದ್ಯಾಸಂಸ್ಥೆಯ ಪ್ರಾಂಶುಪಾಲ ಡಾ.ಹಂಸಲೇಖ ತಿಳಿಸಿದರು.

ಮೈಸೂರಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಹಂಸಲೇಖ ದೇಸಿ ವಿದ್ಯಾ ಸಂಸ್ಥೆಯ ಸರ್ಟಿಫಿಕೇಟ್ ಕೋರ್ಸ್‌ನ ಪ್ರಮಾಣಪತ್ರ ವಿತರಣೆ, ಐ ಸಿಂಗ್ ಮೂರ್ದನಿ ಸ್ಪರ್ಧಾ ವಿಜೇತರಿಗೆ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿಯಲ್ಲಿ ಆಯೋಜಿಸಿದ್ದ ಹಂಸಲೇಖ ದೇಸಿ ವಿದ್ಯಾಸಂಸ್ಥೆಯ ಸರ್ಟಿಫಿಕೇಟ್ ಕೋರ್ಸ್‌ನ ಪ್ರಮಾಣಪತ್ರ ವಿತರಣೆ, ಐ ಸಿಂಗ್ ಮೂರ್ದನಿ ಸ್ಪರ್ಧಾ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜಾನಪದ ಸಂಗೀತದಂತೆಯೇ ಜಾನಪದ ನೃತ್ಯಕ್ಕೂ ಶಾಸ್ತ್ರೀಯ ಮಾನ್ಯತೆ ದೊರೆಯಬೇಕಿದೆ. 22 ವರ್ಷದ ಪರಿಶ್ರಮದ ಫಲವಾಗಿ 5ನೇ ಶಾಸ್ತ್ರೀಯವಾದ ಜಾನಪದವು ಶೈಕ್ಷಣಿಕ ಮನ್ನಣೆ ಪಡೆದುಕೊಂಡಿದೆ. ಅಂದು ಬಿತ್ತಿದ ಬೀಜ ಇದೀಗ ಫಲ ಕೊಡುತ್ತಿದೆ. ಇದಕ್ಕೆ ಸಾಕ್ಷಿ ಈ ಕಾರ್ಯಕ್ರಮ ನಡೆಯುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಜಾನಪದ ಸಂಗೀತಕ್ಕೆ ಹೊಸ ಶಾಸ್ತ್ರೀಯತೆ ಸ್ಪರ್ಶ ನೀಡುವ ಮೂಲಕ ಅದನ್ನು ಮುಂದಿನ ತಲಾಂತರಗಳವರೆಗೆ ಉಳಿಸಿ, ಬೆಳೆಸುವ ಕೆಲಸವಾಗಬೇಕಿದೆ. ಅದಕ್ಕಾಗಿ ಜಾನಪದಗಳಿಗೆ ಮೂಲವಾಗಿರುವ ಐದು ದನಿಗಳನ್ನು ಗುರುತಿಸಿ ಅವಕ್ಕೆ 'ಐದನಿ' ಗಳೆಂದು ಹೆಸರಿಡಲಾಗಿದೆ. ಐದನಿ ಸಂಗೀತ ಮಕ್ಕಳ ಬಾಯಿಯಲ್ಲಿ ನಲಿಯುವಂತೆ ಮಾಡಬೇಕಿದೆ. ಸಮಾಜದಲ್ಲಿ ಸಮಾನತೆ, ಸೌಹಾರ್ದತೆ, ಸಾಮರಸ್ಯ ಬಿತ್ತುವ ಕೆಲಸವನ್ನೂ ಐದನಿ ಸಂಗೀತ ಮಾಡಲಿ ಎಂದರು.

ಎರಡು ದಶಕಗಳ ಕಾಲ ಇದಕ್ಕೆ ಅನೇಕ ಪ್ರಯತ್ನ ಮಾಡಿರುವೆ. ವಿಫಲವಾದದ್ದಕ್ಕೆ ಪೇಚಾಡಿರುವೆ. ಇಂತಹ ಸಂದರ್ಭದಲ್ಲಿ ಸಂಗೀತ ವಿವಿ ನನಗೆ ಜಾನಪದ ಸಂಗೀತದಲ್ಲಿ ಡಿ.ಲಿಟ್ ಮಾಡಲು ಅವಕಾಶ ನೀಡಿತು. ಇದು ಇದಕ್ಕೆ ಮಾನ್ಯತೆ ದೊರೆಯಲು ಕಾರಣವಾಯಿತು. ಅಂತೆಯೇ, ಜಾನಪದ ನೃತ್ಯಕ್ಕೂ ಶಾಸ್ತ್ರೀಯತೆ ಮಾನ್ಯತೆ ಪಡೆದುಕೊಳ್ಳುವ ಈ ನಿಟ್ಟಿನಲ್ಲಿ ಕೆಲಸಗಳು ಆಗಬೇಕು ಎಂದರು.

ಶಾಸ್ತ್ರೀಯ ಶಿಸ್ತಿನ ಕಲಿಕೆ ಸಂಗೀತಕ್ಕೂ ಮತ್ತು ಭಾವಕ್ಕೂ ಎರಡಕ್ಕೂ ಬೆಲೆ, ಗೌರವ ತಂದುಕೊಡುತ್ತದೆ. ಆದರೆ ಈಗಿನ ಮಕ್ಕಳು ಮೊಬೈಲ್‌ನಲ್ಲೇ ಮುಳುಗಿ ಹೋಗಿದ್ದಾರೆ. ಅದುವೇ ಅವರಿಗೆ ಎಲ್ಲವನ್ನೂ ಕೊಡುತ್ತಿದೆ. ವಿನಯತೆ ಮಾತ್ರ ಕಲಿಸುತ್ತಿಲ್ಲ. ಇತ್ತೀಚೆಗೆ ಕೌನ್ ಬನೇಗಾ ಕರೋಡ್‌ಪತಿ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ರಾಯಭಾರಿಯಾಗಿರುವ ಹಿರಿಯ ನಟ ಅಮಿತಾಬ್ ಬಚ್ಚನ್ ಅವರನ್ನು 10 ವರ್ಷದ ಬಾಲಕ ಏಕವಚನದಲ್ಲಿ ಮಾತನಾಡಿಸುತ್ತಾನೆ. ಇದುವೇ ಮೊಬೈಲ್ ಕರುಣಿಸಿದ ಜ್ಞಾನ. ಅದು ಬದುಕಿನ ಶಿಸ್ತನ್ನು ಕಲಿಸುತ್ತಿಲ್ಲ. ಜಾನಪದ ಉತ್ಪನ್ನವಾಗಿರುವ 'ಐದನಿ' ಈ ಕೊರತೆಯ ನೀಗಿಸುವ ಕೆಲಸ ಮಾಡಲಿ ಎಂದು ತಿಳಿಸಿದರು.

ವಿಜೇತರಿಗೆ ಚಿನ್ನ, ಬೆಳ್ಳಿ ಪದಕ : ಐ ಸಿಂಗ್ ಮೂರ್ದನಿ ಸ್ಪರ್ಧಾ ವಿಜೇತರಾದ ಐಶ್ವರ್ಯ ವಿಠ್ಠಲ್ ಅವರಿಗೆ ಚಿನ್ನದ ಪದಕ, ಸುಹಾಸ್ ನಂದೀಶ್ ಅವರಿಗೆ ಬೆಳ್ಳಿ ಪದಕ ಪ್ರದಾನ ಮಾಡಲಾಯಿತು.

ಬಿ.ದಾಮಿನಿ, ಹೆಚ್.ಬಿ.ದಕ್ಷಿತಾ, ಶಶಿ ಸಂದೀಪ್ ಅವರಿಗೆ ರನ್ನರ್ ಅಪ್ ಪ್ರಶಸ್ತಿ, ಬಿ.ಎಸ್.ನಿರಂಜನ್‌ಪ್ರಸಾದ್, ಸಿ.ಬಿ. ನಾಗೇಶ್, ಎನ್.ಎಂ.ಅರ್ಪಿತಾ, ಪಿ.ಸಿ. ಲತಾ, ಜೆ.ಪೂರ್ವಿತಾ ಅವರಿಗೆ ಸಮಾಧಾನಕರ ಪ್ರಶಸ್ತಿಯನ್ನು ನೀಡಲಾಯಿತು. 3000 ಸ್ಪರ್ಧಿಗಳು ಭಾಗವಹಿಸಿದ್ದರು. ಅಂತಿಮ ಸುತ್ತಿಗೆ 36 ಸ್ಪರ್ಧಿಗಳನ್ನು ಆಯ್ಕೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಪರೀಕ್ಷಾಂಗ ಕುಲಸಚಿವ ಡಾ.ಎಂ.ಜಿ.ಮಂಜುನಾಥ್, ಹಂಸಲೇಖಾ ಸಂಗೀತ ಶಾಲೆಯ ಪ್ರಾಂಶುಪಾಲೆ ಲತಾ ಹಂಸಲೇಖ ಉಪಸ್ಥಿತರಿದ್ದರು.

ಶೀಘ್ರದಲ್ಲೇ ಹೆಚ್‌ಎಂಟಿ, ಭದ್ರಾವತಿ ಉಕ್ಕು ಕಾರ್ಖಾನೆಗೆ ಮರು ಜೀವ

● ದೀಪಾವಳಿ ನೆಪದಲ್ಲಿ ಎ ಖಾತಾ ಸೋಗಿನಲ್ಲಿ ಜನರಿಂದ ಸುಲಿಗೆ ● ಶೀಘ್ರವೇ ಮೈಷುಗರ್ ಶಾಲೆಗೆ ಹತ್ತು ಕೋಟಿ ಬಿಡುಗಡೆ

ಮಂಡ್ಯ ಜಿಲ್ಲೆಯಲ್ಲಿ ಕೋಟ್ಯಂತರ ರೂ. ವೆಚ್ಚದಲ್ಲಿ ಅನೇಕ ಯೋಜನೆಗಳಿಗೆ ಚಾಲನೆ ಕೊಟ್ಟಿದ್ದೇನೆ. ಈ ವರ್ಷ ಶಾಲಾ ಕಟ್ಟಡ, ಬಸ್ ನಿಲ್ದಾಣಗಳನ್ನು ಸಿಎಸ್‌ಆರ್ ನಿಧಿಯ ಮೂಲಕ ಅನುಷ್ಠಾನ ಮಾಡುತ್ತಿದ್ದೇನೆ. ಮೈಶುಗರ್ ಶಾಲೆ ಅಭಿವೃದ್ಧಿಗೂ ಅದೇ ನಿಧಿಯಿಂದ ಹಣ ನೀಡಲಾಗುತ್ತಿದೆ. ಅನುದಾನ ತರಿಸಿ ಕೊಡುವ ಜವಾಬ್ದಾರಿ ನನ್ನದು. ಮೈಶುಗರ್ ಶಾಲೆಗೆ ಇತಿಹಾಸ ಇದೆ. ಯಾರೂ ಸಣ್ಣದಾಗಿ ಮಾತನಾಡುವ ಅವಶ್ಯಕತೆ ಇಲ್ಲ – ಹೆಚ್.ಡಿ.ಕುಮಾರಸ್ವಾಮಿ.

ಮಂಡ್ಯ, ಅ.16– ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ರಾಜ್ಯದ ಪ್ರತಿಷ್ಠಿತ ಹೆಚ್‌ಎಂಟಿ ಮತ್ತು ಭದ್ರಾವತಿಯ ಸರ್ ಎಂ.ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳಿಗೆ ಮರುಜೀವ ಕೊಡಲು ತೀರ್ಮಾನಿಸಿದ್ದು, ಈ ಕಾರ್ಯಕ್ಕೆ ಅಗತ್ಯ ಸಿದ್ಧತೆ ಆರಂಭಿಸಲಾಗಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಗುರುವಾರ ನಗರದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಎರಡು ಕಾರ್ಖಾನೆಗಳ ಪುನರುಜ್ಜೀವನಗೊಳಿಸುವ ನಿಟ್ಟಿನಲ್ಲಿ ಸಂಬಂಧಿಸಿದವರೊಂದಿಗೆ ಮಾತುಕತೆಯನ್ನು ನಡೆಲಾಗಿದೆ ಎಂದು ಸ್ಪಷ್ಟಪಡಿಸಿದರು.

ನೀತಿ ಆಯೋಗದ ಸದಸ್ಯರು ಆಗಿರುವ ಡಾ.ವಿ.ಕೆ.ಸಾರಸ್ವತ ಅವರು ಹೆಚ್‌ಎಂಟಿ ಕಾರ್ಖಾನೆಯ ಪುನಶ್ಚೇತನದ ಬಗ್ಗೆ ಮಹತ್ವದ ವರದಿ ನೀಡಿದ್ದಾರೆ. ಬೃಹತ್ ಕೈಗಾರಿಕೆ ಸಚಿವಾಲಯದ ಉನ್ನತ ಅಧಿಕಾರಿಗಳು, ಹೆಚ್‌ಎಂಟಿ ವ್ಯವಸ್ಥಾಪಕ ನಿರ್ದೇಶಕರು ಹಾಗೂ ವಿ.ಕೆ.ಸಾರಸ್ವತ ಅವರೊಂದಿಗೆ ನವದೆಹಲಿಯಲ್ಲಿ ಹಲವು ಸುತ್ತಿನ ಉನ್ನತ ಮಟ್ಟದ ಸಭೆಗಳನ್ನು ನಡೆಸಲಾಗಿದೆ. ಜಪಾನ್ ದೇಶದಿಂದ ತಾಂತ್ರಿಕ ಸಹಕಾರ ಪಡೆಯುವ ಬಗ್ಗೆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರ ನೇತೃತ್ವದ ತಂಡವನ್ನು ಆ ದೇಶಕ್ಕೆ ಕಳಿಸಿದ್ದೆ ಎಂದು ಮಾಹಿತಿ ನೀಡಿದರು.

ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪನೆ ಮಾಡಬೇಕು ಎಂಬುದು ಜನರ ಅಭಿಲಾಷೆಯಾಗಿದೆ. ರಾಜ್ಯ ಸರ್ಕಾರದ ಸಹಕಾರ ಕೇಳಿದ್ದೇನೆ ಹಾಗೂ ದೆಹಲಿ ಮಟ್ಟದಲ್ಲಿಯೂ ಮಂಡ್ಯದಲ್ಲಿ ಉದ್ಯಮ ಸ್ಥಾಪಿಸುವ ಬಗ್ಗೆ ಹಲವಾರು ಉದ್ದಿಮೆದಾರರ ಜತೆ ಮಾತುಕತೆ ನಡೆಸಿದ್ದೇನೆ ಎಂದು ಕೇಂದ್ರ ಸಚಿವರು ಮಾಹಿತಿ ನೀಡಿದರು.

ಎ ಖಾತಾ ಸೋಗಿನಲ್ಲಿ 15,000 ಕೋಟಿ ಸುಲಿಗೆ: ದೀಪಾವಳಿ ಕೊಡುಗೆ ಕೊಡುತ್ತಿದ್ದೇವೆ ಎಂದು ಹೇಳಿ ರಾಜ್ಯ ಸರ್ಕಾರ ಬೆಂಗಳೂರು ಜನರ ಕಿಸೆಗೆ ಕೈ ಹಾಕಿದೆ. ಎ ಖಾತಾ ಸೋಗಿನಲ್ಲಿ 15,000 ಕೋಟಿ ಸುಲಿಗೆ ಮಾಡುತ್ತಿದೆ. ದೀಪಾವಳಿ ಕೊಡುಗೆ ಎಂದರೆ ಏನೋ ನಮಗೆ ದೊಡ್ಡ ಕೊಡುಗೆಯನ್ನು ಕೊಡುತ್ತದೆ ಎಂದು ಜನರು ಭಾವಿಸಿದ್ದರು. ದೊಡ್ಡ ದೊಡ್ಡ ಜಾಹೀರಾತುಗಳನ್ನು ನೋಡಿ ನಾನು ಕೂಡ ಹಾಗೆಯೇ ಅಂದುಕೊಂಡಿದ್ದೆ. ಆದರೆ, ಅದು ದೀಪಾವಳಿ ಹೆಸರಿನಲ್ಲಿ ಜನರಿಗೆ ಮಾಡುತ್ತಿರುವ ಮಹಾನ್ ದೋಖಾ ಎಂದು ಕಿಡಿಕಾರಿದರು.

ಬೆಂಗಳೂರು ನಗರ ಜನರಿಗೆ ದೀಪಾವಳಿ ಕೊಡುಗೆ ನೀಡಲು ಶಾಕ್ ಕೊಡುತ್ತಿದ್ದಾರೆ. ಅದು ಹೇಗಿದೆ ಎಂದರೆ, ಬಿ.ಖಾತಾದಿಂದ ಎ.ಖಾತಾಗೆ ಪರಿವರ್ತನೆ ಮಾಡುವ ಅರ್ಜಿಗೆ 500 ರೂಪಾಯಿ ಶುಲ್ಕ ತುಂಬಬೇಕು. ಆ ಶುಲ್ಕದ ಹೆಸರಿನಲ್ಲಿಯೇ ನೂರಾರು ಕೋಟಿ ರೂಪಾಯಿ ಸುಲಿಗೆ ಮಾಡುತ್ತಿದೆ. 30/40 ನಿವೇಶನಕ್ಕೆ 4ರಿಂದ 8 ಲಕ್ಷ ರೂಪಾಯಿವರೆಗೂ ಕಿತ್ತುಕೊಳ್ಳುತ್ತಿದ್ದಾರೆ. ಮೊದಲು 10ರಿಂದ 13 ಸಾವಿರ ರೂಪಾಯಿ ಅಷ್ಟನ್ನೇ ಕಟ್ಟಬೇಕಿದ್ದ ಬೆಂಗಳೂರು ಜನರು ಇನ್ನು ಮುಂದೆ ಲಕ್ಷಗಳಲ್ಲಿ ಹಣ ಕಟ್ಟಬೇಕಿದೆ. ಎ ಖಾತಾ ದಂಧೆಯ ಮೂಲಕ ರಾಜ್ಯ ಸರ್ಕಾರ 15,000 ಕೋಟಿ ರೂಪಾಯಿ ವಸೂಲಿ ಮಾಡುತ್ತಿದೆ ಎಂದು ಆರೋಪ ಮಾಡಿದರು.

ಕೆಲ ದಿನಗಳಿಂದ ಕಾರಣಾಂತರಗಳಿಂದ ಮಂಡ್ಯಕ್ಕೆ ಭೇಟಿ ಕೊಡಲು ಆಗಿರಲಿಲ್ಲ. ಆದರೂ ನಾನು ಅಧಿಕಾರಿಗಳ ಜತೆ ನಿರಂತರ ಸಂಪರ್ಕದಲ್ಲಿದ್ದು ಪ್ರತಿನಿತ್ಯ ಜಿಲ್ಲೆಯ ಮಾಹಿತಿ ಪಡೆಯುತ್ತಿದ್ದೆ. ಜಯಚಾಮರಾಜೇಂದ್ರ ಮಾರುಕಟ್ಟೆ ಮಳಿಗೆ ಉದ್ಘಾಟನೆಗೆ ಬಂದಿದ್ದೇನೆ. ಕೆಲಸದ ಒತ್ತಡದಲ್ಲೂ ಜಿಲ್ಲೆಗೆ ಹೆಚ್ಚು ಸಮಯ ಮೀಸಲು ಇಡುತ್ತೇನೆ. ಜತೆಗೆ ರಾಜ್ಯದ ಪ್ರವಾಸ ಮಾಡುವೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪನೆ ಮಾಡುವ ಬಗ್ಗೆ ಸೂಕ್ತ ಸ್ಥಳ ಹುಡುಕುವಂತೆ ಜಿಲ್ಲಾಧಿಕಾರಿಗಳಿಗೆ ಅವರಿಗೆ ತಿಳಿಸಿದ್ದೇನೆ. ಅವರು ಜಾಗಕ್ಕಾಗಿ ಪ್ರಯತ್ನ ಮಾಡುತ್ತಿದ್ದಾರೆ. ಕೈಗಾರಿಕೆ ಸ್ಥಾಪನೆಗೆ ಮೂಲಸೌಕರ್ಯ ಕೊಡುವ ಕೆಲಸ ರಾಜ್ಯ ಸರ್ಕಾರ ಮಾಡಬೇಕು. ಉಳಿದಂತೆ ನಾನು ಯಾರಿಗಾದರೂ ಖಾಸಗಿ ಹೂಡಿಕೆದಾರಿಗೆ ಹೇಳಿ ಕೈಗಾರಿಕೆ ಮಾಡಿಸುವ ಪ್ರಯತ್ನ ಮಾಡುತ್ತಿದ್ದೇನೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ಮಾಜಿ ಶಾಸಕ ಕೆ.ಟಿ. ಶ್ರೀಕಂಠೇಗೌಡ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ಮನ್‌ಮುಲ್ ನಿರ್ದೇಶಕ ಬಿ.ಆರ್.ರಾಮಚಂದ್ರ, ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್ ಉಪಸ್ಥಿತರಿದ್ದರು.



ಮಂಡ್ಯದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಮಾರುಕಟ್ಟೆಯನ್ನು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು.

ನನಗೆ ಸಿಕ್ಕಿರುವ ಎರಡು ಖಾತೆಗಳ ಸಹಾಯದಿಂದ ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಒಂದಿಷ್ಟು ಕೆಲಸ ಮಾಡಲು ಪ್ರಯತ್ನ ಮಾಡುತ್ತಿದ್ದೇನೆ. ರಾಜ್ಯ ಸರ್ಕಾರವು ಕೇಂದ್ರದ ಜೊತೆ ಉತ್ತಮ ರೀತಿಯಲ್ಲಿ ಬಾಂಧವ್ಯ ಹೊಂದಿರಬೇಕು. ಹಾಗಾದಾಗ ಮಾತ್ರ ರಾಜ್ಯಕ್ಕೆ ಕೇಂದ್ರದಿಂದ ಹೆಚ್ಚು ಅನುಕೂಲ ಆಗುತ್ತದೆ. ಎಲ್ಲ ವಿಷಯಕ್ಕೂ ರಾಜಕಾರಣ ತರುವುದು ಅನಗತ್ಯ – ಕುಮಾರಸ್ವಾಮಿ

ಮೈಶುಗರ್ ಶಾಲೆ ಅಭಿವೃದ್ಧಿಗೆ 10 ಕೋಟಿ ರೂ. ಶೀಘ್ರ ಬಿಡುಗಡೆ

ಮಂಡ್ಯ ಜಿಲ್ಲೆಯ ಹೆಗ್ಗುರುತುಗಳಲ್ಲಿ ಒಂದಾಗಿರುವ ಮೈಶುಗರ್ ಶಾಲೆಯನ್ನು ಅಭಿವೃದ್ಧಿಪಡಿಸುವ ಹಿನ್ನೆಲೆಯಲ್ಲಿ ಶೀಘ್ರವೇ 10 ಕೋಟಿ ರೂ. ಒದಗಿಸಲಾಗುವುದು. ಯಾವುದೇ ಕಾರಣಕ್ಕೂ ಖಾಸಗಿಯವರಿಗೆ ಈ ಶಾಲೆಯನ್ನು ಕೊಡುವುದು ಬೇಡ ಎಂದು ಹೇಳಿದ್ದೇನೆ. ಅಲ್ಲದೆ, ಶಾಲೆಯ ಅಭಿವೃದ್ಧಿಗೆ ನೆರವು ನೀಡುವ ಭರವಸೆ ನೀಡಿದ್ದೆ. ಅದರ ವಿಚಾರದಲ್ಲಿ ನಮ್ಮ ತಂಡವೊಂದು ಮಂಡ್ಯದಲ್ಲಿ ಕೆಲಸ ಮಾಡುತ್ತಿದೆ. ಯಾರು ಅದರ ಬಗ್ಗೆ ಲಘುವಾಗಿ ಮಾತನಾಡುವ ಅವಶ್ಯಕತೆ ಇಲ್ಲ. ಮೈಷುಗರ್ ಶಾಲೆಯಿಂದ ಈಗಾಗಲೇ 10 ಕೋಟಿ ರೂ. ಅನುದಾನಕ್ಕೆ ಅರ್ಜಿ ಕೊಟ್ಟಿದ್ದಾರೆ. ಸದ್ಯದಲ್ಲೆ ಆ ಹಣ ಬಿಡುಗಡೆಯಾಗಲಿದೆ. ಯಾವುದೇ ಅನುಮಾನ ಬೇಡ –ಹೆಚ್.ಡಿ.ಕೆ

ಮಂಡ್ಯದಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಮಾರುಕಟ್ಟೆ ಉದ್ಘಾಟನೆ

ಹಳೆ ವರ್ತಕರಿಗೆ ಮಳಿಗೆಗಳ ಹಂಚಿಕೆ: ಹೆಚ್ಡಿಕೆ

ಮಂಡ್ಯ, ಅ.16– ನಗರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ವರ್ತಕರ ಮಾರುಕಟ್ಟೆಯ ಮಳಿಗೆಗಳನ್ನು ಹಲವು ವರ್ಷಗಳಿಂದ ಶ್ರಮವಹಿಸಿ ವ್ಯಾಪಾರ ಮಾಡಿಕೊಂಡು ಬರುತ್ತಿರುವಂತಹ ವರ್ತಕರಿಗೆ ಹಂಚಲಾಗುವುದು. ಇದರಲ್ಲಿ ಯಾವುದೇ ಗೊಂದಲ ಬೇಡ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಗುರುವಾರ ನಗರದ ಪೇಟೆ ಬೀದಿಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಮಾರುಕಟ್ಟೆ ಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಜನರ ಆಶೀರ್ವಾದದಿಂದ ಕೇಂದ್ರದಲ್ಲಿ ಇಂದು ಮಂತ್ರಿಯಾಗಿದ್ದೇನೆ. ಅಂದಿನಿಂದ ಇಲ್ಲಿಯವರೆಗೂ ಜಿಲ್ಲಾಧಿಕಾರಿಗಳ ಜೊತೆ ನಿರಂತರ ಸಂಪರ್ಕದಲ್ಲಿದ್ದೇನೆ, ಜಿಲ್ಲೆಯಲ್ಲಿ ಕಾರ್ಖಾನೆ ನಿರ್ಮಾಣ ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಕ್ತ ಜಾಗ ಗುರುತಿಸಲು ನಿರ್ದೇಶನ ನೀಡಿದ್ದೇನೆ ಎಂದರು.

ಮಂಡ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸ್ಥಳದ ಸಮಸ್ಯೆ ಇದೆ ಹಾಗೂ ಕಾರ್ಖಾನೆ ನಿರ್ಮಾಣ ಮಾಡಲು ಮೂಲಭೂತ ಸೌಕರ್ಯ ಒದಗಿಸುವ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲೆ ಇದೆ, ಹಿಂದೆಯಲ್ಲ ಕೈಗಾರಿಕಾ ಸಂಸ್ಥೆಗಳಿಂದ ಜನರ ಆರ್ಥಿಕ ಸುಧಾರಣೆ ಸಾಧ್ಯವಾಗುತ್ತಿತ್ತು ಆದರೆ ಪ್ರಸ್ತುತ ಕೇಂದ್ರ ಸಚಿವಾಲಯದ ವ್ಯಾಪ್ತಿಯಲ್ಲೇ ಸುಮಾರು 47 ಬೃಹತ್ ಕೈಗಾರಿಕೆಗಳು ಇವೆ. ಆದರೆ ಲಾಭದಲ್ಲಿ ನಡೆಯುತ್ತಿರುವುದು ಬಿಎಚ್‌ಇಎಲ್ ಸಂಸ್ಥೆ ಮಾತ್ರ, ಎಚ್‌ಎಂಟಿ ಸಂಸ್ಥೆಯನ್ನು ಪ್ರಾರಂಭ ಮಾಡಲು ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ವಿವೇಕಾನಂದ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಒ ಕೆಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ನಗರಸಭೆ ಪೌರಾಯುಕ್ತೆ ಪಂಪಶ್ರೀ, ಮುಡಾ ಅಧ್ಯಕ್ಷ ನಯೀಮ್, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಇಂದು, ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ: ಗಾಂಧಿನಗರ, ಚಿಕ್ಕ ಮಂಡ್ಯ ವಿದ್ಯುತ್ ಮಾರ್ಗದಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಅ.17 ಮತ್ತು 18ರಂದು ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಗರದ ಗಾಂಧಿನಗರ, ಬಿ.ವಿ.ಕೆ ಲೇಔಟ್, ಚಂದಗಾಲು ಲೇಔಟ್, ಶಂಕರನಗರ, ಹೌಸಿಂಗ್ ಬೋರ್ಡ್ 1ನೇ ಹಂತ, ಅಂಬುಜಮ್ಮ ಪಾರ್ಕ್ ಶಂಕರಪುರ, ಜೈನ ಸ್ಟ್ರೀಟ್, ಬೀಡಿ ಕಾಲೋನಿ, ಜಬರ್ ಸರ್ಕಲ್, ಹೊಳಲು ವೃತ್ತ, ವಿನಾಯಕ ಬಡಾವಣೆಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಭಾಗ್ಯಮ್ಮ ನಿಧನ



ಹಲಗೂರು: ಇಲ್ಲಿನ ಜೆಪಿಎಂ ಬಡಾವಣೆ ನಿವಾಸಿ ರಾಮಸ್ವಾಮಿ ಅವರ ಪತ್ನಿ ಮತ್ತು ಇಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಭಾಗ್ಯಮ್ಮ (55) ಅನಾರೋಗ್ಯದಿಂದ ಗುರುವಾರ ಸಂಜೆ ನಿಧನರಾದರು.

ಮೃತರು ಪತಿ, ಪುತ್ರ ಮತ್ತು ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆನಮನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ವೆಂಕಟೇಶ್



ಭಾರತೀನಗರ: ಕೆ.ಎಂ.ದೊಡ್ಡಿಯ ನಿವಾಸಿ ದೊಂದೇಗೌಡ ಲೇಟ್ ಪಾಪಣ್ಣ ಅವರ ಪುತ್ರ ವೆಂಕಟೇಶ್(53) ಅನಾರೋಗ್ಯದಿಂದ ಗುರುವಾರ ಸಂಜೆ ಮೃತಪಟ್ಟಿದ್ದಾರೆ. ಮೃತರು ಪತ್ನಿ ಸುಜಾತ, ಓರ್ವ ಪುತ್ರ ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮವಾದ ಕೆ.ಎಂ ದೊಡ್ಡಿಯ ಮೃತರ ಜಮೀನಿನಲ್ಲಿ ಶುಕ್ರವಾರ ಬೆಳಗ್ಗೆ 10:30ಕ್ಕೆ ಜರುಗಲಿದೆ ಎಂದು ಕುಟುಂಬ ಮೂಲಗಳು ತಿಳಿಸಿದೆ.

ಒಂದನೇ ಪುಟದಿಂದ

ಹುಲಿ ದಾಳಿ; ರೈತನಿಗೆ ಮಾರಣಾಂತಿಕ ಗಾಯ

ಜನಜಂಗುಳಿ: ಹುಲಿ ಸೆರೆ ಕಾರ್ಯಾಚರಣೆಗೆ ಕ್ಯಾಪ್ಟನ್ ಅಭಿಮನ್ಯು ಹಾಗೂ ಭಗಿರಥ ಆನೆಗಳು ಬಂದ ವಿಷಯ ತಿಳಿದು ಸುತ್ತಮುತ್ತಲಿನ ಗ್ರಾಮಸ್ಥರು ಕಾರ್ಯಾಚರಣೆ ಸ್ಥಳದಲ್ಲಿ ನೆರೆದಿದ್ದರು. ಮುಂಗಾಲು ಗಾಯದಿಂದ ನರಳುತ್ತಿದ್ದ

10 ರಿಂದ 11 ವರ್ಷದ ಹೆಣ್ಣು ಹುಲಿ, ಕಾಡು ತೊರೆದು ಕಾಡಂಚಿನ ಜಮೀನಿನ ಪೊದೆಗಳಲ್ಲಿ ಆಶ್ರಯ ಪಡೆದಿರುವುದನ್ನು ಗುರುತಿಸಿದ ಅರಣ್ಯ ಸಿಬ್ಬಂದಿ, ಅದನ್ನು ಸೆರೆ ಹಿಡಿಯಲು ಕಾರ್ಯಾಚರಣೆಗಿಳಿದಿದ್ದರು. ಅಭಿಮನ್ಯು ಆನೆ ಮೇಲೆ ಕುಳಿತು ಪಶುವೈದ್ಯ ಡಾ.ರಮೇಶ್ ಹುಲಿ ಅಡಗಿದ್ದ ಪೊದೆ ಬಳಿ ತೆರಳಿದಾಗ ಹುಲಿ, ಆನೆ ಕಂಡು ಗಾಬರಿಯಿಂದ ಓಡಾಡಲು ಶುರು ಮಾಡಿದೆ. ಇತ್ತ ಜನರು ಸಹ ಹುಲಿ ಹಿಂದೆ ಓಡಿದ್ದಾರೆ. ಇದರಿಂದ ಘಾಸಿಗೊಂಡ ಹುಲಿ, ಅನತಿ ದೂರದ ಮತ್ತೊಂದು ಪೊದೆಯೊಳಗೆ ಅಡಗಿ ಕುಳಿತಿದೆ. ಈ ವೇಳೆ ಕೆಲವರು ಕಲ್ಲು ಎಸೆದಿದ್ದರಿಂದ ಹುಲಿ ಜನರತ್ತ ನುಗ್ಗಿದೆ.

ಒಂದೇ ಏಟಿಗೆ ತತ್ತರ: ಕಲ್ಲೇಟಿನಿಂದ ಕಂಗೆಟ್ಟ ಹುಲಿ ಜನರತ್ತ ನುಗ್ಗಿದಾಗ ಎಲ್ಲರೂ ಚೆಲ್ಲಾಪಿಲ್ಲಿಯಾಗಿದ್ದಾರೆ. ಈ ವೇಳೆ ಎದುರಾದ ರೈತ ಮಹದೇವ ಅವರ ಮೇಲೆ ಘಾಸಿಗೊಂಡಿದ್ದ ಹುಲಿ ಎರಗಿದೆ. ಅವರ ಮುಖಕ್ಕೆ ಬಲವಾಗಿ ಬಡಿದಿದೆ. ಇದರಿಂದ ಅವರು ನೆಲಕ್ಕೆ ಬಿದ್ದಿದ್ದಾರೆ. ಅಪಾಯದ ಸುಳಿವರಿತ ಜನ ಮತ್ತೆ ಹುಲಿ ಮೇಲೆ ಕಲ್ಲು ತೂರಾಟ ನಡೆಸಿದ್ದರಿಂದ ಅದು ಅಲ್ಲಿಂದ ಪರಾರಿಯಾಗಿದೆ.

ರೊಚ್ಚಿಗೆದ್ದ ಗ್ರಾಮಸ್ಥರು: ಹುಲಿ ದಾಳಿಯಿಂದ ರೊಚ್ಚಿಗೆದ್ದ ಗ್ರಾಮಸ್ಥರು ಅರಣ್ಯ ಇಲಾಖೆಯ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದರಿಂದ 3–4 ವಾಹನಗಳು ಜಖಂಗೊಂಡಿವೆ. ಅಲ್ಲದೆ, ರೈತರ ಆಕ್ರೋಶಕ್ಕೆ ಅರಣ್ಯ ಸಿಬ್ಬಂದಿ ತುತ್ತಾಗಬೇಕಾಯಿತು. ಅರಣ್ಯ ಇಲಾಖೆಯ ಕೆಲ ಸಿಬ್ಬಂದಿ ಮೇಲೆ ಗ್ರಾಮಸ್ಥರು, ಹಲ್ಲೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹಿರಿಯ ಅಧಿಕಾರಿಗಳು ಗ್ರಾಮಕ್ಕೆ ತೆರಳಿ ಗ್ರಾಮಸ್ಥರ ದಿಗ್ಬಂದನಕ್ಕೆ ಒಳಗಾಗಿದ್ದ ಇಲಾಖೆ ಸಿಬ್ಬಂದಿಯನ್ನು ಅವರ ಮನವೊಲಿಸಿ ಬಿಡಿಸಿಕೊಂಡು ಕರೆದೊಯ್ದಿದ್ದಾರೆ ಎಂದು ತಿಳಿದುಬಂದಿದೆ.

ಕಾರ್ಯಾಚರಣೆಗೆ ತೊಡಕು: ರೈತನ ಮೇಲೆ ದಾಳಿ ನಡೆಸಿದ ನಂತರ ಹುಲಿ ಸೆರೆಗೆ ಕಾರ್ಯಾಚರಣೆ ಮುಂದುವರೆಸುವ ಪ್ರಯತ್ನ ಮಾಡಲಾಯಿತು. ಹುಲಿ ಪೊದೆಯಲ್ಲಿ ಅಡಗಿರುವುದನ್ನು ಸಹ ಪತ್ತೆ ಮಾಡಲಾಯಿತು. ಅರವಳಿಕೆ ಮದ್ದು ನೀಡಿ ಸೆರೆ ಹಿಡಿಯಬೇಕೆನ್ನುವಷ್ಟರಲ್ಲಿ ಜನ ಅರಣ್ಯ ಇಲಾಖೆ ವಾಹನಗಳ ಮೇಲೆ ದಾಳಿ ಮಾಡಿ ಜಖಂಗೊಳಿಸಿದರು. ಹಾಗಾಗಿ ವಾಹನದಲ್ಲಿದ್ದ ಬೋನ್ ತೆಗೆದುಕೊಂಡು ಬರಲು ಸಾಧ್ಯವಾಗದ ಕಾರಣ, ಹುಲಿ ಕಾರ್ಯಾಚರಣೆಗೆ ಅಡಚಣೆ ಉಂಟಾಯಿತು.

ಅರಣ್ಯ ಸಿಬ್ಬಂದಿ, ಪೊಲೀಸರ ನಿರ್ಲಕ್ಷ್ಯ: ಕಾಡಿನಿಂದ ಹೊರ ಬಂದಿರುವ ಹುಲಿ ಹೊಲ, ತೋಟಗಳಲ್ಲಿ ಓಡಾಡುತ್ತಿದ್ದ ಬಗ್ಗೆ ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡಲಾಗಿತ್ತು. ಇಂದು ಹುಲಿ ಸೆರೆ ಕಾರ್ಯಾಚರಣೆಗೆ ಆನೆಗಳೊಂದಿಗೆ ಬಂದಿದ್ದ ಅರಣ್ಯ ಸಿಬ್ಬಂದಿ, ಅಗತ್ಯ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿರಲಿಲ್ಲ. ಜನ ಸೇರದಂತೆ ತಡೆಗಟ್ಟಲು ಅಗತ್ಯ ಪೊಲೀಸರನ್ನು ನಿಯೋಜಿಸಿರಲಿಲ್ಲ. ಈ ಕಾರಣದಿಂದ ರೈತರೊಬ್ಬರ ಮೇಲೆ ದಾಳಿ ನಡೆದಿದೆ ಎಂದು ಬಡಗಲಪುರ ಗ್ರಾಮಸ್ಥರು ಕಿಡಿಕಾರಿದ್ದಾರೆ. ಈ ವೇಳೆ ಎಸಿಎಫ್ ಸತೀಶ್, ಆರ್‌ಎಫ್‌ಒ ವಿವೇಕ್, ಎಸ್‌ಟಿಎಫ್ ತಂಡ, ನುಗು ವಲಯದ ಅರಣ್ಯ ಇಲಾಖೆ ಸಿಬ್ಬಂದಿ ಹಾಜರಿದ್ದರು.

ಕ್ರಮ ಪೂರ್ವ ನಿರ್ಧಾರಿತ

ಯಾವುದೇ ನಿರ್ಧಾರವನ್ನು ಕೈಗೊಳ್ಳಲಿಲ್ಲ. ಸ್ವಾತಂತ್ರ್ಯ ನಂತರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಮರ್ಪಣಾಪೂರ್ವಕ ಸೇವೆ ಹಾಗೂ ರಾಷ್ಟ್ರಭಕ್ತಿ ಮೂಡಿಸುವ ಚಟುವಟಿಕೆಗಳು ನಿರಂತರವಾಗಿ ಸಾಗುತ್ತಾ ಬಂದಿದೆ. ಇದನ್ನು ಹತ್ತಿಕ್ಕಲು ಅಂದಿನಿಂದಲೂ ಇಂತಹ ಹಲವು ಪ್ರಯತ್ನಗಳು ನಡೆಯುತ್ತಲೇ ಇವೆ. ಆದರೆ ಇದ್ಯಾವುದನ್ನೂ ಲೆಕ್ಕಿಸದ ಈ ದೇಶದ ಕೋಟ್ಯಾಂತರ ಜನರ ಬೆಂಬಲ ಹಾಗೂ ಆಶೀರ್ವಾದ ಪಡೆದಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ ತಪಸ್ವೀ ಕಾರ್ಯಶೀಲತೆಯಿಂದ ತನ್ನ ಸಂಘಟನಾ ಸಾಮರ್ಥ್ಯವನ್ನು ವೃದ್ಧಿಸಿಕೊಂಡು, ಅಡೆ–ತಡೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ, ಬೃಹದಾಕಾರವಾಗಿ ಬೆಳೆಯುತ್ತಲೇ ಇದೆ ಕಾಂಗ್ರೆಸ್ ತನ್ನ ಸರ್ಕಾರದ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿಷಯವನ್ನು ಮುಂದಿಟ್ಟುಕೊಂಡು ಜನರ ದಿಕ್ಕು ತಪ್ಪಿಸುತ್ತಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೇಲೆ ನಿಯಂತ್ರಣ ಹೇರಿದಷ್ಟೂ ಅದು ತನ್ನ ಸಂಘಟನೆಯ ಮಹಾ ವೃಕ್ಷವನ್ನು ವಿಸ್ತರಿಸುತ್ತಲೇ ಮುಗಿಲೆತ್ತರಕ್ಕೆ ಬೆಳೆಯುತ್ತದೆ. ರಾಷ್ಟ್ರಕಟ್ಟುವ ಕಾರ್ಯದಲ್ಲಿ ಎಂದಿನಂತೆ ಮುನ್ನಡೆಯಲಿದೆ ಎಂದು ಸರ್ಕಾರಕ್ಕೆ ಚಾಟಿ ಬೀಸಿದ್ದಾರೆ.

ನಿಮ್ಹಾನ್ಸ್ ಘಟಕಕ್ಕೆ ಅನುಮೋದನೆ

ಎರಡು ಸೀರೆ ಉಡುಗೊರೆ: ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ತಲಾ 2 ಸೀರೆಗಳನ್ನು ನೀಡಲು 13.98 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಅಲ್ಲದೆ, ರಾಜ್ಯದ 69,921 ಅಂಗನವಾಡಿಯ ಪ್ರತಿ ಘಟಕಕ್ಕೆ 1,500 ರೂ. ವೆಚ್ಚದಲ್ಲಿ ಔಷಧ ಕಿಟ್ ನೀಡಲು ಸಮ್ಮತಿಸಿದೆ. ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣ ಮಾದರಿಯಲ್ಲಿ ಆನೇಕಲ್ ಸಮೀಪ 2,350 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಅಂತರ ರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ಮತ್ತು ಕ್ರೀಡಾಂಗಣ ಸಂಕೀರ್ಣ ನಿರ್ಮಿಸಲು ಒಪ್ಪಿಗೆ ಸೂಚಿಸಿದೆ.

ಇಂದು ನಾಗಮಂಗಲದಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ

ಅತ್ಮಸ್ಥೈರ್ಯ ತುಂಬಿದ ಪೊಲೀಸರ ಪಥ ಸಂಚಲನ, ವ್ಯಾಪಕ ಬಂದೋಬಸ್ತ್

ನಾಗಮಂಗಲ: ಪಟ್ಟಣದ ಕೋಟೆ ಗಣಪತಿ ವಿಸರ್ಜನೆ ನಾಳೆ(ಅ.17) ನಡೆಯಲಿದ್ದು, ಈ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಮತ್ತು ಸಾರ್ವಜನಿಕರಲ್ಲಿ ಅತ್ಮ ಸ್ಥೈರ್ಯ ತುಂಬುವ ಸಲುವಾಗಿ ಪೊಲೀಸರು ಪಥ ಸಂಚಲನ ನಡೆಸಿದರು.

ಪಟ್ಟಣದ ಸೌಮ್ಯ ಕೇಶವ ದೇವಸ್ಥಾನದಿಂದ ಹೊರಟ ಪಥ ಸಂಚಲನ ಬಿಎಂ ರಸ್ತೆ ಮೂಲಕ ಮುಸ್ಲಿಂ ಕಾಲೋನಿ, ಮಂಡ್ಯ ರಸ್ತೆ, ಮೈಸೂರು ರಸ್ತೆ, ಕುಂಬಾರ ಬೀದಿ ಮೂಲಕ ಸಾಗಿ ಸೌಮ್ಯಕೇಶವ ಸ್ವಾಮಿ ದೇವಸ್ಥಾನ ಮುಂಭಾಗದವರೆಗೂ ನಡೆಯಿತು. ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರ ನೇತೃತ್ವದಲ್ಲಿ ಪಥ ಸಂಚಲನ ನಡೆಯಿತು.

ನಂತರ ಮಾತನಾಡಿದ ಅವರು, 73ನೇ ವರ್ಷದ ಕೋಟೆ ಗಣಪತಿ ವಿಸರ್ಜನೆ ಮೆರವಣಿಗೆಯಲ್ಲಿ ಎಲ್ಲಾ ರೀತಿಯ ಪೊಲೀಸ್ ಬಂದೋಬಸ್ತನ್ನು ಮಾಡಲಾಗಿದೆ. ನಮ್ಮ ಪೊಲೀಸ್ ಇಲಾಖೆಯಿಂದ ಸುಮಾರು 800ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿದೆ. ಅದರ ಜೊತೆಗೆ 100 ಹೋಂ ಗಾರ್ಡ್ ಸಿಬ್ಬಂದಿಗಳು, 5 ಕೆಎಸ್‌ಆರ್‌ಪಿ ತುಕಡಿಗಳು, 8 ಡಿಆರ್ ಸಿಬ್ಬಂದಿಗಳು ಸೇರಿದಂತೆ 1 ಸಾವಿರಕ್ಕೂ ಹೆಚ್ಚು ಅಧಿಕಾರಿಗಳು ಹಾಗೂ ಸಿಬ್ಬಂದಿಯವರನ್ನು ಗಣಪತಿ ವಿಸರ್ಜನೆ ಮೆರವಣಿಗೆ ಬಂದೋಬಸ್ತ್‌ಗೆ ನಿಯೋಜಿಸಲಾಗಿದೆ ಎಂದು ತಿಳಿಸಿದರು.

ಪಟ್ಟಣದ 10 ಕಿ.ಮೀ ವ್ಯಾಪ್ತಿಯಲ್ಲಿ ವೈನ್ ಸ್ಟೋರ್‌ಗಳು ಹಾಗೂ ಬಾರ್‌ಗಳನ್ನು ಶುಕ್ರವಾರ ಬೆಳಗ್ಗೆ 6 ಯಿಂದ ಶನಿವಾರ ಬೆಳಗ್ಗೆ 6 ಗಂಟೆಯವರೆಗೂ ಬಂದ್ ಮಾಡಲಾಗಿದೆ. ಸೂಕ್ಷ್ಮ ಪ್ರದೇಶಗಳಲ್ಲಿ ಸುಮಾರು 60ಕ್ಕೂ ಹೆಚ್ಚು ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಒಂದು ಡ್ರೋನ್ ಕ್ಯಾಮೆರಾ ಹಾಗೂ 15 ವಿಡಿಯೋ ಕ್ಯಾಮೆರಾಗಳನ್ನು ಬಳಸಿಕೊಳ್ಳಲಾಗಿದೆ ಎಂದರು.


ನಾಗಮಂಗಲದಲ್ಲಿ ಪೊಲೀಸರು ಗುರುವಾರ ಪಥಸಂಚಲನ ನಡೆಸಿದರು.

ಮೈಸೂರಿನಲ್ಲಿ ಇಂಟರ್ ನ್ಯಾಷನಲ್ ಕನ್ವೆನ್ಷನ್ ಸೆಂಟರ್, ಜಯದೇವ 2ನೇ ಹಂತದ ಕಟ್ಟಡ ನಿರ್ಮಾಣಕ್ಕೆ ಆದ್ಯತೆ

ಅಭಿನಂದನೆ ಸ್ವೀಕರಿಸಿ ನೂತನ ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಭರವಸೆ

ಮೈಸೂರು, ಅ.16(ಬಿಎಲ್‌ಯು)– ಕಲೆ, ಸಾಂಸ್ಕೃತಿಕ ತಾಣ, ಪ್ರವಾಸಿಗರ ಅಚ್ಚು ಮೆಚ್ಚಿನ ಕೇಂದ್ರವಾಗಿರುವ ಮೈಸೂರಿನಲ್ಲಿ ಇಂಟರ್ ನ್ಯಾಷನಲ್ ಕನ್ವೆನ್ಷನ್ ಸೆಂಟರ್ ಹಾಗೂ ಜಯದೇವ ಆಸ್ಪತ್ರೆಯ 2 ಹಂತದ ಕಟ್ಟಡ ನಿರ್ಮಾಣಕ್ಕೆ ಮೊದಲ ಆದ್ಯತೆ ನೀಡುತ್ತೇನೆ ಎಂದು ನೂತನ ವಿಧಾನ ಪರಿಷತ್ ಸದಸ್ಯ ಕೆ.ಶಿವ ಕುಮಾರ್ ಭರವಸೆ ನೀಡಿದರು.

ನಗರದ ರಾಮವಿಲಾಸ ರಸ್ತೆಯ ಎಪಿಎನ್ ಪ್ರಾಪರ್ಟೀಸ್, ಎಪಿಎನ್ ಫೌಂಡೇಷನ್ ಕಚೇರಿಯ ಸಭಾಂಗಣದಲ್ಲಿ ಮೈಸೂರು ಕಲ್ಚರಲ್ ಅಸೋಸಿಯೇಷನ್‌ನಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಎಂಎಲ್‌ಸಿ ಆಗುತ್ತೇನೆ ಎಂದು ನಿರೀಕ್ಷೆ ಕೂಡ ಮಾಡಿರಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿರುವ ಈ ಅವಕಾಶ ಬಳಸಿಕೊಂಡು ಉತ್ತಮ ಕೆಲಸ ಮಾಡುತ್ತೇನೆ ಎಂದು ಆಶ್ವಾಸನೆ ನೀಡಿದರು.

ನಾನು ಮಾಧ್ಯಮ ಕ್ಷೇತ್ರದಿಂದ ಬಂದಿರುವ ಕಾರಣ ರಾಜ್ಯದ 31 ಜಿಲ್ಲೆಗಳಲ್ಲಿ ಪತ್ರಕರ್ತರ ಭವನ ನಿರ್ಮಾಣ ಸೇರಿದಂತೆ ಬಹಳಷ್ಟು ಕೆಲಸ ಮಾಡಬೇಕಿದೆ. ಈ ಮೂಲಕ ನನಗೆ ಬಹಳಷ್ಟು ಜವಾಬ್ದಾರಿ ಇದ್ದು, ಇರುವಷ್ಟು ದಿನ ಗರಿಷ್ಟ ಮಟ್ಟದಲ್ಲಿ ಜನಪರ ಕೆಲಸಗಳನ್ನು ಮಾಡುವ ಗುರಿ ಹೊಂದಿದ್ದೇನೆ ಎಂದು ತಿಳಿಸಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ನೂತನ ಎಂಎಲ್ ಸಿ ಶಿವಕುಮಾರ್ ಅವರ ಸೇವೆ ಮೈಸೂರಿಗೆ ಮಾತ್ರ ಸೀಮಿತವಾಗದೆ ಇಡೀ ಕರ್ನಾಟಕಕ್ಕೆ ಅವಶ್ಯವಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಹಕಾರ ಪಡೆದು ಮತ್ತಷ್ಟು ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಒಳ್ಳೆಯ ಕೆಲಸ ಮಾಡಲಿ ಎಂದು ಸಲಹೆ ನೀಡಿದರು.

ಮೈಸೂರು ಕಲ್ಚರಲ್ ಅಸೋಸಿಯೇಷನ್ ಸಂಚಾಲಕ ರಮೇಶ್ ಉತ್ತಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ವಿಧಾನ ಪರಿಷತ್ ಸ್ಥಾನ ಶಿವಕುಮಾರ್ ಅವರಿಗೆ ಬಯಸದೆ ಬಂದಿದೆ. ಈ ಸ್ಥಾನಕ್ಕೆ ಶಿವಕುಮಾರ್ ಯಾವುದೇ ಲಾಬಿ, ಪ್ರಭಾವ ಬೀರಿರಲಿಲ್ಲ. ಪತ್ರಿಕೋದ್ಯಮ ಕ್ಷೇತ್ರದಲ್ಲಿ ಶಿವಕುಮಾರ್ ಅವರ ಪ್ರಾಮಾಣಿಕತೆ ಹಾಗೂ ದಕ್ಷತೆ ಪರಿಗಣಿಸಿ ಸರ್ಕಾರ ಎಂಎಲ್ ಸಿ ಮಾಡಿದೆ ಎಂದು ಅಭಿಪ್ರಾಯಪಟ್ಟರು.

ರಂಗಾಯಣ ಮಾಜಿ ನಿರ್ದೇಶಕ ಎಚ್. ಜನಾರ್ಧನ್ (ಜನ್ನಿ) ಮಾತನಾಡಿ, ಪ್ರಜಾಪ್ರಭುತ್ವದ ನಾಲ್ಕನೆ ಅಂಗವಾಗಿರುವ ಪತ್ರಿಕೋದ್ಯಮದಲ್ಲಿ ಶಿವಕುಮಾರ್ ಅವರು ಛಾಪು ಮೂಡಿಸಿದರು. ಕಳೆದ 3 ದಶಕದ ಪತ್ರಿಕೋದ್ಯಮ ಕ್ಷೇತ್ರದ ಸೇವೆಯಲ್ಲಿ ಅವರಿಂದ ಬಹಳಷ್ಟು ಜನರಿಗೆ ಅನುಕೂಲವಾಗಿದೆ. ಈ ಎಲ್ಲಾ ಮಾನದಂಡದ ಆಧಾರದ ಮೇಲೆ ಸರ್ಕಾರ ಶಿವಕುಮಾರ್ ಅವರಿಗೆ ಈ ಸ್ಥಾನ ನೀಡಿದೆ ಎಂದು ಹೇಳಿದರು.

ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎ.ಪಿ.ನಾಗೇಶ್ ಅವರು ಶಿವಕುಮಾರ್ ಅವರನ್ನು ಅಭಿಂದಿಸಿದರು.

ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ, ಕೆ.ಆರ್.ಗೋಪಾಲಕೃಷ್ಣ, ಕನ್ನಡ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು, ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎನ್.ಆರ್.ನಾಗೇಶ್, ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ, ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ದಲಿತ ಮುಖಂಡ ಅಹಿಂದ ಜವರಪ್ಪ, ಸ್ವಾಮಿ, ಪತ್ರಕರ್ತ ಟಿ.ಗುರುರಾಜ್, ಪುಟ್ಟರಾಜು, ಮಹದೇವಸ್ವಾಮಿ, ಅವಿನಾಶ್‌ಗೌಡ, ವೈ.ಸಚ್ಚಿನ್, ಬಸವನಹಳ್ಳಿ ದೇವರಾಜ್, ಸಿ.ಕೆ.ರಮೇಶ್ ರಾವ್, ನರೆಡ್ಕೊ ಸಂಸ್ಥೆಯ ಎನ್.ದಿನೇಶ್ ಸೇರಿ ಹಲವು ಹಾಜರಿದ್ದರು.


ಮೈಸೂರಿನ ರಾಮವಿಲಾಸ ರಸ್ತೆಯ ಎಪಿಎನ್ ಪ್ರಾಪರ್ಟೀಸ್, ಎಪಿಎನ್ ಫೌಂಡೇಷನ್ ಕಚೇರಿ ಸಭಾಂಗಣದಲ್ಲಿ ಬುಧವಾರ ಮೈಸೂರು ಕಲ್ಚರಲ್ ಅಸೋಸಿಯೇಷನ್ ವತಿಯಿಂದ ನೂತನ ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು.

ಮೈಸೂರಿನಲ್ಲಿ ಪೌರಕಾರ್ಮಿಕರ ಕಾಲೋನಿಯ ಶಾಲೆಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವತ್ತ ಗಮನ ಹರಿಸುತ್ತೇನೆ. ಆದಿವಾಸಿಗಳ ಶಾಲೆಗಳಲ್ಲಿ ರಾತ್ರಿ ಓದಲು ಸೋಡಿಯಂ ದೀಪ ಅಳವಡಿಕೆ, ಮಹಾರಾಷ್ಟ್ರ ಮಾದರಿಯಲ್ಲಿ ರಾಜ್ಯದ ಬುದ್ಧ ವಿಹಾರಗಳು ಮತ್ತು ಬಂತೇಜಿಗಳಿಗೆ ಗೌರವ ಧನ ನೀಡುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಮಾತನಾಡಿ, ಅನುಷ್ಠಾನಕ್ಕೆ ಯತ್ನಿಸುತ್ತೇನೆ. -ಶಿವಕುಮಾರ್

ಚಂದ್ರಶೇಖರ್‌ಗೆ ಸನ್ಮಾನ



ಮಹಾರಾಷ್ಟ್ರ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ಹಾಗೂ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತದ ಸಂಯುಕ್ತ ಆಶ್ರಯದಲ್ಲಿ ಕಾರವಾರ ಜಿಲ್ಲೆಯ ಕುಮಟ ತಾಲೂಕಿನಲ್ಲಿ ಅಂತರ್ ರಾಜ್ಯ ಸಹಕಾರ ಸಭೆ ಹಾಗೂ ದೀಪ ಸ್ತಂಭ ಪುರಸ್ಕಾರ ಸಮಾರಂಭದಲ್ಲಿ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಎಸ್.ಚಂದ್ರಶೇಖರ್ ಅವರನ್ನು ಮಹಾರಾಷ್ಟ್ರ ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಕಾಕಾ ಸಾಹೇಬ್ ಕಾಯ್ದೆಯವರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಬೆಳಗಾವಿಯ ಜಂಟಿ ನಿಬಂಧಕ ಕಲ್ಲಪ್ಪ ಓಬನ್ ಗೋಳ, ಮಹಾರಾಷ್ಟ್ರ ಜಂಟಿ ನಿಬಂಧಕ ವಾಡೆಕರ್, ಪತ್ತಿನ ಮಹಾಮಂಡಳದ ನಿರ್ದೇಶಕರುಗಳು ಉಪಸ್ಥಿತರಿದ್ದರು.

ಕೇರಳ ಕುಟುಂಬದಿಂದ ಮೈಸೂರಿನ ಫರ್ನಿಚರ್ ಅಂಗಡಿ ಮಾಲೀಕನಿಗೆ 99.65 ಲಕ್ಷ ವಂಚನೆ

● ಚೆಕ್ ನೀಡಿ ಫರ್ನಿಚರ್ ಖರೀದಿಸಿ ಕೊನೆಗೆ ಸಕ್ಸಸ್ ವಂಚನೆ ಹೈಡ್ರಾಮಾ ● ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿಕೊಂಡು ತಲೆಮರೆಸಿಕೊಂಡಿರುವ ದೋಖಾ ಫ್ಯಾಮಿಲಿ

ಮೈಸೂರು, ಅ.16(ಆರ್‌ಕೆ)– ಕೇರಳ ಮೂಲದ ಕುಟುಂಬವೊಂದು ಫರ್ನಿಚರ್ ಖರೀದಿಸುವ ನೆಪದಲ್ಲಿ ಅಂಗಡಿ ಮಾಲೀಕನಿಗೆ 99,65,500 ರೂ ವಂಚಿಸಿ ಪರಾರಿಯಾಗಿರುವ ಘಟನೆ ಮೈಸೂರಿನ ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೆಳಕಿಗೆ ಬಂದಿದೆ. ಮೈಸೂರಿನ ಹೂಟಗಳ್ಳಿ ಕೆಎಚ್‌ಬಿ ಕಾಲೋನಿ ಅಪಾರ್ಟ್‌ಮೆಂಟ್ ನಿವಾಸಿ ಲೇಟ್ ಎ.ಎ. ಚಾಂಡಿ ಅವರ ಮಗ ಎ.ಸಿ. ಜಾಯ್ ಮೋಸಕ್ಕೊಳಗಾದ ಫರ್ನಿಚರ್ ಅಂಗಡಿ ಮಾಲೀಕ. ಕೇರಳದ ಕೋರಿಖಿ ಕೋಡ್ ನಿವಾಸಿ ಹಕ್ಕಿನ್(50), ಪತ್ನಿ ಹಫ್ಸತ್ ಬೀವಿ(45), ಎಂ.ಮೊಹಮ್ಮದ್ ಖಾಲಿಸ್ (22), ಎಂ.ಹೆಚ್.ಮೊಹಮ್ಮದ್ ವಾಸಿಲ್(19) ಹಾಗೂ ಎಂ.ಫರ್ವೀಸ್(45) ವಂಚಿಸಿ, ಈಗ ತಲೆಮರೆಸಿಕೊಂಡಿದ್ದಾರೆ.

ಈ ಸಂಬಂಧ ಅಕ್ಟೋಬರ್ 13 ರಂದು ವಿಜಯನಗರ ಠಾಣೆಗೆ ದೂರು ನೀಡಿರುವ ಎ.ಸಿ. ಜಾಯ್, ತಾವು ಹಿನಕಲ್‌ನಲ್ಲಿ ಫರ್ನಿಚರ್ ಶೋ ರೂಂ ಹೊಂದಿದ್ದು, ಕಳೆದ 6 ತಿಂಗಳ ಹಿಂದೆ ಹಕ್ಕಿನ್ ಕುಟುಂಬ ನಮ್ಮ ಅಂಗಡಿಗೆ ಬಂದು, 40 ಲಕ್ಷ ಮೌಲ್ಯದ ಐಷಾರಾಮಿ ಪೀಠೋಪಕರಣಗಳ ಬುಕ್ ಮಾಡಿತು. ಅದಕ್ಕೆ ಸಂಬಂಧಿಸಿದಂತೆ ಚೆಕ್ ನೀಡಿದ್ದರು. ಅದರಂತೆ ನಾವು ಗೋಡೌನ್‌ನಲ್ಲಿ ಅವುಗಳನ್ನು ಪ್ಯಾಕ್ ಮಾಡಿ, ಸಿದ್ಧಗೊಳಿಸಿದ್ದೆವು. ಆದರೆ ಹಕ್ಕಿನ್, ಬ್ಯಾಂಕಿನಲ್ಲಿ ಕ್ಯಾಷ್ ಆದ ನಂತರ ಡೆಲಿವರಿ ತೆಗೆದುಕೊಳ್ಳುತ್ತೇವೆ ಎಂದಿದ್ದರು.

ಚೆಕ್‌ಗಳನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ಹಾಕಿದಾಗ ಖಾತೆಯಲ್ಲಿ ಹಣ ಇಲ್ಲದೆ ಚೆಕ್ ಬೌನ್ಸ್ ಆಗಿತ್ತು. ಆದರೆ, ತಾನೇ ಖುದ್ದು ಬರುವುದಾಗಿ ಹಕ್ಕಿನ್ ಹೇಳಿದ್ದರು. ಕೆಲ ದಿನಗಳಲ್ಲೇ ಅಂಗಡಿಗೆ ಬಂದ ಹಕ್ಕಿನ್, ತಮ್ಮ ಬ್ಯಾಂಕ್ ಖಾತೆಯಲ್ಲಿ 124 ಕೋಟಿ ರೂ. ಬ್ಯಾಲೆನ್ಸ್ ಇದೆ ಎಂದು ಅದಕ್ಕೆ ಪೂರಕ ದಾಖಲೆಗಳನ್ನು ತೋರಿಸಿದ. ಮಾತ್ರವಲ್ಲ, ಐಟಿ ಅಧಿಕಾರಿಗಳು ನನ್ನ ಬ್ಯಾಂಕ್ ಖಾತೆಯನ್ನು ಫ್ರೀಜ್ ಮಾಡಿರುವುದರಿಂದ ಚೆಕ್ ಬೌನ್ಸ್ ಆಗಿದೆ. ಅದನ್ನು ತೆರವುಗೊಳಿಸಲು ಹಣ ಬೇಕಾಗಿದೆ. ತನ್ನ ಖಾತೆ ಅನ್‌ಫ್ರೀಜ್ ಆಗಲು ನೆರವಾದರೆ ನಿಮಗೂ ಶೇ.25 ಕಮಿಷನ್ ನೀಡುವುದಾಗಿ ಭರವಸೆ ನೀಡಿ ನಂಬಿಸಿ ಹಂತ ಹಂತವಾಗಿ ಒಟ್ಟು 99,65,500 ರೂ.ಗಳನ್ನು ನನ್ನಿಂದ ಪಡೆದಿದ್ದಾರೆ. ಕೊನೆಗೆ ಇದಕ್ಕೆ ಇಲ್ಲಿ ಪರಿಹಾರವಿಲ್ಲ. ದೆಹಲಿ ಮಟ್ಟದಲ್ಲಿ ಪರಿಹರಿಸಿಕೊಳ್ಳಲು ಮತ್ತಷ್ಟು ಹಣ ಬೇಕೆಂದು ಬೇಡಿಕೆ ಇಟ್ಟ. ಆಗ ನಮಗೆ ಅನುಮಾನ ಬಂತು ಎಂದು ಎ.ಸಿ. ಜಾಯ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಪ್ಯಾಕ್ ಆಗಿರುವ ಫರ್ನಿಚರ್‌ಗಳು ಡೆಲಿವರಿಯಾಗದೆ ಗೋಡೌನ್‌ನಲ್ಲೇ ಉಳಿದಿದ್ದು, ಇತ್ತ ನನ್ನಿಂದ ಹಣ ಪೀಕಿರುವ ಹಕ್ಕಿನ್ ಕುಟುಂಬ ಸದಸ್ಯರು ತಮ್ಮ ಮೊಬೈಲ್‌ಗಳ ಸ್ವಿಚ್‌ಆಫ್ ಮಾಡಿಕೊಂಡು ಸಂಪರ್ಕಕ್ಕೆ ಸಿಗದೆ, ತಲೆಮರೆಸಿಕೊಂಡಿದ್ದಾರೆ ಎಂದು ದೂರಿದ್ದಾರೆ. ಜಾಯ್ ದೂರಿನನ್ವಯ ಅ.13ರಂದು ಹಕ್ಕಿನ್ ಸೇರಿ ಐವರ ವಿರುದ್ಧ ವಂಚನೆ ಪ್ರಕರಣ ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್, ತನಿಖೆ ಆರಂಭಿಸಿದ್ದು, ಫರ್ನಿಚರ್ ಶೋರೂಂನ ಸಿಸಿ ಕ್ಯಾಮರಾದಲ್ಲಿ ಸೆರೆ ಆದ ಫುಟೇಜ್‌ಗಳ ಆಧಾರದ ಮೇಲೆ ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ವ್ಯಾಪಕ ಶೋಧ ನಡೆಸುತ್ತಿದ್ದಾರೆ.

ಅ.29ಕ್ಕೆ ಅಂತರರಾಷ್ಟ್ರೀಯ ಸಮ್ಮೇಳನ

ಮೈಸೂರು, ಅ.16(ಎಂಟಿವೈ)– ಮೈಸೂರಿನ ರಾಯಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಆರ್‌ಐಟಿ) ಕಾಲೇಜು ಸಭಾಂಗಣದಲ್ಲಿ ಅ.24ರಂದು ಬೆಳಗ್ಗೆ 10ಕ್ಕೆ 'ಸಂವಹನ, ಕಂಪ್ಯೂಟರ್ ಮತ್ತು ಮಾಹಿತಿ ತಂತ್ರಜ್ಞಾನ' ಅಂತರರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಎಂಆರ್‌ಐಟಿ ಕಾರ್ಯದರ್ಶಿ ನಂದಿನಿ ಎನ್.ಮೂರ್ತಿ ತಿಳಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐಇಇಇ ಬೆಂಗಳೂರು ಹಾಗೂ ಐಇಇಇ ಮೈಸೂರು ಘಟಕದ ತಾಂತ್ರಿಕ ನೆರವಿನಿಂದ ಎಂಆರ್‌ಐಟಿ ಕಾಲೇಜಿನ ಕ್ಯಾಂಪಸ್‌ನಲ್ಲಿ 'ಸಂವಹನ, ಕಂಪ್ಯೂಟರ್ ಮತ್ತು ಮಾಹಿತಿ ತಂತ್ರಜ್ಞಾನ' ಕುರಿತ ಸಮ್ಮೇಳನ ಆಯೋಜಿಸಲಾಗಿದ್ದು, ಈ ಸಮ್ಮೇಳನವನ್ನು ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಉದ್ಘಾಟಿಸಲಿದ್ದಾರೆ. ಗೌರವ ಅತಿಥಿಗಳಾಗಿ ಯೂರೋಪಿನ ರೊಸ್ಸನ ಕ್ಯಾಪುಟೊ, ಬರ್ನಾಡ್ ಮಲಿಯಾ, ವಿಶೇಷ ಅತಿಥಿಗಳಾಗಿ ಎಸ್‌ಜೆಎಂಐಟಿಯ ಡಾ.ಬಿ.ಡಿ. ಪರಮೇಶಾಚಾರಿ, ಎಂಐಟಿ ಡೀನ್ ಡಾ.ಬಿ. ಚಂದ್ರ ಕುಲಕರ್ಣಿ, ಅಧ್ಯಕ್ಷತೆಯನ್ನು ಎಂಆರ್‌ಐಟಿ ಅಧ್ಯಕ್ಷ ಡಾ.ಚಂದನ ವಿದ್ಯಾ ಶಂಕರ್, ಕಾರ್ಯದರ್ಶಿ ನಂದಿನಿ ಎನ್.ಮೂರ್ತಿ ವಹಿಸಲಿದ್ದು ಪ್ರಾಂಶುಪಾಲ ಡಾ.ರಾಮ ಲಿಂಗಯ್ಯ ವಹಿಸಲಿದ್ದಾರೆ ಎಂದರು.

ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯದಿಂದ 2500ಕ್ಕೂ ಹೆಚ್ಚು ಸಂಶೋಧನಾ ಪತ್ರಿಕೆ ಸಲ್ಲಿಕೆಯಾಗಿದೆ. ಆದರೆ, ಸಮ್ಮೇಳನಕ್ಕೆ 180 ತಾಂತ್ರಿಕ ಲೇಖನಗಳು ವಿಷಯ ಮಂಡನೆಯಾಗಲಿದೆ. ಸಂಶೋಧನಾ ವಿದ್ಯಾರ್ಥಿಗಳು, ವೃತ್ತಿಪರರಿಗೆ ಹೊಸ ಆವಿಷ್ಕಾರಾತ್ಮಕ ಕಲ್ಪನೆಗಳನ್ನು ಹಂಚಿಕೊಳ್ಳಲು,ಸಂವಹನ, ಕಂಪ್ಯೂಟರ್ ಸೈನ್ಸ್ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಇತ್ತೀಚಿನ ಸಾಧನಗಳ ಬಗ್ಗೆ ಚರ್ಚೆ ನಡೆಯಲಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜು ಪ್ರಾಂಶುಪಾಲ ಡಾ.ಕೆ.ಎಸ್.ಅಭಿನಂದನ್, ಉಪ ಪ್ರಾಂಶುಪಾಲ ಡಾ.ಎನ್.ನಕುಲ್, ಡಾ.ಜ್ಯೋತಿ ಉಪಸ್ಥಿತರಿದ್ದರು.

ಮಣ್ಣಿನ ಫಲವತ್ತತೆ ಕಾಪಾಡದೆ ಕೃಷಿ ಉತ್ಪನ್ನ ಹೆಚ್ಚಳ ಮಾಡಲಾಗದು

'ವಿಶ್ವ ಆಹಾರ ದಿನ' ಹಾಗೂ ರಾಷ್ಟ್ರೀಯ ಮಹಿಳಾ ಕಿಸಾನ ದಿವಸ್ ಕಾರ್ಯಕ್ರಮದಲ್ಲಿ ನಿವೃತ್ತ ಕೃಷಿ ಅಧಿಕಾರಿ ಡಾ.ಲಕ್ಷ್ಮೀಪತಿಗೌಡ ಅಭಿಮತ



ಮೈಸೂರು ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರ–ವಿಸ್ತರಣಾ ಶಿಕ್ಷಣ ಘಟಕದ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ 'ವಿಶ್ವ ಆಹಾರ ದಿನ' ಹಾಗೂ 'ರಾಷ್ಟ್ರೀಯ ಮಹಿಳಾ ಕಿಸಾನ ದಿವಸ್' ಆಚರಿಸಲಾಯಿತು.

ಮೈಸೂರು, ಅ.16(ಎಂಕೆ)– ಮಣ್ಣಿನ ಫಲವತ್ತತೆ ಕಾಪಾಡದಿದ್ದಲ್ಲಿ ಉತ್ಪಾದನೆ ಹೆಚ್ಚಿಸಲಾಗದು ಎಂದು ಹೈದ್ರಾಬಾದ್ ಇಕ್ರಿಸ್ಯಾಟ್‌ನ ನಿವೃತ್ತ ಉಪ ಮಹಾ ನಿರ್ದೇಶಕ ಡಾ.ಸಿ.ಎಲ್.ಲಕ್ಷ್ಮೀಪತಿಗೌಡ ಅಭಿಪ್ರಾಯಪಟ್ಟರು.

ಮೈಸೂರು ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರ ಮತ್ತು ವಿಸ್ತರಣಾ ಶಿಕ್ಷಣ ಘಟಕದ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಗುರುವಾರ ಕೃಷಿ ಇಲಾಖೆಯ ಕೃಷಿ ತಂತ್ರಜ್ಞರ ಸಂಸ್ಥೆ, ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ ಮತ್ತು ತೋಟಗಾರಿಕಾ ಮಹಾವಿದ್ಯಾಲಯದ ವತಿಯಿಂದ ಆಯೋಜಿಸಿದ್ದ 'ವಿಶ್ವ ಆಹಾರ ದಿನ' ಹಾಗೂ ರಾಷ್ಟ್ರೀಯ ಮಹಿಳಾ ಕಿಸಾನ ದಿವಸ್ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜನಸಂಖ್ಯೆಗೆ ಅನುಗುಣವಾಗಿ ಆಹಾರ ಬೇಡಿಕೆಯನ್ನು ಪೂರೈಸಬೇಕಾದರೆ ಮಣ್ಣಿನ ಫಲವತ್ತತೆಯನ್ನು ಕಾಪಾಡಿ, ಉತ್ಪಾದನೆ ಹೆಚ್ಚಿಸುವತ್ತ ಗಮನ ಹರಿಸಬೇಕಿದೆ ಎಂದು ಸಲಹೆ ಮಾಡಿದರು.

ರೈತರು ಹವಾಮಾನ ವೈಪರೀತ್ಯದ ಬಗ್ಗೆ ಸದಾ ಎಚ್ಚರವಹಿಸಬೇಕು. ಬೇಸಾಯ ಪದ್ಧತಿಯನ್ನು ಚೆನ್ನಾಗಿ ಮಾಡಬೇಕು. ಹೈನುಗಾರಿಕೆ ಮತ್ತಿತರ ಎರಡನೇ ಕಸುಬು ಮಾಡಬೇಕು. ಇದಕ್ಕೆಲ್ಲಾ ಬೆಂಬಲವಾಗಿ ಕೃಷಿ ಇಲಾಖೆಯು ಕೀಟ ಹಾಗೂ ರೋಗ ನಿರೋಧಕ ಶಕ್ತಿಯುಳ್ಳ ತಳಿಗಳನ್ನು ಪೂರೈಸಬೇಕು. ರೈತರಿಗೆ ಆರ್ಥಿಕ ಸಾಕ್ಷರತೆ ಕಲಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹುಣಸೂರು ವಿಭಾಗದ ಉಪಕೃಷಿ ನಿರ್ದೇಶಕ ಕೆ.ರಾಜು ಮಾತನಾಡಿ, ಈಗ ಆಹಾರ ಭದ್ರತೆ ಸಿಕ್ಕಿದೆ. ಮುಂದೆ ಗುಣಮಟ್ಟದ ಆಹಾರ ಹಾಗೂ ಪೋಷಕಾಂಶವುಳ್ಳ ಆಹಾರ ಸಿಗುವಂತೆ ನೋಡಿಕೊಳ್ಳಬೇಕು. ಆದ್ದರಿಂದ ಎಲ್ಲರೂ ರಾಸಾಯನಿಕ ಗೊಬ್ಬರದ ಕೃಷಿಯ ಬದಲು ಸಾವಯವ ಕೃಷಿಯತ್ತ ಗಮನಹರಿಸಬೇಕು ಎಂದರು.

ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ.ಸಿ.ರಾಮಚಂದ್ರ ಮಾತನಾಡಿ, ಕೃಷಿ ಕ್ಷೇತ್ರದ ಸವಾಲುಗಳನ್ನು ಎದುರಿಸಿ, ರೈತರ ಆರ್ಥಿಕತೆ ಹೆಚ್ಚಿಸಲು ಕೃಷಿ ಸಹಕಾರದ ಪಾತ್ರ ಪ್ರಮುಖವಾಗಿದೆ. ಅವರು ಕೃಷಿ ತಂತ್ರಜ್ಞಾನವನ್ನು ರೈತರಿಗೆ ತಿಳಿಸಬೇಕು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪ್ರಗತಿಪರ ರೈತ ಮಹಿಳೆಯರಾದ ಹುಣಸೂರು ತಾಲೂಕು ಹನುಮಂತಪುರದ ವಸಂತಾ, ಹೆಚ್.ಡಿ.ಕೋಟೆ ತಾಲೂಕು ಕೂಡಗಿಗೆರೆಯ ಕೆ.ಎನ್.ಚೇತನಾ ಮಹೇಶ್, ಜೆಎಸ್‌ಎಸ್ ಕೆವಿಕೆ ವಿಷಯ ತಜ್ಞ ಡಾ.ಕೆ.ದೀಪಕ್, ಮುಖ್ಯಸ್ಥ ಡಾ.ಬಿ.ಎನ್.ಜ್ಞಾನೇಶ್, ಕೃಷಿ ತಂತ್ರಜ್ಞರ ಸಂಸ್ಥೆಯ ಕಾರ್ಯದರ್ಶಿ ಕೆ.ಆರ್. ರವೀಂದ್ರ, ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ನಿರ್ದೇಶಕಿ ಹೆಚ್.ಬಿ.ಮಧುಲತಾ, ಕೃಷಿ ಅಧಿಕಾರಿ ಗೌರವ್ವ ಅಗಸಿಬಾಗಿಲ್, ಕೃಷಿ ತಂತ್ರಜ್ಞ ಹೆಚ್.ಎಸ್.ಕೃಷ್ಣಮೂರ್ತಿ ಮತ್ತಿತರರಿದ್ದರು.

ಸಾರಾ ಕುಟುಂಬದ ಸಾರ್ಥಕತೆ!



ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಪುತ್ರ ಸಾ.ಮ.ಜಯಂತ್ ಅವರು ಪೋಷಿಸುತ್ತಿರುವ ಕುದುರೆ 'ರೋಲೇಕ್ಸ್' ಏಷ್ಯಾ ಮಟ್ಟದ ಪ್ರದರ್ಶನದಲ್ಲಿ ಪ್ರಥಮ ಸ್ಥಾನ ಗಳಿಸಿ, ಅದರಿಂದ ಬಂದ ಲಕ್ಷ ರೂ. ನಗದು ಬಹುಮಾನವನ್ನು ಇತ್ತೀಚೆಗೆ ಮೈಸೂರಲ್ಲಿ ಅತ್ಯಾಚಾರ–ಹತ್ಯೆಗೀಡಾದ ಅಲೆಮಾರಿ ಸಮುದಾಯದ ಅಪ್ರಾಪ್ತ ಬಾಲಕಿ ಪೋಷಕರಿಗೆ ನೆರವಾಗಿ ನೀಡಿದರು. ಈ ನೆರವಿನ ಚೆಕ್ಕನ್ನು ಮೈಸೂರು ಜಿಲ್ಲಾ ದಸಂಸ ನಿಯೋಗವು ಗುಲ್ಬರ್ಗಾಕ್ಕೆ ತೆರಳಿ ಬಾಲಕಿಯ ಪೋಷಕರಿಗೆ ಸಲ್ಲಿಸಿತು. ಈ ವೇಳೆ ದಸಂಸದ ಕೆ.ನಂಜಪ್ಪ ಬಸವನಗುಡಿ, ಮೈಸೂರು ಅಲೆಮಾರಿ ಸಂಘದ ಅಧ್ಯಕ್ಷ ವೆಂಕಟೇಶ್ ಏಕಲವ್ಯನಗರ, ಬಾಲಕಿ ತಂದೆ ದೇಸು, ತಾಯಿ ಅಂಬಿಕಾ, ಸ್ಥಳೀಯ ಅಲೆಮಾರಿ ಸಮುದಾಯದ ಇತರೆ ಮುಖಂಡರು ಇದ್ದರು.

ಅಜ್ಞಾನದ ಕತ್ತಲನ್ನು ದೂರ ಮಾಡಿ ಜ್ಞಾನದ ಬೆಳಕ ಬೀರುವುದೇ ದೀಪಾವಳಿ

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ



ಮಲೆ ಮಾದೇಶ್ವರ ಸೇವಾ ಸಂಸ್ಥೆ ವತಿಯಿಂದ ದೀಪಾವಳಿ ಹಬ್ಬದ ಅಂಗವಾಗಿ ನಗರದ ಸಿಟಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಹಣತೆ ವಿತರಿಸಲಾಯಿತು.

ಮೈಸೂರು, ಅ. 16– ಮಲೆ ಮಾದೇಶ್ವರ ಸೇವಾ ಸಂಸ್ಥೆ ವತಿಯಿಂದ ದೀಪಾವಳಿ ಹಬ್ಬದ ಅಂಗವಾಗಿ ನಗರದ ಸಿಟಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಹಣತೆ ವಿತರಿಸುವ ಮೂಲಕ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಬೆಳಕಿನ ಜಾಗೃತಿ ಮೂಡಿಸಿದರು.

ಬಳಿಕ ಮಾತನಾಡಿದ ಅವರು, ದೀಪಾವಳಿ ಹಬ್ಬವನ್ನು ದೀಪಗಳನ್ನು ಬೆಳಗಿಸುವ ಮೂಲಕ ಮಾಲಿನ್ಯ ರಹಿತವಾಗಿ ಆಚರಿಸೋಣ ಎಂದು ಮನವಿ ಮಾಡಿದರು.

ಪಟಾಕಿ ಸಿಡಿಸುವುದರಿಂದ ವಾಯು ಮಾಲಿನ್ಯ ಮತ್ತು ಶಬ್ದಮಾಲಿನ್ಯ ಉಂಟಾಗುತ್ತದೆ. ಪಟಾಕಿಯಿಂದ ಉಂಟಾಗುವ ತ್ಯಾಜ್ಯವನ್ನು ವಿಲೇವಾರಿ ಮಾಡುವುದು ಪೌರಕಾರ್ಮಿಕರಿಗೆ ದೊಡ್ಡ ಸವಾಲು. ಪಟಾಕಿ ಸಿಡಿಸುವ ಬದಲು ರಂಗೋಲಿ ಹಾಕಿ ದೀಪ ಬೆಳಗುವ ಮೂಲಕ ದೀಪಾವಳಿ ಆಚರಿಸಿದಲ್ಲಿ ಪ್ರಾಣಿ ಸಂಕುಲಕ್ಕೆ ಮತ್ತು ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ಹಾನಿ ಇರುವುದಿಲ್ಲ. ಯುವಪೀಳಿಗೆ ಹಸಿರು ದೀಪಾವಳಿ ಆಚರಿಸುವ ಪಣ ತೊಡಬೇಕು ಎಂದು ಮನವಿ ಮಾಡಿದರು.

ಅಜ್ಞಾನದ ಕತ್ತಲನ್ನು ದೂರ ಮಾಡಿ ಜ್ಞಾನದ ಬೆಳಕನ್ನು ಬೀರುವುದೇ ದೀಪಾವಳಿಯ ಸತ್ಯಾರ್ಥ. ಆದ್ದರಿಂದ, ಪ್ರತಿ ಮನೆ–ಮನೆಯಲ್ಲೂ ಪ್ರತಿಯೊಬ್ಬನ ಮನ–ಮನದಲ್ಲೂ ಜ್ಞಾನವೆಂಬ ದೀಪವು ನಿರಂತರವಾಗಿ ಬೆಳಗುತ್ತಿರಲಿ ಎಂಬುದೇ ದೀಪಾವಳಿ ಹಬ್ಬದ ಉದ್ದೇಶ. ಭಾರತೀಯ ಹಬ್ಬಗಳೆಲ್ಲವೂ ಹರ್ಷದಾಯಕವಾಗಿವೆ. ನಮ್ಮ ಹಿರಿಯರು ಪ್ರತಿ ಹಬ್ಬಕ್ಕೂ ಅದಕ್ಕೆ ಸರಿಹೊಂದುವಂತೆ ಒಂದು ಪುರಾಣ, ಪುಣ್ಯ ಕಥೆಯನ್ನು ಬೆಸೆದು ಹಬ್ಬದ ಮೆರಗು ಹೆಚ್ಚಿಸಿದ್ದಾರೆ. ಆದರೆ ಅದು ಕ್ರಮೇಣವಾಗಿ ಆಧ್ಯಾತ್ಮಿಕತೆಯ ಅರ್ಥ ಕಳೆದುಕೊಂಡು ತನ್ನ ಸೊಬಗನ್ನು ಕಳೆದುಕೊಳ್ಳುತ್ತಿದೆ. ಕೆಲವೆಡೆ ಜಾನುವಾರುಗಳನ್ನು ಪೂಜಿಸಲಾಗುತ್ತದೆ. ಹಾಗಾಗಿ ಇದು ರೈತರ ಹಬ್ಬವೂ ಹೌದು. ನವ–ವಧುವರರಿಗೆ ವಿಶೇಷವಾಗಿ ಮದುವೆಯಾದ ನಂತರ ಬಾಗಿನ ನೀಡುವುದು ಒಂದು ಸಂಪ್ರದಾಯ. ಹೀಗೆ, ದೀಪದ ಕುಡಿಗಳಂತೆ ಹಬ್ಬಕ್ಕೆ ಹಲವು ದಾರಿಗಳಿವೆ ಎಂದರು.

ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಜಿ.ರಾಘವೇಂದ್ರ, ಮಲೆ ಮಾದೇಶ್ವರ ಸೇವಾ ಸಂಸ್ಥೆ ಅಧ್ಯಕ್ಷ ಮಹಾನ್ ಶ್ರೇಯಸ್, ಎಸ್.ಎನ್.ರಾಜೇಶ್, ಚಾಮರಾಜ ಕ್ಷೇತ್ರದ ಬಿಜೆಪಿ ಸಂಚಾಲಕ ಸಚಿನ್ ನಾಯಕ ಇನ್ನಿತರರು ಹಾಜರಿದ್ದರು.

ತಮಿಳ್ನಾಡು ಮಾದರಿ ರಾಜ್ಯದಲ್ಲೂ ಆರ್‌ಎಸ್‌ಎಸ್ ಮೇಲೆ ನಿರ್ಬಂಧ

ಮೈಸೂರಿನಲ್ಲಿ ವಿಧಾನಪರಿಷತ್ ಸದಸ್ಯ ಯತೀಂದ್ರ ಸಮರ್ಥನೆ



ಮೈಸೂರು, ಅ.16(ಬಿಎಲ್‌ಯು)– ತಮಿಳುನಾಡು ಮಾದರಿಯಲ್ಲಿ ಕರ್ನಾಟಕದಲ್ಲೂ ಆರ್‌ಎಸ್‌ಎಸ್‌ಗೆ ನಿರ್ಬಂಧ ಹೇರಲಾಗುವುದು ಎಂದು ವಿಧಾನಪರಿಷತ್ ಸದಸ್ಯ ಯತೀಂದ್ರ ತಿಳಿಸಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ತಮಿಳುನಾಡಿನಲ್ಲಿ ಕಾರ್ಯಕ್ರಮ ಆಯೋಜಿಸಲು ಆರ್‌ಎಸ್‌ಎಸ್‌ಗೆ ನಿಯಮ ಜಾರಿ ಮಾಡಲಾಗಿದೆ. ಅದೇ ಮಾದರಿ ನಿಯಮಗಳನ್ನು ಕರ್ನಾಟಕದಲ್ಲೂ ಜಾರಿ ಮಾಡಲಾಗುವುದು ಎಂದರು.

ಆರ್‌ಎಸ್‌ಎಸ್ ಅನ್ನು ನಾವು ಬ್ಯಾನ್ ಮಾಡಲು ಹೊರಟಿಲ್ಲ. ಆದರೆ ಸಾರ್ವಜನಿಕ ಸ್ಥಳ ಹಾಗೂ ಶಾಲಾ ಕಾಲೇಜುಗಳಲ್ಲಿ ಅನುಮತಿ ಪಡೆಯದೆ ಪಥ ಸಂಚಲನಕ್ಕೆ ಅವಕಾಶ ನೀಡುವುದಿಲ್ಲ ಎಂದರು.

ಯಾವುದೇ ಚಟುವಟಿಕೆ ನಡೆಸಲು ಸರ್ಕಾರದ ಅನುಮತಿ ಕಡ್ಡಾಯ. ಹೀಗಿರುವಾಗ ಯಾವುದೇ ಅನುಮತಿ ಇಲ್ಲದೆ ಪಾರ್ಕ್‌ಗಳಲ್ಲಿ ಆರ್‌ಎಸ್‌ಎಸ್‌ನವರಿಗೆ ಪಥ ಸಂಚಲನ ಮಾಡಲು ಅವಕಾಶ ನೀಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಯತೀಂದ್ರ, ಇಡೀ ದೇಶಕ್ಕೆ ಒಂದು ಕಾನೂನಾದರೆ ಆರ್‌ಎಸ್‌ಎಸ್‌ನವರಿಗೆ ಒಂದು ಕಾನೂನೇ ಎಂದು ಮರು ಪ್ರಶ್ನಿಸಿದರು.

ನಿರ್ದಿಷ್ಟ ಸಿದ್ಧಾಂತ ಇಟ್ಟುಕೊಂಡಿರುವ ಆರ್‌ಎಸ್‌ಎಸ್ ಅದನ್ನು ಜಾರಿ ಮಾಡಲು ಪ್ರಯತ್ನಿಸುತ್ತಿದೆ. ದೇಶದ ಪ್ರತಿಯೊಬ್ಬರಿಗೂ ಒಂದೇ ಕಾನೂನು. ಸಂವಿಧಾನಕ್ಕಿಂತ ಆರ್‌ಎಸ್‌ಎಸ್ ದೊಡ್ಡದಲ್ಲ ಎಂದು ಅಭಿಪ್ರಾಯಪಟ್ಟರು.

ಆರ್‌ಎಸ್‌ಎಸ್ ಬ್ಯಾನ್ ಆಗಿದ್ದ ಸಂಸ್ಥೆ. ಈ ಬಗ್ಗೆ ಇತಿಹಾಸ ಸಾರಿ ಹೇಳುತ್ತದೆ. ಆರ್‌ಎಸ್‌ಎಸ್ ನವರು ತಾವು ಶ್ರೇಷ್ಠರು ಎಂದು ತೋರಿಸಿಕೊಳ್ಳುತ್ತಾರೆ. ಹಿಂದೂ ಸಂಸ್ಕೃತಿಯ ಉತ್ಕೃಷ್ಟ ಮೌಲ್ಯಗಳನ್ನು ತೋರಿಸುತ್ತೇವೆ ಎಂದು ಹೇಳುತ್ತಾರೆ. ಆದರೆ ಅವರು ಮಾಡೋದೆಲ್ಲಾ ಅನಾಚಾರ, ಮನೆ ಮುಂದೆ ಬೃಂದಾವನ ಎಂಬಂತೆ ವರ್ತಿಸುತ್ತಾರೆ ಎಂದು ಯತೀಂದ್ರ ಟೀಕಿಸಿದರು.

ತಾವು ವರ್ಗಾವಣೆ ದಂಧೆಯಲ್ಲಿ ತೊಡಗಿದ್ದೇನೆ ಎಂಬ ಮಾಜಿ ಸಂಸದ ಪ್ರತಾಪ್ ಸಿಂಹ ಆರೋಪಕ್ಕೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಯತೀಂದ್ರ ಅವರು, ಪ್ರತಾಪ್ ಸಿಂಹನನ್ನು ಅವರ ಪಕ್ಷದವರೆ ಗಂಭೀರವಾಗಿ ಪರಿಗಣಿಸಿಲ್ಲ. ದಾರಿಯಲ್ಲಿ ಹೋಗುವವರ ಪ್ರಶ್ನೆಗಳಿಗೆ ನಾನು ಉತ್ತರ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರು ರೈಲು ನಿಲ್ದಾಣದಲ್ಲಿ 'ಪ್ರಾಜೆಕ್ಟ್ ಆಯುಷ್ಮಾನ್ ನರ್ಸಿಂಗ್ ರೂಮ್' ಉದ್ಘಾಟನೆ



ಮೈಸೂರು ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್ ನಂ.2ರಲ್ಲಿ 'ಪ್ರಾಜೆಕ್ಟ್ ಆಯುಷ್ಮಾನ್ ನರ್ಸಿಂಗ್ ರೂಮ್' ಅನ್ನು ಸಂಸದ ಯದುವೀರ ಒಡೆಯರ್ ಉದ್ಘಾಟಿಸಿದರು.

ಮೈಸೂರು,ಅ.16(ಪಿಎಂ)– ನೈರುತ್ಯ ರೈಲ್ವೆ ಮೈಸೂರು ವಿಭಾಗವು ಮೈಸೂರು ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್ ನಂ.2ರಲ್ಲಿ 'ಪ್ರಾಜೆಕ್ಟ್ ಆಯುಷ್ಮಾನ್ ನರ್ಸಿಂಗ್ ರೂಮ್' ಅನ್ನು ಲೇಡಿಸ್ ಸರ್ಕಲ್ ಇಂಡಿಯಾ–ಎಂಎಎಲ್‌ಸಿ 108ರ ಸಹಯೋಗದಲ್ಲಿ ಆರಂಭಿಸಿದೆ.

ರೈಲಿನಲ್ಲಿ ಪ್ರಯಾಣಿಸಲು ನಿಲ್ದಾಣಕ್ಕೆ ಆಗಮಿಸುವ ತಾಯಂದಿರು ತಮ್ಮ ಶಿಶುಗಳಿಗೆ ಹಾಲುಣಿಸಲು ಅನುಕೂಲವಾಗಲು ಹಾಗೂ ಅವರಿಗೆ ಖಾಸಗಿ ಸ್ಥಳವನ್ನು ಒದಗಿಸುವ ಉದ್ದೇಶದಿಂದ ಈ ವ್ಯವಸ್ಥೆ ಕಲ್ಪಿಸಲಾಗಿದೆ. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಈ ರೂಮ್ ಅನ್ನು ಗುರುವಾರ ಉದ್ಘಾಟಿಸಿದರು.

ನರ್ಸಿಂಗ್ ಕೊಠಡಿಯು ರೈಲುಗಳಿಗಾಗಿ ಕಾಯುತ್ತಿರುವಾಗ ತಾಯಂದಿರು ತಮ್ಮ ಶಿಶುಗಳನ್ನು ನೋಡಿಕೊಳ್ಳಲು ಸುರಕ್ಷಿತ, ನೈರ್ಮಲ್ಯ ಮತ್ತು ಹಿತವಾದ ವಾತಾವರಣವನ್ನು ಒದಗಿಸುತ್ತದೆ. ನೈರುತ್ಯ ರೈಲ್ವೆಯ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಶಮ್ಮಾಸ್ ಹಮೀದ್, ಎಂಎಎಲ್‌ಸಿ 108 ಲೇಡಿಸ್ ಸರ್ಕಲ್ ಇಂಡಿಯಾದ ಅಧ್ಯಕ್ಷೆ ನಿಶಾ ದರ್ಶನ್ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

ಮನೆ ಮನೆಯಲ್ಲಿ ಗೊಂಬೆ ಕೂರಿಸುವ ಸ್ಪರ್ಧೆ; ವಿಜೇತರಿಗೆ ಬಹುಮಾನ ವಿತರಣೆ



ಗೊಂಬೆ ಕೂರಿಸುವ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಮೈಸೂರು,ಅ.16(ಪಿಎಂ)– ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಮನೆ ಮನೆಯಲ್ಲಿ ಗೊಂಬೆ ಕೂರಿಸುವ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಗುರುವಾರ ಬಹುಮಾನ ವಿತರಿಸಲಾಯಿತು.

ಚಾಮುಂಡಿಪುರಂನ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿಜೇತರಾದ ಜೆ.ಪಿ.ನಗರದ ರಶ್ಮಿ, ಲಕ್ಷ್ಮೀಪುರಂನ ಉಷಾ, ಬೆಂಗಳೂರಿನ ಮಂಜುಳಾ, ಹಾಸನದ ಗುರು, ಬೆಂಗಳೂರಿನ ರಮ್ಯ, ಶ್ರೀರಾಂಪುರದ ಪೂಜಾ ಪುನೀತ್, ಚಾಮುಂಡಿಪುರಂನ ಶಾರದಾ, ರಾಮಕೃಷ್ಣನಗರದ ಜಗಲಕ್ಷ್ಮೀ, ಅಗ್ರಹಾರದ ಕಾರ್ತಿಕ್, ರಾಮಕೃಷ್ಣನಗರದ ಸ್ವರೂಪಿಣಿ ಅವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಅಲ್ಲದೆ, ಸ್ಪರ್ಧೆಯಲ್ಲಿ ಭಾಗವಹಿಸಿದ್ದ ನೂರಕ್ಕೂ ಹೆಚ್ಚು ಸ್ಪರ್ಧಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಣೆ ಮಾಡಲಾಯಿತು.

ಬಹುಮಾನ ವಿತರಿಸಿ ಮಾತನಾಡಿದ ಹಿರಿಯ ಸಮಾಜ ಸೇವಕ ಕೆ.ರಘುರಾಮ ವಾಜಪೇಯಿ, ಸಂಸ್ಕೃತಿ ಮತ್ತು ನಮ್ಮ ಪರಂಪರೆಯ ಉಳಿವಿಗಾಗಿ ಹೋರಾಡುವ ಸಂದರ್ಭ ಎದುರಾಗಿದೆ. ಪ್ರತಿಯೊಬ್ಬರು ಅದಕ್ಕಾಗಿ ಶ್ರಮಿಸಬೇಕು. ನಮ್ಮ ಸಂಪ್ರದಾಯ ಮತ್ತು ಧಾರ್ಮಿಕತೆ ರಕ್ಷಣೆಗಾಗಿ ಪ್ರತಿಯೊಬ್ಬ ಹಿಂದುಗಳು ಒಗ್ಗಟ್ಟಾಗಬೇಕು ಎಂದು ತಿಳಿಸಿದರು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ನವರಾತ್ರಿಯ ಮೈಸೂರು ಪರಂಪರೆಯಲ್ಲಿ ಅತ್ಯಂತ ಪವಿತ್ರ ದಸರಾ ಗೊಂಬೆ ಪ್ರದರ್ಶನಕ್ಕೆ ಅತ್ಯಂತ ಮಹತ್ವವಿದೆ. ಪಟ್ಟದ ಗೊಂಬೆಗಳನ್ನು ಲಕ್ಷ್ಮೀನಾರಾಯಣ ಸ್ವರೂಪದಲ್ಲಿ ಪೂಜಿಸಿ ಪುರಾಣ ಪುಣ್ಯಕಥೆಗಳನ್ನು ಗೊಂಬೆಗಳ ಮೂಲಕ ರೂಪಕವಾಗಿ ಪ್ರಚುರಪಡಿಸಿ ಅದನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದೇ ಗೊಂಬೆ ಜೋಡಣೆಯ ಮೂಲ ಉದ್ದೇಶ. ಮೈಸೂರಿನ ಮನೆ ಮನೆಗಳಲ್ಲಿ ಕೂರಿಸುವುದರಿಂದ ಗೃಹಿಣಿಯರು ನಮ್ಮ ಪರಂಪರೆಯನ್ನು ಉಳಿಸಿ ಬೆಳೆಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಉದ್ಯಮಿ ಜಯರಾಮ್, ಜೀವಾಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಸಮಾಜ ಸೇವಕರಾದ ಮಂಜುಳಾ ಸೋಮಣ್ಣ, ಕೋಮಲ ಮಣಿ, ಶ್ರುತಿ, ಸಹನಾ, ತಾರಾ ಮತ್ತಿತರರು ಹಾಜರಿದ್ದರು.

ವ್ಯಕ್ತಿ ವಂಚನೆ ಆರೋಪ; ಸಿಎಆರ್ ಮುಖ್ಯ ಪೇದೆ, ಪತ್ನಿ ವಿರುದ್ಧ ಪ್ರಕರಣ ದಾಖಲು

ಮೈಸೂರು, ಅ. 16– ಪಿಯು ಕಾಲೇಜಿಗೆ ಉಪ ಪ್ರಾಂಶುಪಾಲರಾಗಿ ಹಾಗೂ ಟ್ರಸ್ಟ್‌ಗೆ ಟ್ರಸ್ಟಿಯಾಗಿ ನೇಮಕ ಮಾಡುವುದಾಗಿ ನಂಬಿಸಿ ವ್ಯಕ್ತಿಯೊಬ್ಬರಿಗೆ 7.45 ಲಕ್ಷ ರೂ. ವಂಚಿಸಿರುವ ಆರೋಪದ ಮೇರೆಗೆ ಮೈಸೂರಿನ ಸಿಎಆರ್ ಮುಖ್ಯಪೇದೆ ಹಾಗೂ ಪತ್ನಿ ವಿರುದ್ಧ ಕುವೆಂಪುನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸಿಎಆರ್ ಮುಖ್ಯಪೇದೆ ಚೆನ್ನಕೇಶವ, ಇವರ ಪತ್ನಿ ಮಮತಾ ಅವರು ಅಕ್ಷರ ಫೌಂಡೇಶನ್‌ನ ಸಂಸ್ಥಾಪಕ ಸುನಿಲ್ ಎಂಬುವರಿಗೆ ವಂಚನೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.


ವಿವರ: ಅಕ್ಷರ ಫೌಂಡೇಷನ್ ಸಂಸ್ಥಾಪಕ ಸುನಿಲ್ ಅವರನ್ನು ಭೇಟಿ ಮಾಡಿದ ಸಿಎಆರ್ ಮುಖ್ಯಪೇದೆ ಚೆನ್ನಕೇಶವ ಅವರು, ತಾವು ರಾಮಕೃಷ್ಣನಗರದಲ್ಲಿ ಗುರುಕಲ್ಪ ಟ್ರಸ್ಟ್ ಮೂಲಕ ವಿಶ್ವಮಾನವ ಪಿಯು ಕಾಲೇಜು ನಡೆಸುತ್ತಿದ್ದು, ಟ್ರಸ್ಟ್‌ಗೆ ಪತ್ನಿ ಮಮತಾ ಅಧ್ಯಕ್ಷರಾಗಿದ್ದಾರೆ ಎಂದು ತಿಳಿಸಿದ್ದಲ್ಲದೆ, ಸುನಿಲ್ ಅವರನ್ನು ವಿಶ್ವಮಾನವ ಪಿಯು ಕಾಲೇಜ್‌ಗೆ ಉಪಪ್ರಾಂಶುಪಾಲರಾಗಿ ಬರುವಂತೆ ಕೇಳಿಕೊಂಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಚೆನ್ನಕೇಶವ ಅವರ ಆಫರ್ ಅನ್ನು ಸುನಿಲ್ ಆರಂಭದಲ್ಲಿ ತಿರಸ್ಕರಿಸಿದರಾದರೂ, ಚೆನ್ನಕೇಶವ ದುಂಬಾಲು ಬಿದ್ದು ಉತ್ತಮ ವೇತನ ನೀಡುವ ಆಮಿಷ ಒಡ್ಡಿದ್ದರಿಂದ ಸುನಿಲ್ ಕಾಲೇಜಿಗೆ ಉಪ ಪ್ರಾಂಶುಪಾಲರಾಗಲು ಒಪ್ಪಿಕೊಂಡಿದ್ದಾರೆ. ಅಲ್ಲದೆ, ಕೆಲವು ದಿನಗಳ ಕಾಲ ಹಲವಾರು ಶಾಲೆಗಳಿಗೆ ವಿಶ್ವಮಾನವ ಪಿಯು ಕಾಲೇಜಿನ ಪ್ರತಿನಿಧಿಯಾಗಿ ತೆರಳಿ ವಿದ್ಯಾರ್ಥಿಗಳ ಬಳಿ ಕಾಲೇಜಿನ ಬಗ್ಗೆ ಪ್ರಚಾರವನ್ನೂ ಮಾಡಿದ್ದಾರೆ.

ಕೆಲವು ದಿನಗಳ ನಂತರ ಕಾಲೇಜಿಗೆ ಹಣದ ಕೊರತೆ ಇರುವುದರಿಂದ ಟ್ರಸ್ಟ್‌ಗೆ 10 ಲಕ್ಷ ಸಾಲ ನೀಡುವಂತೆ ಮೊದಲು ಕೇಳಿದ್ದು, ನಂತರ ಗುರುಕಲ್ಪ ಟ್ರಸ್ಟ್‌ಗೆ ಟ್ರಸ್ಟಿಯಾಗಿ ನೇಮಕ ಮಾಡಿಕೊಳ್ಳುವ ಆಮಿಷವನ್ನು ಸುನಿಲ್ ಅವರಿಗೆ ಚೆನ್ನಕೇಶವ ಮತ್ತು ಅವರ ಪತ್ನಿ ಒಡ್ಡಿದ್ದಾರೆ. ಈ ಹಿನ್ನಲೆಯಲ್ಲಿ ಸುನಿಲ್ ಅವರು ತಮ್ಮ ಸಂಬಂಧಿಕರಾದ ಛಾಯಾದೇವಿ ಎಂಬುವರೊಡಗೂಡಿ ಚೆನ್ನಕೇಶವ ಅವರಿಗೆ 10 ಲಕ್ಷ ನೀಡಿದ್ದಾರೆ. ಈ ವೇಳೆ ಟ್ರಸ್ಟಿಯಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಅಗ್ರೀಮೆಂಟ್ ಮಾಡಿಕೊಡಲಾಗಿದೆ. ಹಣ ಕೊಟ್ಟು ತಿಂಗಳುಗಳು ಉರುಳಿದರೂ ಟ್ರಸ್ಟಿಯಾಗಿ ನೇಮಕ ಮಾಡಿಕೊಳ್ಳದ ಬಗ್ಗೆ ಪ್ರಶ್ನಿಸಲಾಗಿ, ತಮ್ಮ ಟ್ರಸ್ಟ್ ಹೊಸದಾಗಿ ನೋಂದಣಿಯಾಗಿರುವುದರಿಂದ ಸದ್ಯಕ್ಕೆ ಟ್ರಸ್ಟಿ ಮಾಡಿಕೊಳ್ಳಲು ಸಾಧ್ಯವಿಲ್ಲ, ನಿಮ್ಮ ಹಣ ಸಾಲ ಎಂದು ಪರಿಗಣಿಸಿ ಬಡ್ಡಿ ನೀಡುವುದಾಗಿ ತಿಳಿಸಿದ್ದಾರೆ. ಅಲ್ಲದೇ ಸುನಿಲ್ ಅವರನ್ನು ಉಪ ಪ್ರಾಂಶುಪಾಲರಾಗಿಯೂ ನೇಮಕ ಮಾಡಿಕೊಳ್ಳಲಿಲ್ಲ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಈ ಕುರಿತು ಕುವೆಂಪುನಗರ ಠಾಣೆಗೆ ದೂರು ನೀಡಿದಾಗ ಹಣ ಹಿಂತಿರುಗಿಸಲು ಒಪ್ಪಿದ ಚೆನ್ನಕೇಶವ ಮತ್ತು ಮಮತಾ ಅವರು 2.55 ಲಕ್ಷ ಹಿಂದಿರುಗಿಸಿ ಉಳಿದ ಹಣಕ್ಕೆ ಚೆಕ್ ಕೊಟ್ಟಿದ್ದಾರೆ. ಆದರೆ, ಅವರು ನೀಡಿದ ಚೆಕ್‌ಗಳು ಬೌನ್ಸ್ ಆಗಿವೆ. ಅದರ ಕುರಿತು ಕೇಳಿದರೆ ಚೆನ್ನಕೇಶವ ಮತ್ತು ಅವರ ಪತ್ನಿ ಈಗ ನಮ್ಮ ಬಳಿ ಹಣವಿಲ್ಲ ಏನು ಬೇಕಾದರೂ ಮಾಡಿಕೊಳ್ಳಿ ಎಂದು ಉಡಾಫೆಯಿಂದ ಹೇಳುತ್ತಿದ್ದಾರೆ ಎಂದು ಸುನಿಲ್ ನೀಡಿದ ದೂರಿನ ಮೇರೆಗೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸಚಿವ ಪ್ರಿಯಾಂಕ್ ಖರ್ಗೆಗೆ ಬೆದರಿಕೆ ಹಾಕಿದ್ದ ವ್ಯಕ್ತಿ ಮಹಾರಾಷ್ಟ್ರದಲ್ಲಿ ಬಂಧನ



ಧನೇಶ್ ನರೋಣೆ


ಬೆಂಗಳೂರು, ಅ.16–ಸರ್ಕಾರಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ಗಳನ್ನು ನಿಷೇಧಿಸುವಂತೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವ ರಿಗೆ ಪತ್ರ ಬರೆದಿದ್ದಕ್ಕಾಗಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಕರೆ ಮಾಡಿ ಬೆದರಿಕೆಯೊಡ್ಡಿದ್ದ ಮಹಾರಾಷ್ಟ್ರದ ವ್ಯಕ್ತಿಯನ್ನು ಬೆಂಗಳೂರು ಪೊಲೀಸರು ಬಂಧಿಸಿದ್ದಾರೆ.

ಬೆದರಿಕೆ ಕರೆ ಹಿನ್ನೆಲೆಯಲ್ಲಿ ಸದಾಶಿವ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಬೆಂಗಳೂರು ಕೇಂದ್ರ ವಿಭಾಗ ಮತ್ತು ಕಲಬುರಗಿ ಪೊಲೀಸರು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿಯನ್ನು ಧನೇಶ್ ನರೋಣೆ ಅಲಿಯಾಸ್ ದಾನಪ್ಪ ನರೋಣೆ ಎಂದು ಗುರುತಿಸಲಾಗಿದ್ದು, ಈತ ಕರ್ನಾಟಕದ ಗಡಿ ಜಿಲ್ಲೆ ಯಾಗಿರುವ ಮಹಾರಾಷ್ಟ್ರದ ಸೋಲಾಪುರದವನೆಂದು ಪೊಲೀಸ್ ಮೂಲಗಳು ತಿಳಿಸಿವೆ.

ಫೋನ್ ಕರೆಯ ನಂತರ ಆತ ತನ್ನ ಊರು ಬಿಟ್ಟು ಲಾತೂರ್‌ನಲ್ಲಿ ಅಡಗಿಕೊಂಡಿದ್ದ. ಪೊಲೀಸ್ ಮೂಲಗಳ ಪ್ರಕಾರ, ಆತ ಬಿಸ್ಕತ್ತು ಮತ್ತು ಮಿಠಾಯಿ ತಯಾರಿಕಾ ಕಂಪನಿಗಳಿಗೆ ಮಾರ್ಕೆಟಿಂಗ್ ಏಜೆಂಟ್ ಆಗಿ ಕೆಲಸ ಮಾಡುತ್ತಾನೆ. ಅವನು ಸರ್ಚ್ ಇಂಜಿನ್ ಬಳಸಿ ಖರ್ಗೆಯವರ ಫೋನ್ ನಂಬರ್ ಅನ್ನು ಪಡೆದಿದ್ದಾನೆ. ಆರೋಪಿ ಈ ಹಿಂದೆ ಯಾವುದೇ ಅಪರಾಧಗಳಲ್ಲಿ ಭಾಗಿಯಾಗಿದ್ದಾನೆಯೇ ಎಂಬುದನ್ನು ಪತ್ತೆಹಚ್ಚಲು ಆತನನ್ನು ವಿಚಾರಣೆಗೆ ಒಳಪಡಿಸಲಾಗುತ್ತಿದೆ.


ದೇಶ – ವಿದೇಶ

ನಕಲಿ ನೋಟು ಮುದ್ರಿಸುತ್ತಿದ್ದ ಜಾಲ ಪತ್ತೆ, ಕೋಟಿ ಮೌಲ್ಯದ ನಕಲಿ ನೋಟು ಪತ್ತೆ



ಬೆಳಗಾವಿ: ರಾಜ್ಯದಲ್ಲಿ ಕೋಟಾ ನೋಟು ಮುದ್ರಿಸುತ್ತಿದ್ದ ಜಾಲವನ್ನು ಪೊಲೀಸರು ಪತ್ತೆ ಮಾಡಿದ್ದು, 1 ಕೋಟಿ ಮೌಲ್ಯದ ನಕಲಿ ನೋಟುಗಳನ್ನು ವಶಕ್ಕೆ ಪಡೆದಿದ್ದಾರೆ. ಕರ್ನಾಟಕ–ಮಹಾರಾಷ್ಟ್ರ ಗಡಿಯ ಬಳಿ ಕಾರ್ಯನಿರ್ವಹಿಸುತ್ತಿದ್ದ ದೊಡ್ಡ ಪ್ರಮಾಣದ ನಕಲಿ ಕರೆನ್ಸಿ ಜಾಲವನ್ನು ಮಹಾರಾಷ್ಟ್ರ ಪೊಲೀಸರು ಭೇದಿಸಿದ್ದು, 1 ಕೋಟಿ ಮೌಲ್ಯದ ನಕಲಿ ನೋಟುಗಳನ್ನು ವಶಪಡಿಸಿಕೊಂಡಿದ್ದಾರೆ. ನಿರ್ದಿಷ್ಟ ಗುಪ್ತಚರ ಮಾಹಿತಿಯ ಮೇರೆಗೆ ಕಾರ್ಯಾಚರಣೆ ನಡೆಸಿದ ಮಿರಾಜ್‌ನ ಗಾಂಧಿ ಚೌಕ್ ಪೊಲೀಸ್ ಠಾಣೆಯ ವಿಶೇಷ ಪೊಲೀಸ್ ತಂಡವು ಬೆಳಗಾವಿ ತಾಲ್ಲೂಕಿನ ಕಾಗವಾಡದಿಂದ ಸುಮಾರು 15 ಕಿ.ಮೀ ದೂರದಲ್ಲಿ ಮಹಾರಾಷ್ಟ್ರ ಸರಹದ್ದಿನಲ್ಲಿ 500 ರೂ. ಮುಖಬೆಲೆಯ ನಕಲಿ ನೋಟುಗಳನ್ನು ಈ ತಂಡ ಸಾಗಿಸುತ್ತಿತ್ತು. ಈ ವೇಳೆ ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ನಕಲಿ ನೋಟುಗಳನ್ನು ಮುದ್ರಿಸುವ ಮತ್ತು ಚಲಾವಣೆ ಮಾಡುವಲ್ಲಿ ಭಾಗಿಯಾಗಿದ್ದ ಐವರು ಆರೋಪಿಗಳನ್ನು ತಂಡ ಬಂಧಿಸಿದೆ ಎಂದು ಮೂಲಗಳು ತಿಳಿಸಿವೆ.

ಭೀಕರ ಅಪಘಾತ; ಟ್ರಕ್ ಪಲ್ಟಿಯಾಗಿ ಒಂದೇ ಕುಟುಂಬದ 15 ಮಂದಿ ಸಾವು!



ಪೇಶಾವರ: ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಸುರಂಗದ ಬಳಿ ಗುರುವಾರ ಟ್ರಕ್ ಉರುಳಿ ಬಿದ್ದ ಪರಿಣಾಮ ಒಂದೇ ಕುಟುಂಬದ 15 ಮಂದಿ ಸಾವಿಗೀಡಾಗಿದ್ದು, 8 ಮಂದಿ ಗಾಯಗೊಂಡಿದ್ದಾರೆ. ಮಲಕಂಡ್ ಜಿಲ್ಲೆಯ ಸ್ವಾತ್ ಮೋಟಾರು ಮಾರ್ಗದಲ್ಲಿ ಈ ಅಪಘಾತ ಸಂಭವಿಸಿದೆ ಎಂದು ರೆಸ್ಕ್ಯೂ 1122 ತುರ್ತು ಸೇವೆಗಳ ವಕ್ತಾರರು ತಿಳಿಸಿದ್ದಾರೆ. ಎಲ್ಲ ಸಂತ್ರಸ್ತರು ಸ್ವಾತ್‌ನ ಬಹ್ರೇನ್ ತೆಹಸಿಲ್‌ನ ಗಿಬ್ರಾಲ್ ಪ್ರದೇಶದ ಅಲೆಮಾರಿ ಕುಟುಂಬಕ್ಕೆ ಸೇರಿದವರಾಗಿದ್ದು, ಅವರು ಆಗಾಗ್ಗೆ ವಿವಿಧ ಪ್ರದೇಶಗಳಿಗೆ ಕಾಲೋಚಿತವಾಗಿ ವಲಸೆ ಹೋಗುತ್ತಿದ್ದರು. ಮಾಹಿತಿ ಲಭ್ಯವಾದ ಕೂಡಲೇ, ರಕ್ಷಣಾ ಸೇವೆಗಳು, ಪೊಲೀಸರು ಅಪಘಾತದ ಸ್ಥಳಕ್ಕೆ ತಲುಪಿ, ಗಾಯಗೊಂಡವರನ್ನು ಮತ್ತು ಮೃತದೇಹಗಳನ್ನು ಬಟ್ಖೇಲಾದ ಜಿಲ್ಲಾ ಪ್ರಧಾನ ಕಚೇರಿ ಆಸ್ಪತ್ರೆಗೆ ಸಾಗಿಸಿದರು.

ಆಸ್ಪತ್ರೆಯಲ್ಲಿ, 15 ಮಂದಿ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದ್ದು, 8 ಮಂದಿ ಗಾಯಾಳುಗಳಿಗೆ ತುರ್ತು ವೈದ್ಯಕೀಯ ಚಿಕಿತ್ಸೆ ನೀಡಲಾಯಿತು. ಗಂಭೀರವಾಗಿ ಗಾಯಗೊಂಡವರಲ್ಲಿ ನಾಲ್ವರನ್ನು ವಿಶೇಷ ಆರೈಕೆಗಾಗಿ ಸ್ವಾತ್‌ಗೆ ಕಳುಹಿಸಲಾಯಿತು. ಮೃತರು ಮತ್ತು ಗಾಯಗೊಂಡವರಲ್ಲಿ ಪುರುಷರು, ಮಹಿಳೆಯರು ಮತ್ತು ಮಕ್ಕಳು ಸೇರಿದ್ದಾರೆ.

ಸಿಜೆಐ ಮೇಲೆ ಶೂ ಎಸೆಯಲೆತ್ನ: ವಕೀಲ ರಾಕೇಶ್ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮಕ್ಕೆ ಒಪ್ಪಿಗೆ



ಹೊಸದಿಲ್ಲಿ: ಸಿಜೆಐ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆದ ವಕೀಲ ರಾಕೇಶ್ ಕಿಶೋರ್ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮ ಪ್ರಾರಂಭಿಸಲು ಭಾರತದ ಅಟಾರ್ನಿ ಜನರಲ್ (ಎಜಿ) ಒಪ್ಪಿಗೆ ನೀಡಿದ್ದಾರೆ

ಕಳೆದ ವಾರ ನ್ಯಾಯಾಲಯದ ಕಲಾಪದ ವೇಳೆ ಸಿಜೆಐ ಬಿಆರ್ ಗವಾಯಿ ಅವರ ಮೇಲೆ ವಕೀಲ ರಾಕೇಶ್ ಕಿಶೋರ್ ಶೂ ಎಸೆಯಲು ಪ್ರಯತ್ನಿಸಿದ್ದರು. ಅವರ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣವನ್ನು ಪ್ರಾರಂಭಿಸಲು ಭಾರತದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಒಪ್ಪಿಗೆ ನೀಡಿದ್ದಾರೆ. ಸುಪ್ರೀಂಕೋರ್ಟ್ ಬಾರ್ ಅಸೋಸಿಯೇಷನ್ ಅಧ್ಯಕ್ಷ, ಹಿರಿಯ ವಕೀಲ ವಿಕಾಸ್ ಸಿಂಗ್ ಮತ್ತು ಭಾರತದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಜಂಟಿಯಾಗಿ 2ನೇ ಹಿರಿಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠದ ಮುಂದೆ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ಕುರಿತು ತ್ವರಿತ ವಿಚಾರಣೆಯನ್ನು ನಡೆಸುವಂತೆ ಮನವಿ ಮಾಡಿದ್ದಾರೆ.


8 ಯುದ್ಧ ನಿಲ್ಲಿಸಿದ್ದೇನೆ; ಮುಂದಿನ ವರ್ಷ ನೊಬೆಲ್ ಸಿಗಬಹುದು: ಟ್ರಂಪ್ ವಿಶ್ವಾಸ



ವಾಷಿಂಗ್ಟನ್: ಯಾವುದೇ ಅಧ್ಯಕ್ಷರು ಒಂದೇ ಒಂದು ಯುದ್ಧ ನಿಲ್ಲಿಸಿದ್ದಾರೆ ಎಂದು ನನಗೆ ಅನಿಸುವುದಿಲ್ಲ. ನಾನು 8 ತಿಂಗಳಿನಲ್ಲಿ 8 ಯುದ್ಧ ನಿಲ್ಲಿಸಿದ್ದೇನೆ. ಆದರೂ ನನಗೆ ನೊಬೆಲ್ ಪ್ರಶಸ್ತಿ ಸಿಕ್ಕಿಲ್ಲ. ಮುಂದಿನ ವರ್ಷ ಸಿಗಬಹುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಶ್ವೇತಭವನದಲ್ಲಿ ಈ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದ್ದಾರೆ. ಯುದ್ಧ ನಿಲ್ಲಿಸುವ ಮೂಲಕ ನಾನು ಲಕ್ಷಾಂತರ ಜೀವಗಳನ್ನು ಉಳಿಸಿದ್ದೇನೆ. ಪಾಕಿಸ್ತಾನ ಪ್ರಧಾನಿ ಚೆನ್ನಾಗಿ ಹೇಳಿದರು. ನಾನು ಲಕ್ಷಾಂತರ ಜೀವಗಳನ್ನು ಉಳಿಸಿದೆ ಎಂದರು. ಭಾರತದೊಂದಿಗೆ ಪರಮಾಣು ಯುದ್ಧವಾಗುತ್ತಿತ್ತು ಎನ್ನುವುದನ್ನು ಅವರು ಉಲ್ಲೇಖಿಸಿದ್ದರು ಎಂದು ಟ್ರಂಪ್ ಹೇಳಿದ್ದಾರೆ.

ವ್ಯಾಪಾರವನ್ನು ಮುಂದಿಟ್ಟುಕೊಂಡು ನಾವು ಹಲವು ಯುದ್ಧವನ್ನು ನಿಲ್ಲಿಸಿದ್ದೇವೆ. ಉದಾಹರಣೆಗೆ ಭಾರತ ಹಾಗೂ ಪಾಕಿಸ್ತಾನ ನಡುವೆ ಪರಿಸ್ಥಿತಿ ಬಿಗಡಾಯಿಸುತ್ತಿತ್ತು. ಏಳು ವಿಮಾನಗಳನ್ನು ಹೊಡೆದು ಹಾಕಲಾಗಿತ್ತು. ಕೆಟ್ಟ ಸಂಗತಿಗಳು ನಡೆಯುತ್ತಿತ್ತು. ನಾನು ಅವರಿಬ್ಬರೊಂದಿಗೆ ವ್ಯಾಪಾರದ ವಿಷಯ ಮಾತನಾಡಿದೆ ಎಂದು ಟ್ರಂಪ್ ಹೇಳಿದ್ದಾರೆ.

ಸಿಎಂ ಬಿಟ್ಟು ಗುಜರಾತ್‌ನ ಎಲ್ಲಾ 16 ಸಚಿವರು ದಿಢೀರ್ ರಾಜೀನಾಮೆ



ಗುಜರಾತ್: ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಹೊರತುಪಡಿಸಿ ರಾಜ್ಯದ ಭಾರತೀಯ ಜನತಾ ಪಕ್ಷ ನೇತೃತ್ವದ ಸರ್ಕಾರದಲ್ಲಿರುವ ಎಲ್ಲಾ 16 ಸಚಿವರು ರಾಜೀನಾಮೆ ನೀಡಿದ್ದಾರೆ. ಏಕೆಂದರೆ ಗುಜರಾತ್‌ನ ಬಿಜೆಪಿ ಸರ್ಕಾರ ತನ್ನ ಸಚಿವ ಸಂಪುಟವನ್ನು ವಿಸ್ತರಿಸಲು ಯೋಜಿಸುತ್ತಿದೆ. ಶುಕ್ರವಾರ ಮಧ್ಯಾಹ್ನ 12.39ಕ್ಕೆ ಗುಜರಾತ್ ಹೊಸ ಸಚಿವ ಸಂಪುಟದ ಪ್ರಮಾಣವಚನ ಸಮಾರಂಭ ನಡೆಯಲಿದೆ. ವರದಿಗಳ ಪ್ರಕಾರ ಗುಜರಾತ್‌ನಲ್ಲಿನ ಬಿಜೆಪಿ ಸರ್ಕಾರದ ಸಂಪುಟ ವಿಸ್ತರಣೆಯಲ್ಲಿ ಸರಿಸುಮಾರು ಐದು ಸಚಿವರನ್ನು ಉಳಿಸಿಕೊಳ್ಳುವ ನಿರೀಕ್ಷೆಯಿದೆ. ಆದರೆ ಹಲವಾರು ಹಳೆಯ ಮುಖಗಳನ್ನು ಕೈಬಿಡಬಹುದು. ಅದೇ ಸಮಯದಲ್ಲಿ 16 ಹೊಸ ಮುಖಗಳನ್ನು ಸಂಪುಟದಲ್ಲಿ ಸೇರಿಸಿಕೊಳ್ಳಬಹುದು. ಇಬ್ಬರು ಮಹಿಳಾ ನಾಯಕಿಯರನ್ನು ಸಚಿವರನ್ನಾಗಿ ನೇಮಿಸುವ ಸಾಧ್ಯತೆಯಿದೆ. ಹೊಸ ಸಂಪುಟದಲ್ಲಿ ಸರಿಸುಮಾರು 20 ರಿಂದ 23 ಸದಸ್ಯರಿರುತ್ತಾರೆ ಎಂದು ನಿರೀಕ್ಷಿಸಲಾಗಿದೆ.

ಮೈಸೂರು ಮಿತ್ರ ಶುಕ್ರವಾರ 17 ಅಕ್ಟೋಬರ್ 2025

ವಿರಾಜಪೇಟೆ ಬಳಿ ಮತ್ತೊಂದು ದರೋಡೆ

ಕಾರು ತಡೆದು ಹಲ್ಲೆ ನಡೆಸಿ 10 ಲಕ್ಷ ರೂ ದೋಚಿ ಇಬ್ಬರು ಅಕ್ಕಸಾಲಿಗರನ್ನು ಅಪಹರಿಸಿ ಪರಾರಿಯಾದ ದರೋಡೆಕೋರರು



ಹಲ್ಲೆಗೊಳಗಾದ ರದೀಶ್



ದರೋಡೆಗೆ ಒಳಗಾದ ಕಾರನ್ನು ತಪಾಸಣೆ ನಡೆಸುತ್ತಿರುವ ಪೊಲೀಸರು.

ಮಡಿಕೇರಿ,ಅ.16– ವಿರಾಜಪೇಟೆಯ ಬಾಳುಗೋಡು ಬಳಿ ಬುಧವಾರ ಹಾಡ ಹಗಲೇ ನಡೆದ ಹಲ್ಲೆ ಮತ್ತು ದರೋಡೆ ಪ್ರಕರಣ ಮಾಸುವ ಮುನ್ನ ವಿರಾಜಪೇಟೆ ಬಳಿಯ ಪೆರಂಬಾಡಿ ಸಮೀಪ ಮತ್ತೊಂದು ದರೋಡೆ ನಡೆದಿದ್ದು, ಇಬ್ಬರು ಅಕ್ಕಸಾಲಿಗರನ್ನು ಅಪಹರಿಸಲಾಗಿದೆ.

ಮೈಸೂರಿನಲ್ಲಿ ಚಿನ್ನ ಮಾರಾಟ ಮಾಡಿ 10 ಲಕ್ಷ ನಗದಿನೊಂದಿಗೆ ಕಾರಿನಲ್ಲಿ ಕೇರಳದ ಕೂತುಪರಂಬುವಿಗೆ ತೆರಳುತ್ತಿದ್ದ ಅಕ್ಕಸಾಲಿಗರ ಮೇಲೆ ತೀವ್ರ ಹಲ್ಲೆ ನಡೆಸಿ ಹಣ ದರೋಡೆ ಮಾಡಿ ಕಾರಿನಲ್ಲೇ ಇಬ್ಬರನ್ನು ಅಪಹರಣ ಮಾಡಿರುವ ಘಟನೆ ವಿರಾಜಪೇಟೆ ಪೆರುಂಬಾಡಿ ಬಳಿ ಸಂಭವಿಸಿದೆ.

ಕೆಲವೇ ದಿನಗಳಲ್ಲಿ ನಡೆದಿರುವ ಎರಡು ದರೋಡೆ ಪ್ರಕರಣಗಳಿಂದ ಕೊಡಗು ಜಿಲ್ಲೆಯನ್ನು ಬೆಚ್ಚಿ ಬೀಳಿಸಿದೆ. ಕೇರಳ ರಾಜ್ಯದ ಕಣ್ಣಾನೂರು ಜಿಲ್ಲೆಯ ಕೂತುಪರಂಬುವಿನ ನಿವಾಸಿ ರದೀಶ್(30) ಮೇಲೆ ಹಲ್ಲೆ ನಡೆಸಿ ದರೋಡೆ ಮಾಡಲಾಗಿದ್ದು, ಇಬ್ಬರು ಅಕ್ಕಸಾಲಿಗರಾದ ಗಣೇಶ್ ಮತ್ತು ಸಂತೋಷ್ ಅವರ ಮೇಲೆ ಹಲ್ಲೆ ನಡೆಸಿ ಅಪಹರಿಸಲಾಗಿದೆ. ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇಂದು ಬೆಳಗ್ಗಿನ ಜಾವ ಈ ಘಟನೆ ನಡೆದಿದ್ದು ಗಾಯಾಳುವಿಗೆ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ಪ್ರಕರಣ ಹಿನ್ನೆಲೆ: ಕೂತುಪರಂಬು ನಿವಾಸಿಗಳಾದ ಅಕ್ಕಸಾಲಿಗ ವೃತ್ತಿ ನಿರ್ವಹಿಸುವ ಗಣೇಶ(36), ಸಂತೋಷ(35) ಹಾಗೂ ರದೀಶ್(30) ಅವರುಗಳು ಕಾರಿ(ಕೆಎ.19–ಎಂಹೆಚ್.4826) ನಲ್ಲಿ ಬೆಳಗ್ಗೆ 4 ಗಂಟೆಗೆ ಕೇರಳದಿಂದ ಹೊರಟು ಮೈಸೂರಿಗೆ ತೆರಳಿ ಚಿನ್ನವನ್ನು ಮಾರಾಟ ಮಾಡಿ 10 ಲಕ್ಷ ರೂ.ಗಳನ್ನು ಪಡೆದು ಪೆರುಂಬಾಡಿ ಮೂಲಕ ಕೂತುಪರಂಬುವಿಗೆ ಹಿಂತಿರುಗುತ್ತಿದ್ದರು.

ಈ ವೇಳೆ 7ರಿಂದ 8 ಮಂದಿ ತಂಡ ಕೇರಳ ನೋಂದಣಿಯ ಎರಡು ಕಾರುಗಳಲ್ಲಿ ಆಗಮಿಸಿದ ದರೋಡೆಕೋರರು ರದೀಶ್ ಅವರಿದ್ದ ಕಾರನ್ನು ಅಡ್ಡಗಟ್ಟಿ ಮೂರು ಮಂದಿಯ ಮೇಲೆ ತೀವ್ರ ಹಲ್ಲೆ ನಡೆಸಿದ್ದಾರೆ. ಮಾತ್ರವಲ್ಲದೇ ಕಾರಿನಲ್ಲಿದ್ದ 10 ಲಕ್ಷ ರೂ. ನಗದನ್ನು ಕಸಿದುಕೊಂಡು ಹಲ್ಲೆಗೊಳಗಾದ ಗಣೇಶ ಮತ್ತು ಸಂತೋಷ ಅವರನ್ನು ಕೂಡ ತಮ್ಮ ಕಾರಿನಲ್ಲಿ ಅಪಹರಿಸಿದ್ದಾರೆ. ಈ ಕುರಿತು ರದೀಶ್ ವಿರಾಜಪೇಟೆ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ಪೊಲೀಸರು ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಜಿಲ್ಲೆಯಾದ್ಯಂತ ನಾಕಾಬಂಧಿ: ಘಟನೆ ನಡೆದ ತಕ್ಷಣವೇ ಆರೋಪಿಗಳ ಪತ್ತೆ ಕಾರ್ಯಕ್ಕಾಗಿ ಪೊಲೀಸ್ ಇಲಾಖೆ ಕೊಡಗು ಜಿಲ್ಲೆಯಾದ್ಯಂತ ನಾಕಾಬಂಧಿ ಹಾಕಿದೆ. ಜಿಲ್ಲೆಯಿಂದ ಹೊರ ಹೋಗುವ ಎಲ್ಲಾ ವಾಹನಗಳನ್ನು ತೀವ್ರ ತಪಾಸಣೆಗೆ ಒಳಪಡಿಸಲಾಗುತ್ತಿದೆ. ಎರಡೂ ದರೋಡೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಇಲಾಖೆ ಆರೋಪಿಗಳ ಪತ್ತೆಗೆ ಕ್ರಮ ಕೈಗೊಂಡಿದೆ.

ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನಿಸಿದ ಪ್ರಕರಣ

ಮಡಿಕೇರಿಯಲ್ಲಿ ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ಜಿಲ್ಲಾ ಘಟಕದಿಂದ ಪ್ರತಿಭಟನೆ



ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ಜಿಲ್ಲಾ ಘಟಕದಿಂದ ಪ್ರತಿಭಟನೆ.

ಮಡಿಕೇರಿ,ಅ.16– ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ಕಡೆಗೆ ಶೂ ಎಸೆಯಲೆತ್ನಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತು ಅದನ್ನು ಬೆಂಬಲಿಸಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ಗಡಿಪಾರು ಮಾಡುವಂತೆ ಆಗ್ರಹಿಸಿ ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ಜಿಲ್ಲಾ ಘಟಕದಿಂದ ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.


ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ಜಿಲ್ಲಾಧ್ಯಕ್ಷ ಕೆ.ಮೊಣ್ಣಪ್ಪ ನೇತೃತ್ವದಲ್ಲಿ ಗುರುವಾರ ಬೆಳಗ್ಗೆ ಪಕ್ಷದ ಪದಾಧಿಕಾರಿಗಳು ಮತ್ತು ಸದಸ್ಯರು ಜಿಲ್ಲಾಡಳಿತ ಭವನದ ಮುಂಭಾಗ ಸಮಾವೇಶಗೊಂಡು ಘೋಷಣೆಗಳ ಸಹಿತ ಪ್ರತಿಭಟನೆ ನಡೆಸಿದರು. ಶೂ ಎಸೆದ ಆರೋಪಿ ಮತ್ತು ಅದನ್ನು ಬೆಂಬಲಿಸಿ ಹೇಳಿಕೆ ನೀಡಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧ್ಯಕ್ಷ ಕೆ.ಮೊಣ್ಣಪ್ಪ, ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ವಿರುದ್ಧ ಶೂ ಎಸೆಯಲೆತ್ನಿಸಿದ ವಕೀಲ ರಾಕೇಶ್ ಕಿಶೋರ್, ಆತನ ವರ್ತನೆಯನ್ನು ಬೆಂಬಲಿಸಿದ ನಿವೃತ್ತ ಪೊಲೀಸ್ ಅಧಿಕಾರಿ ಭಾಸ್ಕರ ರಾವ್ ಹಾಗೂ ಅಂಬೇಡ್ಕರ್ ಮತ್ತು ಸಂವಿಧಾನದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ವಕೀಲ ಅನಿಲ್ ಮಿಶ್ರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯ ಬಳಿಕ ಮನವಿ ಪತ್ರವನ್ನು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರಿಗೆ ಸಲ್ಲಿಸಲಾಯಿತು. ಈ ಸಂದರ್ಭ ಪಕ್ಷದ ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

ಇಂದು ತಲಕಾವೇರಿಯಲ್ಲಿ ಕಾವೇರಿ ತೀರ್ಥೋದ್ಭವ

ಮಡಿಕೇರಿ,ಅ.16– ತಲಕಾವೇರಿ ಕ್ಷೇತ್ರದ ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಇಂದು ನಡೆಯಲಿದೆ. ಅ.17ರ ಶುಕ್ರವಾರ ಮಧ್ಯಾಹ್ನ 1 ಗಂಟೆ 44 ನಿಮಿಷಕ್ಕೆ ಪವಿತ್ರ ತೀರ್ಥ ಕುಂಡಿಕೆಯಿಂದ ಕಾವೇರಿ ಮಾತೆ ತೀರ್ಥ ಸ್ವರೂಪಿಣಿಯಾಗಿ ಭಕ್ತರಿಗೆ ದರ್ಶನ ನೀಡಲಿದ್ದಾಳೆ.



ಈ ಅಮೃತ ಘಳಿಗೆಗೆ ಸಾಕ್ಷಿಗಳಾಗಲು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಜುರಾಯಿ ಮತ್ತು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರುಗಳು ಆಗಮಿಸಲಿದ್ದಾರೆ. ಭಾಗಮಂಡಲದ ಕಾವೇರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ನಿರ್ಮಿಸಿರುವ ಹೆಲಿಪ್ಯಾಡ್‌ಗೆ ಡಿ.ಕೆ.ಶಿವಕುಮಾರ್ 12.30 ಗಂಟೆಗೆ ಆಗಮಿಸಲಿದ್ದು, ಬಳಿಕ ರಸ್ತೆ ಮಾರ್ಗವಾಗಿ ಭಾಗಮಂಡಲ ಹಾಗೂ ತಲಕಾವೇರಿಗೆ ತೆರಳಿ ತೀರ್ಥೋದ್ಭವದಲ್ಲಿ ಪಾಲ್ಗೊಳ್ಳಲಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು, ಶಾಸಕರು ಮತ್ತು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಡಾ.ಮಂತರ್ ಗೌಡ, ವಿಧಾನ ಪರಿಷತ್ ಸದಸ್ಯ ಎಂ.ಪಿ. ಸುಜಾ ಕುಶಾಲಪ್ಪ, ಜಿಲ್ಲಾಧಿಕಾರಿ ವೆಂಕಟ್ ರಾಜ, ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಸೇರಿದಂತೆ ಹತ್ತಾರು ಗಣ್ಯರು ತಲಕಾವೇರಿಗೆ ಆಗಮಿಸಲಿದ್ದಾರೆ.

ತೀರ್ಥೋದ್ಭವದ ಶುಭ ಕೋರುವ ಫಲಕಗಳನ್ನು ಹರಿದ ಕಿಡಿಗೇಡಿಗಳು

ಕೊಡಗು ಗೌಡ ಸಮಾಜಗಳ ಒಕ್ಕೂಟ ತೀವ್ರ ಖಂಡನೆ



ಮಡಿಕೇರಿ,ಅ16– ಪವಿತ್ರಕಾವೇರಿ ತೀರ್ಥೋದ್ಭವದ ಶುಭಕೋರುವ ಫಲಕಗಳನ್ನು ಹರಿದು ಹಾಕಿ ದುಷ್ಕರ್ಮಿಗಳು ನಾಶ ಮಾಡಿದ್ದು, ಈ ಕೃತ್ಯಕ್ಕೆ ಕೊಡಗು ಗೌಡ ಸಮಾಜಗಳ ಒಕ್ಕೂಟ ತೀವ್ರ ಖಂಡನೆ ವ್ಯಕ್ತಪಡಿಸಿದೆ.

ಕೊಡಗು ಗೌಡ ಸಮಾಜಗಳ ಒಕ್ಕೂಟದ ನೇತೃತ್ವದಲ್ಲಿ ಎಲ್ಲಾ ಸದಸ್ಯ ಸಮಾಜಗಳು ಮತ್ತು ಸಂಘಟನೆಗಳ ಸಹಕಾರದಲ್ಲಿ ಸುಮಾರು 80 ಫಲಕಗಳನ್ನು ಕುಶಾಲನಗರದಿಂದ ತಲಕಾವೇರಿವರೆಗೆ ಅಳವಡಿಸಲಾಗಿತ್ತು. ಕಾರುಗುಂದ, ಬಕ್ಕ, ಚೇರಂಬಾಣೆ ಸೇರಿದಂತೆ ಕೆಲವು ಕಡೆ ಈ ಫಲಕಗಳನ್ನು ಕೆಲವು ದುಷ್ಕರ್ಮಿಗಳು ಕಳೆದ ರಾತ್ರಿ ಹರಿದು ಹಾಕಿರುವುದು ಕಂಡು ಬಂದಿದೆ. ಕೃತ್ಯವನ್ನು ಖಂಡಿಸುವುದಾಗಿ ಕೊಡಗು ಗೌಡ ಸಮಾಜಗಳ ಒಕ್ಕೂಟದ ಪ್ರಮುಖರು ಹೇಳಿಕೆ ನೀಡಿದ್ದಾರೆ.

ಗೌಡ ಸಮಾಜ ಖಂಡನೆ: ಪವಿತ್ರ ಕಾವೇರಿ ತುಲಾ ಸಂಕ್ರಮನಕ್ಕೆ ಕೊಡಗು ಗೌಡ ಸಮಾಜಗಳ ಒಕ್ಕೂಟದ ವತಿಯಿಂದ ಶುಭ ಕೋರಿದ್ದ ಬ್ಯಾನರ್‌ನ್ನು ಮಡಿಕೇರಿ– ಭಾಗಮಂಡಲ ಮುಖ್ಯ ರಸ್ತೆಯಲ್ಲಿ ಅಳವಡಿಸಲಾಗಿತ್ತು. ಬ್ಯಾನರ್‌ಗಳನ್ನು ಬುಧವಾರ ರಾತ್ರಿ ಯಾರೋ ಕಿಡಿಗೇಡಿಗಳು ಆಯುಧದಿಂದ ಹರಿದು ಬಿಸಾಡಿರುತ್ತಾರೆ ಚೇರಂಭಾಣೆ ಗೌಡ ಸಮಾಜ ಕಾರಗುಂದ ಖಂಡನೆ ವ್ಯಕ್ತಪಡಿಸಿದ್ದು ಇಂಥ ನೀಚ ಕೆಲಸ ಮಾಡಿರುವವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕಾಗಿ ವಿನಂತಿಸಿದೆ.

ಬಾಳಗೋಡು ದರೋಡೆ: ಹೆಡ್‌ಕಾನ್‌ಸ್ಟೇಬಲ್ ಸೇರಿ ಐವರು ವಶಕ್ಕೆ

ಮಡಿಕೇರಿ,ಅ.16– ವಿರಾಜಪೇಟೆ ಬಾಳುಗೋಡು ಬಳಿ ನಿನ್ನೆ ನಡೆದಿದ್ದ ಕೇರಳದ ಹೊಟೇಲ್ ಹಾಗೂ ಚಿನ್ನದ ಅಂಗಡಿ ಉದ್ಯಮಿಯ ದರೋಡೆ ಪ್ರಕರಣದ ಸಂಬಂಧ ಐವರನ್ನು ಪೊಲೀಸರು ವಶಕ್ಕೆ ಪಡೆದಿರುವುದಾಗಿ ಮಾಹಿತಿ ಲಭ್ಯವಾಗಿದೆ. ಆರೋಪಿಗಳ ಪೈಕಿ ಓರ್ವ ಮಹಾರಾಷ್ಟ್ರ ಪೊಲೀಸ್ ಇಲಾಖೆ ಹೆಡ್ ಕಾನ್ಸ್‌ಟೇಬಲ್ ಎಂದು ತಿಳಿದು ಬಂದಿದೆ.

ಕೇರಳ ಕ್ಯಾಲಿಕಟ್ ನಿವಾಸಿ ಅಪ್ಪಾಸೋ ಎಂಬವರನ್ನು ನಿನ್ನೆ ಕಾರು ಅಡ್ಡಗಟ್ಟಿ 10 ಲಕ್ಷ ನಗದು ಮತ್ತು ಮೊಬೈಲ್ ಅನ್ನು ದರೋಡೆ ಮಾಡಲಾಗಿತ್ತು. ಈ ಘಟನೆ ಕುರಿತು ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡ ಪೊಲೀಸರು ಮಹಾರಾಷ್ಟ್ರ ಸಾಂಗ್ಲಿ ನಿವಾಸಿ ಆಟೋ ಚಾಲಕ ಸಚಿನ್ ಯಾಮಾಜಿ ಧೂಥಲ್(24), ಮಹಾರಾಷ್ಟ್ರ ಪೊಲೀಸ್ ಇಲಾಖೆಯಲ್ಲಿ ಥಾಣೆ ಸಿಟಿಯ ಕಲ್ವ ಠಾಣೆಯಲ್ಲಿ ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಬಾಬಾ ಸಾಹೇಬ್ ಚೌಗಲ್(32), ಅಬಾ ಸಾಹೇಬ್ ಶೆಂಡಗೆ, ಯುವರಾಜ್ ಸಿಂಧೆ (25), ಬಂದು ಹಕ್ಕೆ (20) ಎಂಬವರನ್ನು ವಶಕ್ಕೆ ಪಡೆದಿದ್ದಾರೆ, ಇತರ ಆರೋಪಿಗಳ ಪತ್ತೆಗಾಗಿ ಬಲೆ ಬೀಸಲಾಗಿದೆ.

ಆಧುನಿಕ ಯುಗದಲ್ಲಿ ಭಗವದ್ಗೀತೆ ಕೈಪಿಡಿ ಇದ್ದಂತೆ



ಅರಮೇರಿ ಕಳಂಚೇರಿ ಮಠದ ಪೀಠಾಧಿಪತಿ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಚಿಂತನಾ ಗೋಷ್ಠಿ ಉದ್ಘಾಟಿಸುತ್ತಿರುವುದು.

ವಿರಾಜಪೇಟೆ, ಅ.16–ಆಧುನಿಕ ಯುಗದಲ್ಲಿ ಮಾನವ ಜನುಮವನ್ನು ಸರಿಯಾದ ದಾರಿಗೆ ನಡೆಸಲು ಭಗವದ್ಗೀತೆ ಕೈಪಿಡಿಯಂತಿದೆ ಎಂದು ಗೋಣಿಕೊಪ್ಪ ಅಂಚೆ ಕಛೇರಿಯ ಅಂಚೆ ಪಾಲಕ ಎಚ್.ಜಿ.ವಿಜಯಲಕ್ಷ್ಮೀ ಹೇಳಿದರು.

ಸಮೀಪದ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಭವನದಲ್ಲಿ ನಡೆದ 'ಹೊಂಬೆಳಕು ಕಿರಣ 236ನೇ ಮಾಸಿಕ ತತ್ವ ಚಿಂತನಾಗೋಷ್ಠಿ' ಕಾರ್ಯಕ್ರಮದಲ್ಲಿ 'ಬಾಳಿಗೆ ಬೆಳಕು ಭಗವದ್ಗೀತೆ' ಎಂಬ ವಿಷಯದ ಬಗ್ಗೆ ಮಾತನಾಡಿ, ಆಧುನಿಕ ಜಗತ್ತಿನಲ್ಲಿ ಭಗವದ್ಗೀತೆಯ ಬೋಧನೆಗಳು ದಾರಿ ದೀಪವಾಗಿದೆ. ಫಲವನ್ನು ಬಯಸದೆ ಕರ್ಮವನ್ನು ಮಾಡುವುದು, ಪರರ ಅನುಕರಣೆ ಮಾಡದೆ ಸ್ವಧರ್ಮ ಪಾಲನೆ ನಿರಪೇಕ್ಷತೆ, ಸುಖ ದುಃಖಗಳನ್ನು ಸಮಾನವಾಗಿ ಕಾಣುವ ಸ್ಥಿತಪ್ರಜ್ಞತೆ ಇವೆಲ್ಲವನ್ನೂ ಭಗವದ್ಗೀತೆ ಕಲಿಸುತ್ತದೆ ಎಂದರು.

ಎಸ್.ಹರೀಶ್ ರಾವ್ ಅವರು ಉದ್ಘಾಟಿಸಿ ಅನೇಕ ವರ್ಷಗಳಿಂದಲೂ ಶ್ರೀ ಮಠದಲ್ಲಿ ನಡೆಸಿಕೊಂಡು ಬರುತ್ತಿರುವ ಹೊಂಬೆಳಕು ಕಾರ್ಯಕ್ರಮ ಜನರ ಮನಸನ್ನು ಪರಿವರ್ತನೆಗೊಳಿಸುವುದರೊಂದಿಗೆ ಇಂಥ ಉತ್ತಮ ಕಾರ್ಯಕ್ರಮಗಳು ಇನ್ನೂ ಹೆಚ್ಚು ನಡೆಯುವಂತಾಗಲಿ ಎಂದರು.

ಅರ ಮೇರಿ ಕಳಂಚೇರಿ ಮಠದ ಪೀಠಾಧಿಪತಿ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದು, ದೇಶದಲ್ಲಿರುವ ಪರಂಪರೆ ಬೇರೆ ಎಲ್ಲೂ ಇಲ್ಲ. ಮನುಷ್ಯ ಯಾವ ರೀತಿ ಬದುಕಬೇಕು ಎಂಬುದನ್ನು ಭಗವದ್ಗೀತೆ ಕಲಿಸಿಕೊಡುತ್ತದೆ. ಮನುಷ್ಯ ನಿಗೆ ಎಷ್ಟೇ ಸಂಪತ್ತು ಇದ್ದರೂ ಸೇವೆಯೇ ಮುಖ್ಯವಾಗಿರುತ್ತದೆ ಎಂದರು. ವಿದ್ಯಾರ್ಥಿ ಸೋನ ಸ್ವಾಗತಿಸಿದರು, ಕೆ.ಬಿ. ಇಂಪನ ನಿರೂಪಿಸಿದರೆ, ಎಸ್.ವರ್ಷಿಣಿ ವಂದಿಸಿದರು.

28 ದಿನಗಳಲ್ಲಿ ಮಾದಪ್ಪನ ಹುಂಡಿಯಲ್ಲಿ 2.27 ಕೋಟಿ ಸಂಗ್ರಹ



ಹನೂರು, ಅ.16– ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಶ್ರೀಮಲೆ ಮಹದೇಶ್ವರ ಬೆಟ್ಟದ ಮಹದೇಶ್ವರಸ್ವಾಮಿ ದೇವಸ್ಥಾನದ ಹುಂಡಿ ಹಣ ಎಣಿಕೆಯಲ್ಲಿ ಈ ಬಾರಿ 28 ದಿನಗಳ ಅವಧಿಯಲ್ಲಿ 2.27 ಕೋಟಿ ಹಣ ಸಂಗ್ರಹವಾಗಿದೆ.

ಮಹದೇಶ್ವರ ಬೆಟ್ಟದ ಬಸ್ ನಿಲ್ದಾಣದ ಬಳಿಯ ವಾಣಿಜ್ಯ ಸಂಕೀರ್ಣದಲ್ಲಿ ಸಾಲೂರು ಬೃಹನ್ಮಠದ ಅಧ್ಯಕ್ಷರಾದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅವರ ಸಮ್ಮುಖದಲ್ಲಿ ಹುಂಡಿಗಳನ್ನು ತೆರೆಯಲಾಯಿತು. ಬಳಿಕ ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿ ಎಣಿಕೆ ಕಾರ್ಯ ಪ್ರಾರಂಭಿಸಲಾಯಿತು.

ಸರ್ಕಾರಿ ರಜಾ ದಿನ, ವಿಜಯ ದಶಮಿ, ಆಯುಧಪೂಜೆ ಹಬ್ಬದ ವಿಶೇಷ ಪೂಜಾ ಮಹೋತ್ಸವ ಸೇರಿದಂತೆ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿಯ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆಯ ಉಚಿತ ಪ್ರಯಾಣದ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿದ್ದರಿಂದ ಹರಕೆ ರೂಪದಲ್ಲಿ 2,27,24,757ರೂ. ನಗದು, 46 ಗ್ರಾಂ ಚಿನ್ನ ಹಾಗೂ 1 ಕೆಜಿ 350 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ. ಇದಲ್ಲದೇ ಹುಂಡಿಯಲ್ಲಿ ಚಲಾವಣೆಯಲ್ಲಿ ಇಲ್ಲದ 2000 ಮುಖಬೆಲೆಯ 9 ನೋಟುಗಳು ಹಾಗೂ ವಿದೇಶಿಯ 9 ನೋಟುಗಳನ್ನು ಭಕ್ತರು ಹುಂಡಿಯಲ್ಲಿ ಹಾಕಿದ್ದಾರೆ.

ಎಣಿಕೆ ಕಾರ್ಯದಲ್ಲಿ ಶ್ರೀಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ.ರಘು, ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯರಾದ ಮರಿಸ್ವಾಮಿ, ಭಾಗ್ಯಮ್ಮ, ಮಹದೇವಪ್ಪ, ಗಂಗನ ತಿಮ್ಮಯ್ಯ, ಪ್ರಾಧಿಕಾರದ ಉಪಕಾರ್ಯದರ್ಶಿ ಚಂದ್ರಶೇಖರ, ಲೆಕ್ಕ ಅಧೀಕ್ಷಕ ಗುರುಮಲ್ಲಯ್ಯ, ಜಿಲ್ಲಾಡಳಿತ ಕಚೇರಿಯ ಕಲ್ಯಾಣಮ್ಮ ಹಾಗೂ ಪ್ರಾಧಿಕಾರದ ಸಿಬ್ಬಂದಿ, ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ, ಕೊಳ್ಳೇಗಾಲದ ಬ್ಯಾಂಕ್ ಆಫ್ ಬರೋಡ ಮುಖ್ಯ ವ್ಯವಸ್ಥಾಪಕರು, ಸಿಬ್ಬಂದಿ ಹಾಜರಿದ್ದರು.

ಆರ್‌ಎಸ್‌ಎಸ್ ವಿರುದ್ಧ ಯುವ ಕಾಂಗ್ರೆಸ್ ಪ್ರತಿಭಟನೆ

ಆರ್‌ಎಸ್‌ಎಸ್ ಪ್ರತಿಕೃತಿ ಸುಟ್ಟು ಅಕ್ರೋಶ



ಚಾಮರಾಜನಗರದಲ್ಲಿ ಯುವ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಅ.16– ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ದೂರವಾಣಿ ಮೂಲಕ ಅಸಭ್ಯವಾಗಿ ನಿಂದಿಸಿರುವುದನ್ನು ಖಂಡಿಸಿ, ಆರ್‌ಎಸ್‌ಎಸ್ ಸಂಘಟನೆಯನ್ನು ನಿಷೇಧಿಸಬೇಕು ಎಂದು ಆಗ್ರಹಿಸಿ ಯುವ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ಉದ್ಯಾನವನ ಮುಂಭಾಗದಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ಸಿ.ಯೋಗೇಂದ್ರ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಅಲ್ಲಿ ಮಾನವ ಸರಪಳಿ ರಚಿಸಿ ಆರ್‌ಎಸ್‌ಎಸ್ ಪ್ರತಿಕೃತಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ದೇಶ ವಿರೋಧಿ ಸಂಘಟನೆ ಆರ್‌ಎಸ್‌ಎಸ್ ಬ್ಯಾನ್ ಮಾಡಬೇಕು ಎಂದು ಒತ್ತಾಯಿಸಲಾಯಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಯುವ ಕಾಂಗ್ರೆಸ್ ಅಧ್ಯಕ್ಷ ಸಿ.ಯೋಗೇಂದ್ರ ಮಾತನಾಡಿ, ಕೆಪಿಸಿಸಿ ಆದೇಶದ ಮೇರೆಗೆ ಕಾಂಗ್ರೆಸ್ ಯುವ ಘಟಕದಿಂದ ಪ್ರತಿಭಟನೆ ನಡೆಸಲಾಯಿತು ಎಂದರು. ದೇಶ ವಿರೋಧಿ ಸಂಘಟನೆ ಆರ್‌ಎಸ್‌ಎಸ್ ಬ್ಯಾನ್ ಮಾಡಬೇಕು, ಮನುವಾದಿ ಸಂಘಟನೆ ನಿಷೇಧ ಮಾಡಿ, ಸಚಿವರ ವಿರುದ್ಧ ವಿನಾಕಾರಣ ಅಸಭ್ಯವಾಗಿ, ಅವಾಚ್ಯವಾಗಿ ನಿಂದನೆ ಮಾಡಿದ ವ್ಯಕ್ತಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ದೇಶದಲ್ಲಿ ಆರ್‌ಎಸ್‌ಎಸ್ ಎಂಬುದು ನಿರಂತರವಾಗಿ ದೇಶ ವಿರೋಧಿ ಕೃತ್ಯದಲ್ಲಿ ತೊಡಗಿದೆ. ಇದು ಕೋಮುವಾದದ ಮೂಲಕ ಜನರಲ್ಲಿ ಅಸಮಾನತೆ ಸೃಷ್ಟಿ ಮಾಡುತ್ತಿದೆ. ಇಂತಹ ಕಾರ್ಯ ಮಾಡುತ್ತಿರುವ ಆರ್‌ಎಸ್‌ಎಸ್ ಚಟುವಟಿಕೆ ಸರಕಾರಿ ಸ್ಥಳದಲ್ಲಿ ಬೇಡ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಆದರೆ, ಮನುವಾದಿ ವ್ಯಕ್ತಿಯೊಬ್ಬ ಸಚಿವರಿಗೆ ಇಲ್ಲಸಲ್ಲದ ಮಾತನಾಡಿದ್ದಾನೆ. ಕೂಡಲೇ ಆತನ ವಿರುದ್ಧ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಯುವ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷರಾದ ಸೈಯದ್ ಮುಸಾಯಿಬ್, ಚಂದನಪುಟ್ಟಬುದ್ದಿ, ಇಸ್ಮಾಯಿಲ್, ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಮೋಹನ್, ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಅಕ್ಷಯ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಶ್ವ, ಸಚಿನ್, ಶಶಾಂಕ್, ನವೀನ್, ನಲ್ಲೂರು ಮನೋಜ್, ಆನಂತ್, ಅಪ್ಪು ಇತರರು ಭಾಗವಹಿಸಿದ್ದರು.

ಕಾಗಲವಾಡಿಯಲ್ಲಿ ಗಿಡನೆಟ್ಟು ಎಪಿಜೆ ಅಬ್ದುಲ್ ಕಲಾಂ ಜಯಂತಿ ಆಚರಣೆ



ಚಾಮರಾಜನಗರ, ಅ.16–ತಾಲೂಕಿನ ಕಾಗಲವಾಡಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಪರಿಸರಪ್ರೇಮಿ ಸುಂದರ್ ಅರಸು ಗಿಡಗಳನ್ನು ನೆಡುವ ಮೂಲಕ ಭಾರತದ ಮಾಜಿ ರಾಷ್ಟ್ರಪತಿ ದಿವಂಗತ ಡಾ.ಎಪಿಜೆ ಅಬ್ದುಲ್‌ಕಲಾಂ ಅವರ ಜಯಂತಿಯನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಉನ್ನತಿ ಫೌಂಡೇಶನ್ ಅಧ್ಯಕ್ಷ ಎಂ.ಸಿದ್ದರಾಜು ಮಾತನಾಡಿ, ಪರಿಸರಪ್ರೇಮಿ ಸುಂದರ್ ಅರಸು ಅವರು ರಾಷ್ಟ್ರ ಹಬ್ಬ, ನಾಡಹಬ್ಬ, ಮಹಾನ್ ವ್ಯಕ್ತಿಗಳ ಜಯಂತೋತ್ಸವವನ್ನು ಗಿಡನೆಡುವ ಮೂಲಕ ಆಚರಿಸುತ್ತಾರೆ. ಇಂತಹ ವ್ಯಕ್ತಿಗಳ ಜೊತೆ ಸೇರಿ. ನಾವೂ ಕೂಡ ಪರಿಸರ ಉಳಿಸುವಂತಹ ಕೆಲಸವನ್ನು ಮಾಡಬೇಕು ಎಂದರು.

ಡಾ. ಜನಾರ್ಧನ್ ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕ ನಾಗರಾಜುನಾಗವಳ್ಳಿ, ಆಸ್ಪತ್ರೆಯ ಸಿಬ್ಬಂದಿಗಳು, ರೇಚಂಬಳ್ಳಿ ಮಂಜು, ಕಾಗಲವಾಡಿ ಮೋಳೆ ಪರಿಸರ ತಂಡದ ಯುವಕರು ಭಾಗವಹಿಸಿದ್ದರು.

ಜಿಲ್ಲಾ ಮಟ್ಟದ ಯುವಜನೋತ್ಸವ

ಚಾಮರಾಜನಗರ: ಯುವಜನರು ಜಿಲ್ಲೆಯ ಜಾನಪದ ಕಲೆಗಳು ಸೇರಿದಂತೆ ವಿವಿಧ ಕಲಾ ಪ್ರಕಾರಗಳನ್ನು ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಅನಾವರಣಗೊಳಿಸಿ ಜಿಲ್ಲೆಗೆ ಕೀರ್ತಿ ತರುವಂತೆ ನಗರಸಭೆ ಅಧ್ಯಕ್ಷ ಎಸ್. ಸುರೇಶ್ ಸಲಹೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೇರಾ ಯುವ ಭಾರತ್ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ 'ಜಿಲ್ಲಾ ಮಟ್ಟದ ಯುವಜನೋತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚಾಮರಾಜನಗರ ಜಿಲ್ಲೆ ಜಾನಪದ ಕಲೆಗಳ ತವರೂರು. ಜಿಲ್ಲೆಯ ಸಾಕಷ್ಟು ಕಲಾವಿದರು ವಿವಿಧ ಸಾಂಸ್ಕೃತಿಕ ಕಲಾಪ್ರಕಾರಗಳಲ್ಲಿ ತೊಡಗಿಸಿಕೊಂಡು ಜಿಲ್ಲೆಯನ್ನು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವ ಕೆಲಸ ಮಾಡಿದ್ದಾರೆ. ಕಲಾವಿದರು ತಮ್ಮಲ್ಲಿರುವ ಕಲಾಪ್ರತಿಭೆ ಹೊರತರಲು ಯುವಜನೋತ್ಸವ ಕಾರ್ಯಕ್ರಮವನ್ನು ವೇದಿಕೆಯಾಗಿ ಬಳಸಿಕೊಳ್ಳುವ ಮೂಲಕ ಜಿಲ್ಲೆಗೆ ಉತ್ತಮ ಹೆಸರು ತರಬೇಕು ಎಂದು ಸುರೇಶ್ ಅವರು ಆಶಿಸಿದರು.

ನಗರಸಭೆ ಸದಸ್ಯ ಮಹೇಶ್, ಜಿಪಂ ಉಪ ಕಾರ್ಯದರ್ಶಿ ಡಿ.ಸಿ. ಶೃತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಸುರೇಶ್ ಮಾತನಾಡಿದರು. ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರಾದ ದೇವಾನಂದ ವರಪ್ರಸಾದ್, ಚಾ.ನಗರ ವಿ.ವಿ ಜಾನಪದ ವಿಭಾಗದ ಮುಖ್ಯಸ್ಥ ಡಾ.ಜಗದೀಶ್, ಎನ್‌ಎಸ್‌ಎಸ್ ಸಂಯೋಜಕ ಡಾ. ಮಹೇಶ್, ಕಸಾಪ ತಾಲೂಕು ಅಧ್ಯಕ್ಷ ಸುರೇಶ್ ಋಗ್ವೇದಿ, ಜನಪದ ಗಾಯಕ ನರಸಿಂಹಮೂರ್ತಿ, ದಸರಾ ಸ್ತಬ್ಧಚಿತ್ರ ಚಿತ್ರ ಕಲಾವಿದರಾದ ಮಧುಸೂದನ್, ಸಾಹಿತಿ ಶೀಲಾ ಸತ್ಯೇಂದ್ರಸ್ವಾಮಿ ಉಪಸ್ಥಿತರಿದ್ದರು.



ಜಿಲ್ಲಾ ಮಟ್ಟದ ಯುವಜನೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮ

ಬಾಲಕಿ ಮೇಲೆ ಅತ್ಯಾಚಾರವೆಸಗಿದ ಆರೋಪಿಗೆ ಕಠಿಣ ಶಿಕ್ಷೆಗೆ ಆಗ್ರಹಿಸಿ

ಕರವೇ ಸ್ವಾಭಿಮಾನಿ ಸಂಘಟನೆ ಪ್ರತಿಭಟನೆ



ತಹಸೀಲ್ದಾರ್ ಕಚೇರಿಯಲ್ಲಿ ಮನವಿ ಸಲ್ಲಿಸುತ್ತಿರುವ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ಪದಾಧಿಕಾರಿಗಳು

ಕೊಳ್ಳೇಗಾಲ, ಅ.16– ಮೈಸೂರಿನಲ್ಲಿ 10 ವರ್ಷದ ಬಾಲಕಿಯ ಮೇಲೆ ಅತ್ಯಾಚಾರವೆಸಗಿ ಹತ್ಯೆಗೈದ ಪ್ರಕರಣ ಖಂಡಿಸಿ ನಗರದಲ್ಲಿ ಗುರುವಾರ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿ ಮೆರವಣಿಗೆ ಮೂಲಕ ತಹಸೀಲ್ದಾರ್ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು

ಗುರುವಾರ ಪ್ರತಿಭಟನೆ ನಡೆಸಿದ ಸಂಘಟನೆ ಪದಾಧಿಕಾರಿಗಳು, ಆರೋಪಿಗೆ ಕಠಿಣ ಶಿಕ್ಷೆ ನೀಡಬೇಕು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇಂತಹ ಘಟನೆ ಮರುಕಳಿಸಿದಂತೆ ಮುಂಜಾಗ್ರತಾ ಕ್ರಮವಹಿಸಬೇಕು ಎಂದು ಆಗ್ರಹಿಸಿದರು. ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ಘೋಷಣೆಯೊಂದಿಗೆ ಮೆರವಣಿಗೆ ನಡೆಸಿ ತಾಲೂಕು ಕಚೇರಿಗೆ ತೆರಳಿ, ಗ್ರೇಡ್–2 ತಹಸೀಲ್ದಾರ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಕರವೇ ಸ್ವಾಭಿಮಾನಿ ಬಣದ ಜಿಲ್ಲಾಧ್ಯಕ್ಷ ಶಬ್ಬೀರ್ ಪಾಷ ಮಾತನಾಡಿ, ದೇಶದಲ್ಲಿ ಬಾಲಕಿಯರ ಮೇಲೆ ನಡೆಯುತ್ತಿರುವ ದೌರ್ಜನ್ಯವು ಅತ್ಯಂತ ವಿಷಾಧನೀಯವಾಗಿದೆ. ಮೈಸೂರಿನ ಈ ಹೀನ ಕೃತ್ಯದಲ್ಲಿ ಭಾಗಿಯಾಗಿರುವ ಆರೋಪಿಗೆ ತಕ್ಷಣವೇ ಕಠಿಣ ಶಿಕ್ಷೆ ನೀಡಬೇಕಾಗಿದೆ. ಇಂತಹ ಘಟನೆಗಳು ಮರುಕಳಿಸದಂತೆ ಕಾನೂನು ವ್ಯವಸ್ಥೆ ಬಲಪಡಿಸಬೇಕು. ಇಂತಹ ಕೃತ್ಯಗಳಲ್ಲಿ ಪಾಲ್ಗೊಂಡ ಆರೋಪಿಗಳಿಗೆ ತಕ್ಕ ಶಾಸ್ತಿಯಾಗುವ ಜೊತೆಗೆ ಮುಂದೆ ಇಂತಹ ಘಟನೆ ನಡೆಯದಂತೆ ಕಡಿವಾಣ ಹಾಕುವ ಅವಶ್ಯವಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಪ್ರದೀಪ್ ಕುಮಾರ್ ತಾಲ್ಲೂಕು ಅಧ್ಯಕ್ಷ ಅಜ್ಗರ್ ಪಾಷ, ಉಪಾಧ್ಯಕ್ಷ ವಜಾಹತ್, ಜಿಲ್ಲಾ ಕಾರ್ಯದರ್ಶಿ ಮುಬಾರಕ್ ಅಹಮ್ಮದ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಭಾಗ್ಯ, ಕಾರ್ಯದರ್ಶಿ ರಾಧ, ಪ್ರಧಾನ ಕಾರ್ಯದರ್ಶಿ ನಾಗವೇಣಿ, ಮಹಿಳಾ ಮುಖ್ಯಸ್ಥೆ ಶೋಭ, ಪ್ರಸಾದ್, ಸುದೀಪ್, ಇಮ್ರಾನ್ ಪಾಷ, ರೋಷನ್ ಇನ್ನಿತರಿದ್ದರು.


ಕಾಂಗ್ರೆಸ್ ಸರ್ಕಾರದ ಕೊಡುಗೆಗಳನ್ನು ಮನೆ–ಮನೆಗಳಿಗೆ ತಿಳಿಸಿ

ಗುಂಡ್ಲುಪೇಟೆ, ಅ.16– ಕಾಂಗ್ರೆಸ್ ಸರ್ಕಾರ ಹಿಂದುಳಿದ ವರ್ಗಗಳು ಹಾಗೂ ಸಮಾಜದ ಜನತೆಗೆ ಹೆಚ್ಚಿನ ಅನುದಾನ ನೀಡುವ ಮೂಲಕ ನೆರವು ನೀಡಲಾಗುತ್ತಿದ್ದು ಇದರ ಬಗ್ಗೆ ಕಾರ್ಯಕರ್ತರು ಮನೆಮನೆಗಳಿಗೆ ಹೋಗಿ ಅರಿವು ಮೂಡಿಸಬೇಕು ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಗುರುವಾರ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಹಿಂದುಳಿದ ವರ್ಗಗಳ ಸಭೆಯಲ್ಲಿ ಅವರು ಮಾತನಾಡಿದರು. ಮುಂಬರುವ ದಿನಗಳಲ್ಲಿ ಜಿಪಂ ಮತ್ತು ತಾಪಂ ಚುನಾವಣೆಗೆ ಸಜ್ಜಾಗಬೇಕಾಗಿದೆ. ಮುಂದಿನ ಎರಡೂವರೆ ವರ್ಷದಲ್ಲಿ ವಿಧಾನಸಭೆಗೂ ಚುನಾವಣೆ ನಡೆಯುತ್ತದೆ. ರಾಜ್ಯದ ಕಾಂಗ್ರೆಸ್ ಸರ್ಕಾರ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಎಲ್ಲಾ ರೀತಿಯ ನೆರವು ನೀಡುತ್ತಿದ್ದರೂ ಅತಿಯಾದ ಆತ್ಮವಿಶ್ವಾಸ ಇಟ್ಟುಕೊಳ್ಳದೆ ಮನೆ ಮನೆಗಳಿಗೆ ಹೋಗಿ ಅರಿವು ಮೂಡಿಸಬೇಕು ಎಂದರು.

ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ವಿನೋದ್‌ರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ರಾಜಶೇಖರ್, ಮುನಿರಾಜು, ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೆ.ಎಸ್.ಮಹೇಶ್, ಪುರಸಭೆ ಅಧ್ಯಕ್ಷ ಪಿ.ಶಶಿಧರ್(ದೀಪು), ಉಪಾಧ್ಯಕ್ಷ ಕಪ್ಪಣ್ಣ ಹಾಗೂ ಇತರರು ಇದ್ದರು.

■ ಸತ್ಯಮೂರ್ತಿ ತೋಳಹುಣಸೆ



ಆರು ಭಾಷೆಗಳಲ್ಲಿ ತೆರೆಮೇಲೆ
ತುಳುನಾಡಿನ ಕೊರಗಜ್ಜ ದೈವದ ಕಥೆ

ತುಳುನಾಡಿನ ಜನರ ಆರಾಧ್ಯ ದೈವ ಕೊರಗಜ್ಜನ ಮಹಿಮೆ ಹಾಗೂ ಕಥೆಯನ್ನು ಹೇಳುವ ಚಿತ್ರ ಕೊರಗಜ್ಜ. ಸುಧೀರ್ ಅತ್ತಾವರ ನಿರ್ದೇಶನ ಸಾರಥ್ಯವಿರುವ ಈ ಚಿತ್ರದ ಟೀಸರ್ ಹಾಗೂ ತ್ರಿಡಿ ಮೋಷನ್ ಪೋಸ್ಟರ್ ಬಿಡುಗಡೆ ಸಮಾರಂಭ ನಡೆಯಿತು. ದಕ್ಷಿಣ ಕನ್ನಡದ ವಾದ್ಯ ಹಿಮ್ಮೇಳ ಹಾಗೂ ಉಡುಪಿಯ ಮಹಿಳಾ ತಂಡದವರ ಹುಲಿನೃತ್ಯದ ಮೆರವಣಿಗೆಯಲ್ಲಿ ಸಾಗಿಬಂದ 'ಕೊರಗಜ್ಜ'ನ ಎರಡು ಕಟೌಟ್‌ಗಳು ಡೊಳ್ಳು, ಕೊಂಬು-ಕಹಳೆ, ಕೊಳಲು, ತಾಸೆ, ತಾಳಗಳ ವಾದ್ಯಮೇಳದ ಹಿನ್ನೆಲೆಯಲ್ಲಿ ಹುಲಿವೇಷಧಾರಿಗಳ ನೃತ್ಯದ ನಡುವೆ ಚಿತ್ರದ ಥ್ರೀಡಿ ಮೋಷನ್ ಪೋಸ್ಟರ್ ಬಿಡುಗಡೆಯಾಗಿದ್ದು ವಿಶೇಷವಾಗಿತ್ತು.

ನಿರ್ದೇಶಕ ಸುಧೀರ್ ಅತ್ತಾವರ ಮಾತನಾಡಿ, 3 ವರ್ಷಗಳ ಹಿಂದೆ ಚಿತ್ರವನ್ನು ಪ್ರಾರಂಭಿಸಿದ್ದೆವು. ಸಾಕಷ್ಟು ಅಡೆತಡೆಗಳನ್ನು ದಾಟಿ ಬಿಡುಗಡೆಯ ಹಂತ ತಲುಪಿದ್ದೇವೆ. ಕೊರಗಜ್ಜನ ಆಶೀರ್ವಾದದಿಂದ ಸಿನಿಮಾ ಅಂದುಕೊಂಡ ಹಾಗೆ ಬಂದಿದೆ. ಚಿತ್ರಕ್ಕೆ ಯಾವುದೇ ಕೊರತೆಯಾಗದ ಹಾಗೆ ನಿರ್ಮಾಪಕ ತ್ರಿವಿಕ್ರಮ ಸಪಲ್ಯ ಮತ್ತು ಕಾರ್ಯಕಾರಿ ನಿರ್ಮಾಪಕ ವಿದ್ಯಾಧರ್ ಶೆಟ್ಟಿ ಅವರು ನೋಡಿಕೊಂಡಿದ್ದಾರೆ. ಕನ್ನಡ, ತೆಲುಗು ಸೇರಿದಂತೆ ಆರು ಭಾಷೆಗಳಲ್ಲಿ ನಿರ್ಮಾಣವಾಗಿರುವ ನಮ್ಮ ಚಿತ್ರದಲ್ಲಿ ಗೋಪಿಸುಂದರ್ ಅವರ ಸಂಗೀತ ಸಂಯೋಜನೆಯ 31 ಹಾಡುಗಳಿವೆ.(ಆರು ಭಾಷೆಗಳಿಂದ). ಹೆಸರಾಂತ ಗಾಯಕ, ಗಾಯಕಿಯರು ಹಾಡಿದ್ದಾರೆ. ಸುಮಾರು ಇಪ್ಪತ್ತನಾಲ್ಕು ವರ್ಷದ ತನಿಯ ದೈವತ್ವಕ್ಕೇರಿ ಕೊರಗಜ್ಜನಾದ ಕಥೆಯನ್ನು ಈ ಚಿತ್ರದಲ್ಲಿ ತೋರಿಸಲಾಗುತ್ತಿದೆ ಎಂದು ಹೇಳಿದರು.

ನನ್ನ ವೃತ್ತಿಜೀವನದಲ್ಲೇ ವಿಭಿನ್ನವಾದ ಚಿತ್ರವಿದು ಎಂದ ನಟಿ ಶೃತಿ, ನಾನು ಈ ಚಿತ್ರದಲ್ಲಿ ಕೊರಗಜ್ಜನ ಸಾಕುತಾಯಿಯ ಪಾತ್ರ ನಿರ್ವಹಿಸಿದ್ದೇನೆ. ಈ ಚಿತ್ರಕ್ಕಾಗಿ ಸತತ ಇಪ್ಪತ್ತೆಂಟು ಗಂಟೆಗಳ ಚಿತ್ರೀಕರಣ ಮಾಡಿದ್ದೇನೆ. ಇದು ಮರೆಯಲಾರದ ಅನುಭವ. ಕೊರಗಜ್ಜನ ಆಶೀರ್ವಾದದಿಂದ ಚಿತ್ರ ಯಶಸ್ವಿಯಾಗಲೆಂದು ಹಾರೈಸಿದರು.

ಹಿರಿಯ ನಟಿ ಭವ್ಯ ಮಾತನಾಡಿ, ತಾನು ಮಾಡಿದ ರಾಣಿ ಪಂಜಂದಾಯಿ ಪಾತ್ರದ ಬಗ್ಗೆ, ಬಾಲಿವುಡ್ ನಟ ಕಬೀರ್ ಬೇಡಿ ಜತೆ ನಟಿಸಿದ ಅನುಭವಗಳನ್ನು ಹಂಚಿಕೊಂಡರು.





ಕನಕರಾಜನಾದ ಅನೂಪ್ ರೇವಣ್ಣ





ಇದು ಸಿಎಂ ಅಭಿಮಾನಿಯ ಕಥೆ

ಮಾಜಿ ಸಚಿವ ಹೆಚ್.ಎಂ.ರೇವಣ್ಣ ಅವರ ಪುತ್ರ ಅನೂಪ್ ರೇವಣ್ಣ ಈಗ ಕನಕರಾಜನಾಗಿದ್ದಾರೆ. ಯುವಕನೊಬ್ಬ ರಾಜಕೀಯಕ್ಕೆ ಬಂದರೆ, ಆತ ಸಿಎಂ ಆದರೆ ಹೇಗಿರುತ್ತೆ ಎಂಬ ಕಾನ್ಸೆಪ್ಟ್ ಹೊತ್ತು ಬರುತ್ತಿರುವ ಚಿತ್ರ 'ಕನಕರಾಜ' ಈ ಚಿತ್ರದಲ್ಲಿ ಅನೂಪ್ ನಾಯಕನ ಪಾತ್ರ ನಿರ್ವಹಿಸುತ್ತಿದ್ದಾರೆ. ಸನತ್‌ಕುಮಾರ್ ಅವರ ನಿರ್ಮಾಣದ ಈ ಚಿತ್ರಕ್ಕೆ ಡಾ|.ವಿ.ನಾಗೇಂದ್ರಪ್ರಸಾದ್ ಕಥೆ ಬರೆದು ಸಂಗೀತ ಸಂಯೋಜಿಸುತ್ತಿದ್ದಾರೆ. ವಿ.ಎಂ.ರಾಜು ಮತ್ತು ನೀಲ್ ಕೆಂಗಾಪುರ ಅವರ ನಿರ್ದೇಶನದ ಈ ಚಿತ್ರದ ಚಿತ್ರದ ಮುಹೂರ್ತ ಸಮಾರಂಭ ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ನೆರವೇರಿತು. ಪ್ರಥಮ ಸನ್ನಿವೇಶಕ್ಕೆ ಹೆಚ್.ಎಂ.ರೇವಣ್ಣ ಆರಂಭ ಫಲಕ ತೋರಿದರೆ, ಸಚಿವ ರಾಮಲಿಂಗಾರೆಡ್ಡಿ ಕ್ಯಾಮೆರಾ ಚಾಲನೆ ಮಾಡಿದರು.

ಸಾಹಿತಿ, ಕಥೆಗಾರ ಡಾ.ವಿ.ನಾಗೇಂದ್ರ ಪ್ರಸಾದ್ ಮಾತನಾಡುತ್ತಾ, ನಾವು ಸಾಮಾನ್ಯವಾಗಿ ವಿದ್ಯಾವಂತರು, ಯುವಕರು ರಾಜಕೀಯಕ್ಕೆ ಬರಬೇಕು. ರಾಜಕಾರಣಿಯಾಗಬೇಕು ಅಂತ ಹೇಳುತ್ತಿರುತ್ತೇವೆ. ಯುವಕನೊಬ್ಬ ರಾಜಕೀಯಕ್ಕೆ ಬಂದರೆ, ಸಿಎಂ ಆದರೆ ಹೇಗಿರುತ್ತೆ ಅನ್ನೋದೇ ಈ ಸಿನಿಮಾ. ಇದನ್ನೇ ಇಟ್ಟುಕೊಂಡು ಚಿತ್ರಕಥೆ ಬರೆದಿದ್ದೇನೆ, ನಾಯಕ ವಕೀಲನಾದರೂ ರಾಜಕೀಯದಲ್ಲಿ ಆಸಕ್ತಿಯಿಟ್ಟುಕೊಂಡಿರುತ್ತಾನೆ. ಜೊತೆಗೆ ಮುಖ್ಯಮಂತ್ರಿಗಳ ಅಭಿಮಾನಿಯೂ ಹೌದು. ಹಾಗಾಗಿ ನಮ್ಮ ಚಿತ್ರಕ್ಕೆ ಫ್ಯಾನ್ ಆಫ್ ಸಿಎಂ ಎಂಬ ಅಡಿ ಬರಹವಿದೆ ಎಂದರು.

ನಿರ್ಮಾಪಕ ಸನತ್‌ಕುಮಾರ್ ಮಾತನಾಡುತ್ತಾ, ಅನೂಪ್ ಈಗಾಗಲೇ 4 ಸಿನಿಮಾದಲ್ಲಿ ಅಭಿಯಿಸಿದ್ದಾರೆ. ನಾನೇಕೆ ಸಿಎಂ ಆಗಬಾರದು ಅನ್ನೋದೇ ಈ ಚಿತ್ರದ ಕಾನ್ಸೆಪ್ಟ್. ಪ್ರಯತ್ನ ಮಾಡಿದರೆ ಎಲ್ಲವೂ ಆಗಬಹುದು ಎಂದು ಚಿತ್ರದಲ್ಲಿ ಹೇಳಲಿದ್ದೇವೆ. ಬೆಂಗಳೂರು, ಮಂಗಳೂರು, ಮಡಿಕೇರಿ ಅಲ್ಲದೆ ಹೊರರಾಜ್ಯ ಹಾಗೂ ಅಮೆರಿಕಾ, ಮಲೇಶಿಯಾ, ಸಿಂಗಪೂರ್‌ನಲ್ಲಿ 2 ಹಂತಗಳಲ್ಲಿ ಶೂಟಿಂಗ್ ನಡೆಸುವ ಯೋಜನೆಯಿದೆ ಎಂದು ಹೇಳಿದರು. ಹೆಚ್.ಎಂ.ರೇವಣ್ಣ ಮಾತನಾಡುತ್ತಾ, ಸನತ್ ನನ್ನ ಸ್ನೇಹಿತರು, ಈ ಕಥೆ ಕೇಳಿದಾಗ ಇಷ್ಟವಾಯಿತು. ನಾನೇ ಅನೂಪ್‌ಗೆ ಆಕ್ಟ್ ಮಾಡಲು ಹೇಳಿದೆ. ನಾನೂ ಸಹ ಒಂದಷ್ಟು ಸಿನಿಮಾಗಳಲ್ಲಿ ನಟಿಸಿದ್ದೇನೆ ಎಂದು ನೆನಪಿಸಿಕೊಂಡರು.

ನಾಯಕ ಅನೂಪ್ ರೇವಣ್ಣ ಮಾತನಾಡುತ್ತಾ, ಚಿತ್ರದಲ್ಲಿ ನಾನೊಬ್ಬ ಲಾಯರ್ ಪಾತ್ರ ಮಾಡುತ್ತಿದ್ದೇನೆ. ಮುಖ್ಯಮಂತ್ರಿಗಳ ಅಭಿಮಾನಿಯೂ ಹೌದು, ಈಗಿನ ಯುವಕರು ಹೇಗೆ ಸಮಾಜ ಮುನ್ನಡೆಸಿಕೊಂಡು ಹೋಗಬೇಕೆನ್ನುವುದೇ ಚಿತ್ರದ ಕಥಾಹಂದರ ಎಂದು ಹೇಳಿದರು. ನಿವಿಷ, ಅವಿನಾಶ್, ಶೋಭರಾಜ್, ರವಿಶಂಕರ್, ಸುಧಾ ಬೆಳವಾಡಿ ಚಿತ್ರದ ಪ್ರಮುಖ ಪಾತ್ರದಲ್ಲಿದ್ದಾರೆ.

'ಬೀದಿ ಬದುಕು' ಚಿಂದಿ ಆಯುವ ಮಹಿಳೆ ಕಥೆ...

ಹೊಟ್ಟೆ ಪಾಡಿಗಾಗಿ ಬೀದಿಬದಿಯ ಕಸದ ರಾಶಿಯಲ್ಲಿ ಚಿಂದಿ ಆಯುತ್ತ ಜೀವನ ನಡೆಸುವ ಮಹಿಳೆಯೊಬ್ಬಳ ಬದುಕು ಬವಣೆಯನ್ನು ಹೇಳುವ ಚಿತ್ರ 'ಬೀದಿ ಬದುಕು'. ಕೆಜಿಎಫ್ ಚಿತ್ರದಲ್ಲಿ ಹಪ್ಪಳದ ಮಲ್ಲಮ್ಮನಾಗಿ ನಟಿಸಿದ್ದ ರೇಖಾ ಸಾಗರ್ ನಾಯಕಿಯಾಗಿ ನಟಿಸಿರುವ ಈ ಚಿತ್ರಕ್ಕೆ ಪುರುಷೋತ್ತಮ್ ಆಕ್ಷನ್ ಕಟ್ ಹೇಳಿದ್ದಾರೆ. ಆ ಮಹಿಳೆಯ ಜೀವನದ ಹೋರಾಟ, ಪುಟ್ಟ ಮಗನಿಗಾಗಿ ಆಕೆ ಪಡುವ ಕಷ್ಟ ಕಾರ್ಪಣ್ಯಗಳನ್ನು ಈ ಚಿತ್ರ ಹೇಳುತ್ತದೆ.

ರೇಖಾ ಸಾಗರ್(ರೇಖಾ ರಾಣಿ) ಅವರು ನಟನೆಯ ಜತೆಗೆ ಚಿತ್ರ ನಿರ್ಮಾಣದ ಜವಾಬ್ದಾರಿಯನ್ನೂ ಸಹ ಹೊತ್ತು ನಿಭಾಯಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆ ಸಮಾರಂಭ' ನಡೆಯಿತು. ಈ ಸಂದರ್ಭದಲ್ಲಿ ಪುರುಷೋತ್ತಮ್ ಮಾತನಾಡಿ, ನಿಜವಾದ ಸ್ಲಂ, ಗುಡಿಸಲುಗಳು, ಸ್ಮಶಾನ ಹಾಗೂ ಆಸ್ಪತ್ರೆ ಹೀಗೆ ರಿಯಲ್ ಲೊಕೇಶನ್‌ಗಳಲ್ಲೇ 25ಕ್ಕೂ ಹೆಚ್ಚು ದಿನಗಳವರೆಗೆ ಚಿತ್ರೀಕರಿಸಿದ್ದೇವೆ. ಹೆತ್ತ ತಾಯಿಯೊಬ್ಬಳು ತನ್ನ ಮಗನ ಆರೋಗ್ಯಕ್ಕಾಗಿ ಏನೆಲ್ಲಾ ಹೋರಾಟ ನಡೆಸುತ್ತಾಳೆ, ಅವಮಾನ ಎದುರಿಸುತ್ತಾಳೆ, ಯಾತಕ್ಕಾಗಿ ಎಂದು ಚಿತ್ರದಲ್ಲಿ ಹೇಳಿದ್ದೇವೆ ಎಂದರು.

ನಾಯಕಿ, ನಿರ್ಮಾಪಕಿ ರೇಖಾ ಸಾಗರ್ ಮಾತನಾಡುತ್ತಾ, ಕುಡುಕ ಗಂಡನ ಉಪಟಳದ ನಡುವೆ ಚಿಂದಿ ಆಯ್ದು ಕಷ್ಟದ ಜೀವನ ನಡೆಸುವ ಮಹಿಳೆಯೊಬ್ಬಳು ತನ್ನ ಮಗನಿಗಾಗಿ ಏನೆಲ್ಲಾ ಕಷ್ಟಪಡುತ್ತಾಳೆ ಎಂಬುದೇ ಚಿತ್ರದ ಕಥೆ. ನಾನೊಬ್ಬ ಮಾಡೆಲ್ ಹಾಗೂ ನೃತ್ಯಗಾರ್ತಿಯೂ ಹೌದು. ಇಂತಹ ಪಾತ್ರವನ್ನು ಸ್ವತಃ ನಾನೇ ಮಾಡಬೇಕೆಂದು ಚಾಲೆಂಜ್ ಆಗಿ ತೆಗೆದುಕೊಂಡು ಸ್ಲಂಗಳಿಗೆ ಹೋಗಿ ಅಲ್ಲಿನ ಜನ ಹೇಗಿರುತ್ತಾರೆಂದು ತಿಳಿದುಕೊಂಡೆ. ಇರುವವರು ಇಲ್ಲದವರಿಗೆ ಸಹಾಯ ಮಾಡಬೇಕು ಅನ್ನೋದೇ ನಮ್ಮ ಚಿತ್ರದ ಉದ್ದೇಶ. ಚಿತ್ರವನ್ನು ಸದ್ಯದಲ್ಲೇ ರಿಲೀಸ್ ಮಾಡುತ್ತಿದ್ದೇವೆ ಎಂದು ವಿವರಿಸಿದರು. ಬೀದಿ ಬದುಕು ಚಿತ್ರಕ್ಕೆ ರಾಜ್ ಭಾಸ್ಕರ್ ಅವರ ಸಂಗೀತ, ಮುತ್ತುರಾಜ್ ಅವರ ಛಾಯಾಗ್ರಹಣವಿದೆ. ಕುಡುಕ ಗಂಡನಾಗಿ ಮಹದೇವ ಹಡಪದ, ಮಾಸ್ಟರ್ ಸಾಕೇತ್, ಗಣೇಶ್‌ರಾವ್ ನಟಿಸಿದ್ದಾರೆ.



ಫ್ರಾಡ್ ಋಷಿ ಹಾಡು ಬಿಡುಗಡೆ



ಒಳಿತು ಮಾಡು ಮನುಸ ಖ್ಯಾತಿಯ ನಮ್ ಋಷಿ ಅವರ ನಿರ್ಮಾಣ ಹಾಗೂ ನಿರ್ದೇಶನದ ಚಿತ್ರ ಫ್ರಾಡ್ ಋಷಿ. ಶೂಟಿಂಗ್ ಪ್ರಾರಂಭಿಸುವುದಕ್ಕೂ ಮುನ್ನ ಚಿತ್ರದ ಹಾಡುಗಳನ್ನು ಜನರಿಗೆ ತಲುಪಿಸಬೇಕೆನ್ನುವ ಉದ್ದೇಶದಿಂದ ನಿರ್ದೇಶಕರು ಚಿತ್ರದ ಹಾಡುಗಳನ್ನು ಬಿಡುಗಡೆ ಮಾಡುತ್ತಿದ್ದಾರೆ. ಈಗಾಗಲೇ ಚಿತ್ರದ 2 ಹಾಡುಗಳು ರಿಲೀಸಾಗಿದ್ದು, ಇದೀಗ 'ನೀ ಹೆಜ್ಜೆ ಇಟ್ಟ ಕಡೆಯಲ್ಲೆಲ್ಲ ಗೆಜ್ಜೆನಾದ' ಎಂಬ ಸಾಹಿತ್ಯ ಇರುವ ಮೂರನೇ ಹಾಡಿನ ಬಿಡುಗಡೆ ಸಮಾರಂಭ ನೆರವೇರಿತು. ಡಾ|.ವಿ.ನಾಗೇಂದ್ರಪ್ರಸಾದ್ ಅವರು ನಮ್‌ಋಷಿ ಅವರ ರಚನೆಯ ರಾಜೇಶ್ ಕೃಷ್ಣನ್ ಹಾಡಿರುವ ಹಾಡನ್ನು ಬಿಡುಗಡೆಗೊಳಿಸಿದರು.

ಋಷಿ ಅವರ ಒಳಿತುಮಾಡು ಮನುಸ ಹಾಡು ಯಾವ ರೀತಿ ಸೂಪರ್‌ಹಿಟ್ ಆಗಿದೆ ಎನ್ನುವುದು ಎಲ್ಲರಿಗೂ ಗೊತ್ತು ನಾನು ಕೂಡ ಆ ಹಾಡಿಗೆ ಅಭಿಮಾನಿ. ಋಷಿ ಅವರೀಗ ನಾಯಕನಾಗಿ ತೆರೆ ಮೇಲೆ ಬರುತ್ತಿದ್ದಾರೆ. ಅವರ ಹೊಸ ಚಿತ್ರಕ್ಕೆ ಒಳ್ಳೇದಾಗಲಿ ಎಂದು ಡಾ|.ವಿ.ನಾಗೇಂದ್ರಪ್ರಸಾದ್ ಶುಭ ಹಾರೈಸಿದರು.


ನಂತರ ಮಾತನಾಡಿದ ನಮ್‌ಋಷಿ, ನನ್ನ ಹಾಡನ್ನು ನಾಗೇಂದ್ರಪ್ರಸಾದ್ ಅವರಿಂದ ರಿಲೀಸ್ ಮಾಡಿಸಬೇಕೆಂಬ ಆಸೆಯಿತ್ತು. ಅದೀಗ ಈಡೇರಿದೆ. ನಾನೇ ರಚಿಸಿದ ಈ ಹಾಡನ್ನು ರಾಜೇಶ್ ಕೃಷ್ಣನ್ ಹಾಡಿದ್ದಾರೆ. ನಮ್ಮ ಚಿತ್ರದಲ್ಲಿ ಒಟ್ಟು ಐದು ಹಾಡುಗಳಿದ್ದು, ಈಗಾಗಲೇ ಮೂರು ಹಾಡುಗಳು ಬಿಡುಗಡೆಯಾಗಿವೆ. ಚಿತ್ರೀಕರಣಕ್ಕೂ ಮೊದಲು ಹಾಡುಗಳನ್ನು ಜನರಿಗೆ ತಲುಪಿಸಬೇಕೆಂಬ ಉದ್ದೇಶ ನನ್ನದು. ಈತಿಂಗಳ ಕೊನೆಯಲ್ಲಿ ಚಿತ್ರದ ಶೂಟಿಂಗ್ ಶುರುವಾಗಲಿದೆ. ನನ್ನ ಜತೆ ಅನೇಕ ಸ್ನೇಹಿತರು ಸೇರಿ ನಮ್‌ಋಷಿ ಫಿಲಂಸ್ ಮೂಲಕ ಈ ಚಿತ್ರವನ್ನು ನಿರ್ಮಿಸುತ್ತಿದ್ದೇವೆ. ಎಲ್ಲಾ ರೀತಿಯ ಮನರಂಜನಾತ್ಮಕ ಅಂಶಗಳನ್ನು ಒಳಗೊಂಡ ಚಿತ್ರವಿದು. ಜತೆಗೊಂದು ಉತ್ತಮ ಸಂದೇಶ ಕೂಡ ಇರಲಿದೆ ಎಂದರು.

ನಿರ್ಮಾಪಕರಾದ ಸೋಮಶೇಖರ್, ಮಂಜು ಭದ್ರಾವತಿ, ಹರಿಕೃಷ್ಣ ಲೋಕಿ ಹಾಗೂ ನಾಯಕಿಯರಾದ ಚೈತ್ರ, ಸ್ವಾತಿ, ರಾಜೇಶ್ವರಿ, ಚೈತ್ರಾರಾಮ್ ಚಿತ್ರದ ಕುರಿತಂತೆ ಮಾತನಾಡಿದರು.

ಸಿನಿಪದಬಂಧ-598



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಬೆಳಕನ್ನು ಚೆಲ್ಲಿ ಬರುವ ಹಬ್ಬವಿದು ! 4
3. ಸೃಜನ್ ಲೋಕೇಶ್ ಓಡಿಸಿದ ಗಜ ಗಾತ್ರದ ಮದ್ದು 5
5. ಅಶ್ವಿನಿ ಅವರ ಕಾದಂಬರಿಗೆ ಶಿವಣ್ಣ- ಪ್ರಿಯರಾಮನ್ ಅಭಿನಯವಿದೆ 6
6. ಉಪ್ಪರಿಗೆ ಮನೆ 3
7. ಪ್ರಸಿದ್ಧ ನದಿಗಳೆರಡು ತೆರೆಯ ಮೇಲೂ ಹಾಯ್ದು ಹೋಗಿದೆ 5
9. ಶಂಕರ್‌ನಾಗನ ಮಾಗದ ಹುಣ್ಣು 5
10. ಗೊಂಬೆ ಹೇಳುತ್ತೈತೆ ಹಾಡಿನ ಅರಸ 5
12. 'ಕೆಂಪು ತೋಟದಲ್ಲಿ ಒಮ್ಮೆ ಹಾರಬಾರದೇನೆ _ _ _ _ವೇ ನೀ ಹೀಗೇಕೆ ನೋಡುತಿರುವೆ ಮರುಳೆ....', 4
16. ತ್ರಿಮೂರ್ತಿಗಳಲ್ಲಿಬ್ಬರನ್ನು ಹೊಂದಿರುವ ಗಾಯಕ 5
17. ಪಂಚಭೂತಗಳೊಂದರಲ್ಲಿ ರಾಜಕುಮಾರ್ ನಿರ್ಮಿಸಿದ ಶಿಖರ 5

ಮೇಲಿನಿಂದ ಕೆಳಕ್ಕೆ

2. ಶ್ರೀನಾಥ್ - ಆರತಿ ಅಭಿನಯದಲ್ಲಿ ಹರಿದ ಪರಿಶುದ್ಧ ನದಿ 5
3. ಸುರೇಶ್ ಹೆಬ್ಳಿಕರ್ ಅನಿರೀಕ್ಷಿತವಾಗಿ ಬಂದವನು 4
4. ಮಗಳ ಗಂಡ ಶಂಕರ್‌ನಾಗ್ ಬಲು ಚಾಲಾಕಿ ! 6
6. 'ಜೀವನವೇ ಸುಖ ಪಯಣ ಒಲವಿನ ಕವನ.... ', ಗೀತೆಯ ಚಿತ್ರ 8
8. ಅಂಬರೀಷ್ - ಡಾಲಿಯ ಹೊದಿಕೆ 3
9. ಹಂತಕನ ಸಂಚು ಚಿತ್ರದ ನಾಯಕಿ 3
11. ರಾಜಕುಮಾರ್ ಹುಟ್ಟಿನ ಗೌಪ್ಯತೆಗೆ ಎಸ್.ಪಿ.ಎನ್ ಕೃಷ್ಣನ್ ನಿರ್ದೇಶಕ 5
13. ಚಿರಂಜೀವಿ ಸರ್ಜಾ ಪವನ ಸುತ 4
14. ರವಿಚಂದ್ರನ್, ರಮ್ಯಕೃಷ್ಣ, ರಾಶಿ ಅಭಿನಯದ ಚಿತ್ರ 2
15. ಹರೀಶ್‌ರಾಜ್ ಆಂಗ್ಲದ ಬಂದೂಕು ಹಿಡಿದಿದ್ದಾನೆ 2

ಸಿನಿ ಪದಬಂಧ 597ರ ಉತ್ತರ

ಕುಂ	ಟೆ	ಬಿ	ಲ್ಲೆ		ಮಂ	ಜಿ	ನ	ತೆ	ರೆ	
	ನ್ನಿ				ಕು				ಬ	
ಮಿ	ಸ್	ಲೀ	ಲಾ	ವ	ತಿ		ನ		ಲ್	
	ಕೃ				ಮ್ಮ		ನ್ನ		ಸ್ಟಾ	ರ್
ಕೃ	ಷ್ಣ	ರು	ಕ್ಮಿ	ಣಿ		ಹೀ	ರೋ		ರ್	
					ಕ		ಷ			
	ಕಾ	ಮ	ನ	ಬಿ	ಲ್ಲು		ನೂ		ಭಾ	
	ಡು					ತೇ	ರು		ರ	ನ್ನ
ಸಂ		ಕ		ಚಂ			ವ	ಸಂ	ತ	
ಸ್ಕಾ		ಹಾ	ಲುಂ	ಡ	ತ	ವ	ರು		ನಾ	ಗ
ರ	ಜ	ನಿ					ಷ		ರಿ	

ವಿಜೇತರು: ಪ್ರಮಥ್ ಪಿ.ಜೆ., ನಂ.333, ಸುಮುಖ, 4ನೇ ಮೇನ್, 6ನೇ ಕ್ರಾಸ್, ವಿಜಯನಗರ 1ನೇ ಹಂತ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಪಾಠಶಾಲಾದಲ್ಲಿ ಸಂರಕ್ಷಣೆ ಪಾಠ



ಅರಣ್ಯ ಸಂಪತ್ತನ್ನು ಹೇಗೆ ಉಳಿಸಬೇಕು ಮತ್ತು ಮಕ್ಕಳ ಬಾಲ್ಯ ಸೇರಿದಂತೆ ಅನೇಕ ಸೂಕ್ಷ್ಮ ವಿಚಾರಗಳನ್ನು ಇಟ್ಟುಕೊಂಡು ನಿರ್ದೇಶಕ ಮಂಜು ಹೆದ್ದೂರು ಪಾಠಶಾಲಾ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ, ಮಕ್ಕಳು ಹಾಗೂ ಊರ ಜನರ ಸುತ್ತ ಎಂಭತ್ತರ ದಶಕದಲ್ಲಿ ನಡೆಯುವ ಕಥೆ ಇರುವ ಈ ಚಿತ್ರ ನ.14ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ. ಈ ಕುರಿತು ಮಾಹಿತಿ ನೀಡಲು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ನಿರ್ದೇಶಕ ಹೆದ್ದೂರು ಮಂಜುನಾಥ್ ಶೆಟ್ಟಿ ಹಾಗೂ ಚಿತ್ರತಂಡ ಹಾಜರಿದ್ದು ವಿವರ ನೀಡಿತು. ಈ ಹಿಂದೆ ಗ್ಯಾಪಲ್ಲೊಂದು ಸಿನಿಮಾ, ಓಮಿನಿ ಎಂಬ ಚಿತ್ರ ನಿರ್ದೇಶಿಸಿದ್ದ ಮಂಜು ಹೆದ್ದೂರು ಅವರ ಮೂರನೇ ಚಿತ್ರವಿದು.

ಪಾಠಶಾಲಾ ಎಂಬ ಹೆಸರಿದ್ದ ಮಾತ್ರಕ್ಕೆ ಇದು ಮಕ್ಕಳ ಚಿತ್ರವಲ್ಲ, ಬದಲಾಗಿ ಹಿರಿಯರ ಚಿತ್ರ. ಈಗ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ದೊಡ್ಡ ಅಂತರವಿದೆ. ಅದು ಹೋಗಬೇಕು ಅಲ್ಲದೆ ಅರಣ್ಯಭೂಮಿಯ ಒತ್ತುವರಿ ಮತ್ತು ತೆರವು ಮಾಡುವಂತಹ ಸೂಕ್ಷ್ಮ ವಿಷಯಗಳ ಮೇಲೆ ಚಿತ್ರಕಥೆ ಮಾಡಿದ್ದೇವೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಸುಮಾರು 20 ದಿನಗಳವರೆಗೆ ಚಿತ್ರೀಕರಣ ನಡೆಸಿದ್ದೇವೆ. ಚಿತ್ರವೀಗ ಸೆನ್ಸಾರ್ ಹಂತದಲ್ಲಿದೆ ಎಂದು ನಿರ್ದೇಶಕ ಮಂಜುನಾಥ್ ಮಾಹಿತಿ ಹಂಚಿಕೊಂಡರು.

ಹಿರಿಯ ಕಲಾವಿದ ಸುಧಾಕರ ಬನ್ನಂಜೆ ಮಾತನಾಡಿ, ಚಿತ್ರದಲ್ಲಿ ನಾನು ಶಾಲೆಯ ಹೆಡ್‌ಮಾಸ್ಟರ್ ಪಾತ್ರ ನಿರ್ವಹಿಸಿದ್ದೇನೆ. 80ರ ದಶದಕಲ್ಲಿ ಶಿಕ್ಷಕರು ಹಾಗೂ ಊರ ಜನರ ನಡುವೆ ಇದ್ದಂತಹ ಬಾಂಧವ್ಯ, ಮಕ್ಕಳ ಬಗ್ಗೆ ಇದ್ದ ಕಾಳಜಿ ಎಲ್ಲವನ್ನೂ ಚಿತ್ರದಲ್ಲಿ ತೋರಿಸಲಾಗಿದೆ. ಇದು ಶೈಕ್ಷಣಿಕ ಪಾಠಶಾಲೆ ಅಲ್ಲ, ಬದುಕಿನ ಪಾಠಶಾಲೆ. ಪ್ರತಿ ಮಗುವಿನ ಹಿನ್ನೆಲೆಯಲ್ಲಿ ಒಂದೊಂದು ಕಥೆ ಇರುತ್ತದೆ. ಅದನ್ನು ನಿರ್ದೇಶಕರು ಚಿತ್ರದಲ್ಲಿ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ ಎಂದರು. ನಟ ಕಿರಣ್‌ನಾಯಕ್ ಮಾತನಾಡಿ, ಚಿತ್ರದಲ್ಲಿ ನಾನು ಸಂಜೀವಣ್ಣ ಎಂಬ ಪಾತ್ರ ಮಾಡಿದ್ದು, ಅರಣ್ಯ ನಾಶವಾಗುತ್ತಿರುವುದು ಬುಡುಕಟ್ಟು ಜನರಿಂದಲ್ಲ, ಬದಲಾಗಿ ಅರಣ್ಯ ಇಲಾಖೆಯಿಂದ. ಈ ಸತ್ಯ ಗೊತ್ತಿದ್ದರೂ ಅನಗತ್ಯವಾಗಿ ಬುಡಕಟ್ಟು ಜನರ ಮೇಲೆ ಆರೋಪ ಹೊರಿಸುವ ಕೆಲಸ ಮಾಡಲಾಗುತ್ತಿದೆ ಎಂದರು.



ಪುಣ್ಯ ಕ್ಷೇತ್ರಗಳಿಗೆ ಅಭಿವೃದ್ಧಿ ಪ್ರಾಧಿಕಾರ ರಚನೆ ವಿರೋಧಿಸಿ

ಕಪ್ಪಡಿ, ಬಿ.ಜಿ.ಪುರದ ಮಂಟೇಸ್ವಾಮಿ ಭಕ್ತರಿಂದ ಪ್ರತಿಭಟನೆ

ಕೆ.ಆರ್.ನಗರ, ಅ.16– ಚಿಕ್ಕಲ್ಲೂರು, ಕಪ್ಪಡಿ, ಬಿ.ಜಿ.ಪುರ, ಕುರುಬನಕಟ್ಟೆ ಹಾಗೂ ಆದಿ ಹೊನ್ನಾಯಕನಹಳ್ಳಿ ಪುಣ್ಯ ಕ್ಷೇತ್ರಗಳಿಗೆ ಅಭಿವೃದ್ಧಿ ಪ್ರಾಧಿಕಾರ ರಚಿಸಲು ನಿರ್ಧರಿಸಿ ರಾಜ್ಯ ಸರ್ಕಾರ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿರುವುದನ್ನು ವಿರೋಧಿಸಿ ತಾಲೂಕಿನ ಕಪ್ಪಡಿ ಹಾಗೂ ಬಿ.ಜಿ.ಪುರದ ಮಂಟೇಸ್ವಾಮಿ ಮಠದ ಭಕ್ತರು ಪಟ್ಟಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಕೆಲಕಾಲ ಪ್ರತಿಭಟನೆ ನಡೆಸಿ, ತಹಸೀಲ್ದಾರ್‌ಗೆ ಮನವಿ ಸಲ್ಲಿಸಿ ಆಕ್ರೋಶ ವ್ಯಕ್ತಪಡಿಸಿದರು.

ಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ದಪ್ಪಾಜಿ ಅಭಿವೃದ್ಧಿ ಪ್ರಾಧಿಕಾರ ರಚಿಸಲು ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಮಳವಳ್ಳಿ, ಆದಿಹೊನ್ನಾಯಕನಹಳ್ಳಿ ಹಾಗೂ ಕಪ್ಪಡಿ ಕ್ಷೇತ್ರಗಳ ಮಠಾಧಿಪತಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಮಂಟೇಸ್ವಾಮಿ, ರಾಚಪ್ಪಾಜಿ ಹಾಗೂ ಸಿದ್ದಪ್ಪಾಜಿ ನೆಲೆಯಾಗಿರುವ ಪುಣ್ಯ ಕ್ಷೇತ್ರಗಳು ಹಾಗೂ ಇದಕ್ಕೆ ಹೊಂದಿಕೊಂಡಿರುವ ಮಠಗಳು 5 ಶತಮಾನಗಳಷ್ಟು ಪುರಾತನ ಆಧ್ಯಾತ್ಮಿಕ ಹಾಗೂ ಸಾಂಪ್ರದಾಯಿಕ ಪರಂಪರೆ ಹೊಂದಿವೆ. ಪುಣ್ಯ ಕ್ಷೇತ್ರಗಳಾದ ಚಿಕ್ಕಲ್ಲೂರು, ಕಪ್ಪಡಿ, ಬಿ.ಜಿ.ಪುರ, ಕುರುಬನಕಟ್ಟೆ ಹಾಗೂ ಆದಿಹೊನ್ನಾಯಕನಹಳ್ಳಿ ಪುಣ್ಯ ಕ್ಷೇತ್ರಗಳಿಗೆ ಅಭಿವೃದ್ಧಿ ಪ್ರಾಧಿಕಾರ ರಚಿಸಲು ರಾಜ್ಯ ಸರ್ಕಾರ ಏ.24ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಿರುವುದು ಸರಿಯಲ್ಲ. ಈ ಪುಣ್ಯ ಕ್ಷೇತ್ರಗಳ ಆಚರಣೆ, ಸಂಪ್ರದಾಯ, ಸಂಸ್ಕೃತಿ, ಆಚಾರ–ವಿಚಾರಗಳು, ಇತಿಹಾಸ ಸಮುದಾಯದ ನಂಬಿಕೆಗಳಾಗಿವೆ. ಪ್ರಮುಖವಾಗಿ ನೀಲಗಾರರ ನಂಬಿಕೆಗಳ ಮೇಲೆ ತಲ ತಲಾಂತರಗಳಿಂದ ನಡೆದುಕೊಂಡು ಬಂದಿವೆ. ಈ ಕ್ಷೇತ್ರಗಳ ಪಾವಿತ್ರ್ಯತೆಯನ್ನು 2 ಅನುವಂಶಿಕ ಕುಟುಂಬಗಳು ಅತೀವ ಶ್ರದ್ಧೆ, ಭಕ್ತಿ, ನಂಬಿಕೆಗಳಿಂದ ರಕ್ಷಿಸುತ್ತಾ, ಪೋಷಿಸಿಕೊಂಡು ಬಂದಿವೆ ಎಂದು ಪ್ರತಿಭಟನಾಕಾರರು ತಿಳಿಸಿದರು.


ಪುಣ್ಯ ಕ್ಷೇತ್ರಗಳಿಗೆ ಅಭಿವೃದ್ಧಿ ಪ್ರಾಧಿಕಾರ ರಚನೆ ವಿರೋಧಿಸಿ ಭಕ್ತರು ಪ್ರತಿಭಟನೆ ನಡೆಸಿದರು.

ಇದೀಗ ಶ್ರೀಮಠದ ಮಠಾಧಿಪತಿ, ಪಾಲಕರನ್ನಾಗಲೀ ಯಾರನ್ನೂ ಸಂಪರ್ಕಿಸದೇ ಹಾಗೂ ಸಲಹೆ ಪಡೆಯದೇ ನಿರ್ಧಾರ ತೆಗೆದುಕೊಂಡಿರುವ ಸರ್ಕಾರ ಧಾರ್ಮಿಕ ಸ್ವಾಯತ್ತತೆಯ ಮೇಲೆ ನೇರ ಹಸ್ತಕ್ಷೇಪ ಹಾಗೂ ಐತಿಹಾಸಿಕವಾಗಿ ನಡೆದುಕೊಂಡು ಬಂದಿರುವ ಸಂಪ್ರದಾಯಗಳನ್ನು ಕಡೆಗಣಿಸಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ಮಂಟೇಸ್ವಾಮಿ ಮಠದ ಭಕ್ತರು ಯಾವುದೇ ಕಾರಣಕ್ಕೂ ಅಭಿವೃದ್ಧಿ ಪ್ರಾಧಿಕಾರ ರಚನೆ ಬೆಂಬಲಿಸುವುದಿಲ್ಲ ಹಾಗೂ ಸರ್ಕಾರದ ಈ ನಿರ್ಧಾರ ಅನಧಿಕೃತ, ಅನಗತ್ಯ ಹಾಗೂ ಶತಶತಮಾನಗಳಿಂದ ನಡೆದುಕೊಂಡು ಬಂದಿರುವಂತಹ ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಂಪರೆಯ ಮೇಲಿನ ದಾಳಿ ಎಂದು ಪರಿಗಣಿಸುತ್ತದೆ ಎಂದರು.

ಹೀಗಾಗಿ ರಾಜ್ಯ ಸರ್ಕಾರ ಕೂಡಲೇ ಅಭಿವೃದ್ಧಿ ಪ್ರಾಧಿಕಾರ ರಚನೆ ಪ್ರಸ್ತಾವನೆ ಹಿಂಪಡೆಯಬೇಕು. ನಮ್ಮಂತಹ ಪ್ರಾಚೀನ ಧಾರ್ಮಿಕ ಮಠಗಳು, ಸಂಸ್ಥೆಗಳ ಸ್ವಾಯತ್ತತೆ ಗೌರವಿಸಬೇಕು. ಪುಣ್ಯಕ್ಷೇತ್ರಗಳ ಮೇಲೆ ಪರಿಣಾಮ ಬೀರುವಂತಹ ಯಾವುದೇ ಕ್ರಮ ಕೈಗೊಳ್ಳುವುದಕ್ಕೆ ಮುಂಚೆ ಸಂಬಂಧಪಟ್ಟವರನ್ನು ಸಂಪರ್ಕಿಸಿ ಚರ್ಚಿಸುವುದು ಸೂಕ್ತ ಎಂದರು.

ಮಳವಳ್ಳಿ ಮಂಟೇಸ್ವಾಮಿ ಮಠ ಈ ನಿರ್ಧಾರ ಪ್ರಶ್ನಿಸುವ ಹಾಗೂ ಶ್ರೀಮಠದ ಪರಂಪರೆ ರಕ್ಷಿಸಲು ಅಗತ್ಯವಿರುವ ಎಲ್ಲಾ ಕಾನೂನಾತ್ಮಕ ಹಾಗೂ ಸಾಂವಿಧಾನಾತ್ಮಕ ಕ್ರಮಗಳನ್ನು ಕೈಗೊಳ್ಳುತ್ತದೆ. ನೀಲಗಾರರು, ಭಕ್ತರು ಹಾಗೂ ನಾಗರಿಕರು ಸಂಘಟಿತರಾಗಿ ಹೋರಾಟ ಮಾಡಬೇಕು ಎಂದು ಒತ್ತಾಯಿಸಿದರು.

ಕಪ್ಪಡಿ ಮಠದ ಭಕ್ತರಾದ ನಿವೃತ್ತ ಬಿಇಓ ಚಂದಗಾಲು ರಾಮಲಿಂಗು, ಪುರಸಭೆ ಸದಸ್ಯ ಕೆ.ಎಲ್.ಜಗದೀಶ್, ಸಿ.ಟಿ.ರಾಮಚಂದ್ರ, ಶಿವಪ್ಪಾಜಿ, ರಾಮಕೃಷ್ಣ, ಶ್ರೀಧರ್, ಅಪ್ಪಾಜಿಗೌಡ, ಹಿರಣ್ಣಯ್ಯ, ಚಂದಗಾಲು ಜಗದೀಶ್, ಶಿವಣ್ಣ, ವಿವಿಧ ಗ್ರಾಮಗಳ ನೂರಾರು ಭಕ್ತರು ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಗೂಡ್ಸ್ ವಾಹನ ಪಲ್ಟಿ: 15 ಮಂದಿಗೆ ಗಾಯ


ಗೂಡ್ಸ್ ವಾಹನ ಪಲ್ಟಿಯಾಗಿ ಕಾರ್ಮಿಕರು ಗಾಯಗೊಂಡಿರುವುದು

ಸರಗೂರು, ಅ.16– ಚಾಲಕನ ನಿಯಂತ್ರಣ ತಪ್ಪಿ ಗೂಡ್ಸ್ ವಾಹನ ಪಲ್ಟಿ ಹೊಡೆದ ಪರಿಣಾಮ 15 ಕಾರ್ಮಿಕರು ಗಾಯಗೊಂಡಿರುವ ಘಟನೆ ತಾಲೂಕಿನ ಹುಣಸೂರು–ಎನ್.ಬೇಗೂರು ರಸ್ತೆಯ ಕಬಿನಿ ಬಲದಂಡೆ ನಾಲೆ ಬಳಿ ಗುರುವಾರ ಬೆಳಗ್ಗೆ ನಡೆದಿದೆ.

ತಾಲೂಕಿನ ಕೊತ್ತೇಗಾಲ ಗ್ರಾಪಂ ವ್ಯಾಪ್ತಿಯ ಗೊಂತಗಾಲದಹುಂಡಿ ಗ್ರಾಮದ ನಿವಾಸಿಗಳಾದ ಹರ್ಷಿತಾ, ಮಂಜುಳಾ, ಜ್ಯೋತಿ ತೀವ್ರ ಗಾಯಗೊಂಡು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೇ, ಪುಟ್ಟಿ, ಪುಟ್ಟಮ್ಮ, ಭಾಗ್ಯ, ಚೌಡಮ್ಮ, ಶೃತಿ, ಮಹದೇವಮ್ಮ, ನಾಗಮ್ಮ, ಕಾಳಮ್ಮ, ಅಶ್ವಿನಿ, ಮಾದಮ್ಮ, ಸಿದ್ದಶೆಟ್ಟಿ, ಮಾದಮ್ಮ ಅವರಿಗೆ ಸಣ್ಣ ಪುಟ್ಟ ಗಾಯವಾಗಿದ್ದು, ಪಟ್ಟಣದ ಸ್ವಾಮಿ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎನ್ನಲಾಗಿದೆ.

ಗೊಂತಗಾಲದಹುಂಡಿ ಗ್ರಾಮದಿಂದ 15 ಮಹಿಳಾ ಕಾರ್ಮಿಕರು ಶುಂಠಿ ಕೆಲಸಕ್ಕೆ ಗೂಡ್ಸ್ ವಾಹನದಲ್ಲಿ ತೆರಳುತ್ತಿದ್ದರು. ಈ ವೇಳೆ ಚಾಲಕನ ನಿಯಂತ್ರಣ ಕಳೆದುಕೊಂಡ ಗೂಡ್ಸ್ ವಾಹನ ತಾಲೂಕಿನ ಹುಣಸೂರು–ಎನ್.ಬೇಗೂರು ರಸ್ತೆಯ ಕಬಿನಿ ಬಲದಂಡೆ ನಾಲೆ ಬಳಿ ಪಲ್ಟಿಯಾಗಿದೆ. ಈ ವೇಳೆ ವಾಹನದಲ್ಲಿದ್ದ ಎಲ್ಲರೂ ಕೆಳಗೆ ಬಿದ್ದು ತೀವ್ರ ಗಾಯಗೊಂಡಿದ್ದರು. ಈ ಸಂದರ್ಭ ಗಾಯಾಳುಗಳನ್ನು ಸಾರ್ವಜನಿಕರು ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಲು ನೆರವಾದರು. ಘಟನೆಗೆ ಅತೀ ವೇಗ ಹಾಗೂ ಚಾಲಕನ ನಿರ್ಲಕ್ಷ್ಯವೇ ಕಾರಣ ಎನ್ನಲಾಗಿದೆ.

ಆಕ್ರೋಶ: ಘಟನೆ ನಡೆದು ಒಂದೂವರೆ ಗಂಟೆಯಾದರೂ ಸ್ಥಳಕ್ಕೆ ಆಂಬುಲೆನ್ಸ್ ಆಗಮಿಸದ ಹಿನ್ನೆಲೆಯಲ್ಲಿ ಸಾರ್ವಜನಿಕರು ತಾಲೂಕು ಆಡಳಿತ, ಶಾಸಕರು ಹಾಗೂ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಕೂಡಲೇ ನೂತನ ತಾಲೂಕು ಸರಗೂರಿಗೆ ಸರ್ಕಾರ ಆಂಬುಲೆನ್ಸ್ ಒದಗಿಸಬೇಕು ಎಂದು ಒತ್ತಾಯಿಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಿಪಿಐ ಪ್ರಸನ್ನ ಕುಮಾರ್, ಎಸ್ಐ ಕಿರಣ್ ಕುಮಾರ್, ಎಎಸ್ಐ ಕೃಷ್ಣಕುಮಾರ್, ಸಿಬ್ಬಂದಿಗಳಾದ ಮಹಮದ್ ಇಮ್ರಾನ್, ಆನಂದ, ರಮೇಶ್ ಇನ್ನಿತರರು ಪರಿಶೀಲನೆ ನಡೆಸಿದರು. ಸರಗೂರು ಠಾಣೆಯಲ್ಲಿ ದೂರು ದಾಖಲಾಗಿದೆ.

ಸಾಲೇಕೊಪ್ಪಲು ಡೇರಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ


ಸಾಲೇಕೊಪ್ಪಲು ಡೇರಿ ಅಧ್ಯಕ್ಷರಾಗಿ ಮೋಹನ್ ಕುಮಾರ್, ಉಪಾಧ್ಯಕ್ಷರಾಗಿ ಸುಂದರ್ ಆಯ್ಕೆಯಾದರು.

ಚುಂಚನಕಟ್ಟೆ, ಅ.16– ಸಾಲಿಗ್ರಾಮ ತಾಲೂಕಿನ ಸಾಲೇಕೊಪ್ಪಲು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಸ್.ಆರ್.ಮೋಹನ್ ಕುಮಾರ್, ಉಪಾಧ್ಯಕ್ಷರಾಗಿ ಸುಂದರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗುರುವಾರ ಡೇರಿ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಸ್.ಆರ್.ಮೋಹನ್ ಕುಮಾರ್, ಉಪಾಧ್ಯಕ್ಷ ಸ್ಥಾನಕ್ಕೆ ಸುಂದರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಕೆ.ಆರ್.ನಗರ ಸಹಕಾರ ಇಲಾಖೆ ಸಿಡಿಪಿಓ ಎಸ್.ರವಿ ಪ್ರಕಟಿಸಿದರು.

ನೂತನ ಅಧ್ಯಕ್ಷ ಎಸ್.ಆರ್.ಮೋಹನ್ ಕುಮಾರ್ ಮಾತನಾಡಿ, ನನ್ನ ಅಧಿಕಾರವಧಿಯಲ್ಲಿ ಸಂಘದ ನೂತನ ಕಟ್ಟಡ ನಿರ್ಮಾಣಕ್ಕೆ ಶಾಸಕ ಡಿ.ರವಿಶಂಕರ್ ಅವರ ಸಹಕಾರದೊಂದಿಗೆ ಶ್ರಮಿಸಲಾಗುವುದು ಎಂದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಮುಖಂಡರಾದ ಎಸ್.ಪಿ.ಜಗದೀಶ್, ಅಂಗಡಿ ಕುಮಾರ್, ನಿಂಗೇಗೌಡ, ಮಧು, ರಾಜೇಗೌಡ, ವೀರಭದ್ರ, ಮಂಜುನಾಥ್, ಭರತ್, ಪ್ರಜ್ವಲ್, ಕಿರಣ್, ಸುರೇಶ್, ಹರೀಶ್, ಶಿವಣ್ಣ ಸೇರಿದಂತೆ ಮತ್ತಿತರರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಈ ವೇಳೆ ನಿರ್ದೇಶಕರಾದ ಅಶ್ವತ್ ಕುಮಾರ್, ಮೋಹನ್ ಕುಮಾರ್, ಗೀತಾ ಶಿವಣ್ಣ, ಆಶಾ ಗೋಪಾಲಸ್ವಾಮಿ, ಪ್ರಕಾಶ್, ಸಂಘದ ಕಾರ್ಯದರ್ಶಿ ವೆಂಕಟೇಶ್ ಸೇರಿದಂತೆ ಮತ್ತಿತರರಿದ್ದರು.

ಹದಗೆಟ್ಟ ರಸ್ತೆಗಳ ಅಭಿವೃದ್ಧಿಗೊಳಿಸಿ

ಅಧಿಕಾರಿಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಸೂಚನೆ

ಹುಣಸೂರು, ಅ.16– ಹುಣಸೂರು ನಗರ ವ್ಯಾಪ್ತಿಯಲ್ಲಿ ಗುಂಡಿ ಬಿದ್ದು ಹದಗೆಟ್ಟಿರುವ ಮುಖ್ಯ ರಸ್ತೆಗಳನ್ನು 18.5 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವಂತೆ ಲೋಕೋಪಯೋಗಿ ಇಲಾಖೆ ಹಾಗೂ ನಗರಸಭೆ ಅಧಿಕಾರಿಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಸೂಚಿಸಿದರು.

ನಗರದಲ್ಲಿನ ಹದಗೆಟ್ಟ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಸಂಬಂಧ ನಗರಸಭೆಯಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಲೋಕೋಪಯೋಗಿ ಇಲಾಖೆಯಡಿ 17 ಕೋಟಿ ವೆಚ್ಚದಲ್ಲಿ 11 ಕಿಮೀ, ನಗರಸಭೆ ವತಿಯಿಂದ 1.5 ಕೋಟಿ ರೂ. ವೆಚ್ಚದಲ್ಲಿ 5 ಕಿಮೀ ರಸ್ತೆ ಅಭಿವೃದ್ಧಿಗೊಳಿಸಲು ತುರ್ತು ಕಾಮಗಾರಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಅರಸು ಪ್ರತಿಮೆಯಿಂದ ಮಾರುತಿ ಪೆಟ್ರೋಲ್ ಬಂಕ್, ಕಲ್ಪತರು ವೃತ್ತ, ಸಂವಿಧಾನ ವೃತ್ತ, ಹಳೇ ಸೇತುವೆ ಮೂಲಕ ಹಾಲಗೆರೆವರೆಗೆ, ಮಾರುತಿ ಪೆಟ್ರೋಲ್ ಬಂಕ್‌ನಿಂದ ವಿ.ವಿ.ಸರ್ಕಲ್‌ವರೆಗೆ ಹಾಗೂ ವಿ.ವಿ.ಸರ್ಕಲ್‌ನಿಂದ ರತ್ನಪುರಿ ರಸ್ತೆ ಸಂಪರ್ಕ, ಕಲ್ಪತರು ವೃತ್ತ, ಲಕ್ಷ್ಮಿ ವಿಲಾಸ ವೃತ್ತದ ಮೂಲಕ ಕೋಟೆ ವೃತ್ತ, ಕಲ್ಪತರು ವೃತ್ತದಿಂದ ಶಬ್ಬೀರ್ ನಗರ, ಸಂವಿಧಾನ ಸರ್ಕಲ್‌ನಿಂದ ಕೋಟೆ ವೃತ್ತದ ಮೂಲಕ ಚಿಕ್ಕ ಹುಣಸೂರು ವೃತ್ತ, ಕಲ್ಪತರು ವೃತ್ತದಿಂದ ಸಂವಿಧಾನ ವೃತ್ತದ ಮೂಲಕ ಪ್ರವಾಸಿ ಮಂದಿರದವರೆಗೆ ಹಾಗೂ ಶಬರಿ ವೃತ್ತದಿಂದ ಕಲ್ಕುಣಿಕೆ ಸರ್ಕಲ್, ಹೆಚ್.ಡಿ.ಕೋಟೆ ಸರ್ಕಲ್‌ನಿಂದ ಕಾಫಿ ವರ್ಕ್ಸ್ ರಸ್ತೆ ಸೇರಿದಂತೆ ನಗರ ವ್ಯಾಪ್ತಿಯ ಎಲ್ಲಾ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ಎರಡೂ ಇಲಾಖೆಗಳಿಗೆ ಜವಾಬ್ದಾರಿ ನೀಡಲಾಗಿದೆ. ಸದ್ಯದಲ್ಲೇ ಕಾಮಗಾರಿ ಪ್ರಾರಂಭವಾಗಲಿದೆ ಎಂದರು.


ಹದಗೆಟ್ಟ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಸಂಬಂಧ ಅಧಿಕಾರಿಗಳ ಸಭೆ ನಡೆಯಿತು.

ನಗರ ವ್ಯಾಪ್ತಿಯ 16 ಕಿಮೀ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚಲಾಗುವುದು. ಅವಶ್ಯಕತೆ ಇದ್ದ ಕಡೆ ಪೂರ್ಣ ಪ್ರಮಾಣದಲ್ಲಿ ಡಾಂಬರೀಕರಣ ಮಾಡಲಾಗುವುದು. ಒಟ್ಟಾರೆ ನಗರ ವ್ಯಾಪ್ತಿಯಲ್ಲಿ ಹದಗೆಟ್ಟಿರುವ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗುವುದು ಎಂದರು.

ನಗರಸಭಾಧ್ಯಕ್ಷ ಮಾಲೀಕ್ ಪಾಷ, ಉಪಾಧ್ಯಕ್ಷೆ ಆಶಾ, ಪೌರಾಯುಕ್ತೆ ಮಾನಸ, ಲೋಕೋಪಯೋಗಿ ಇಲಾಖೆ ಎಇಇ ಯತೀಶ್. ಯು.ಆರ್, ಜೆಇ ಪ್ರಭಾಕರ ನಾಯ್ಕ, ನಗರಸಭೆ ಎಇ ಲೋಕೇಶ್, ಇಂಜಿನಿಯರ್ ಸೌಮ್ಯ, ಕಂದಾಯಾಧಿಕಾರಿ ಸಿದ್ದಯ್ಯ, ಕಚೇರಿ ವ್ಯವಸ್ಥಾಪಕ ನಟರಾಜ್, ನಗರಸಭಾ ಸದಸ್ಯರಾದ ಸ್ವಾಮಿಗೌಡ, ನಿಂಗರಾಜ್, ಗಣೇಶ್ ಕುಮಾರ್ ಸ್ವಾಮಿ, ಸತೀಶ್ ಕುಮಾರ್, ಶ್ರೀನಾಥ್, ವಿವೇಕ್, ದೇವರಾಜು.ಸಿ, ಹರೀಶ, ಸಯ್ಯದ್ ಯೂನಸ್, ಸಮೀನಾ ಭಾನು, ಇಮ್ರಾನ್ ಇದ್ದರು.

ಘನತ್ಯಾಜ್ಯ ನಿರ್ವಹಣಾ ಟ್ರಾಕ್ಟರ್‌ಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ


ನೂತನ ಟ್ರಾಕ್ಟರ್‌ಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು.

ಹುಣಸೂರು, ಅ.16– ನಗರದ ಸ್ವಚ್ಛತೆ ಹಿನ್ನೆಲೆಯಲ್ಲಿ ಘನ ತ್ಯಾಜ್ಯ ನಿರ್ವಹಣೆ ಹಾಗೂ ಸಾಗಾಣೆಗಾಗಿ ನಗರಸಭೆ ನಿಧಿಯ 18.5 ಲಕ್ಷ ರೂ. ವೆಚ್ಚದಲ್ಲಿ ಖರೀದಿಸಿದ್ದ 2 ಟ್ರಾಕ್ಟರ್‌ಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಗುರುವಾರ ಬೆಳಗ್ಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ನಗರದ ಘನತ್ಯಾಜ್ಯ ಸಾಗಿಸಲು ಇಲ್ಲಿನ ನಗರಸಭೆಯಲ್ಲಿರುವ ಟ್ರಾಕ್ಟರ್‌ಗಳು ತುಂಬಾ ಹಳೆಯದಾಗಿದ್ದು, ದುರಸ್ತಿಗೆ ಬರುತ್ತಿದ್ದವು. ಹೀಗಾಗಿ ರಿಪೇರಿಗೆ ಹೆಚ್ಚು ಹಣ ವ್ಯಯಿಸುವ ಬದಲು ಹೊಸ ಟ್ರಾಕ್ಟರ್‌ಗಳನ್ನು ಖರೀದಿಸಲು ಸಭೆಯಲ್ಲಿ ತೀರ್ಮಾನಿಸಿದಂತೆ 2 ಹೊಸ ಟ್ರಾಕ್ಟರ್‌ಗಳನ್ನು ಖರೀದಿಸಲಾಗಿದೆ. ಇಂದು ಟ್ರಾಕ್ಟರ್ ಬಳಕೆಗೆ ಚಾಲನೆ ನೀಡಲಾಗಿದ್ದು, ಇದರಿಂದ ಪೌರ ಕಾರ್ಮಿಕರು ಘನತ್ಯಾಜ್ಯಗಳನ್ನು ಸಾಗಿಸಲು ಅನುಕೂಲವಾಗಲಿದೆ ಎಂದರು.

ಈ ವೇಳೆ ನಗರಸಭಾಧ್ಯಕ್ಷ ಮಾಲೀಕ್ ಪಾಷ, ಉಪಾಧ್ಯಕ್ಷೆ ಆಶಾ, ಪೌರಾಯುಕ್ತೆ ಮಾನಸ, ಎಇಇ ಲೋಕೇಶ್, ಪರಿಸರ ಇಂಜಿನಿಯರ್ ಸೌಮ್ಯ, ಕಂದಾಯಾಧಿಕಾರಿ ಸಿದ್ದಯ್ಯ, ಕಂದಾಯ ನಿರೀಕ್ಷಕ ನಿಧಿ, ನಿಂಗರಾಜು, ಗೋವಿಂದೇಗೌಡ, ಮೇಸ್ತ್ರಿ ಕೃಷ್ಣೇಗೌಡ, ರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಧರ್ಮಸ್ಥಳ ಸಂಸ್ಥೆಯಿಂದ ಶಿಕ್ಷಕರಿಗೆ ಉಡುಗೊರೆ

ಹೆಚ್.ಡಿ.ಕೋಟೆ, ಅ.16– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಹೆಚ್.ಡಿ.ಕೋಟೆ ವತಿಯಿಂದ ತಾಲೂಕಿನ ಅಡಹಳ್ಳಿ, ಹಂಪಾಪುರ, ಸತ್ತಿಗೆ ಹುಂಡಿ, ಹಿರೇಹಳ್ಳಿ, ಕೆಂಚನಹಳ್ಳಿ, ಶಾಂತಿಪುರ, ಗಾಂಧಿನಗರ, ಡಡದಹಳ್ಳಿ ಗ್ರಾಮಗಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಹಾಗೂ ರವೀಂದ್ರ ವಿದ್ಯಾಸಂಸ್ಥೆಗೆ ಜ್ಞಾನದೀಪ ಶಾಲಾ ಶಿಕ್ಷಣ ಕಾರ್ಯಕ್ರಮದಡಿ ಆಯ್ಕೆಯಾದ 9 ಶಿಕ್ಷಕರಿಗೆ ಪಟ್ಟಣದ ಕಚೇರಿಯಲ್ಲಿ ಉಡುಗೊರೆ ವಿತರಿಸಲಾಯಿತು.

ಈ ವೇಳೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕ್ಷೇತ್ರ ಯೋಜನಾಧಿಕಾರಿ ವಿ.ಭಾಸ್ಕರ್, ಕೃಷಿ ಮೇಲ್ವಿಚಾರಕ ರಾಜು.ಬಿ.ಜೆ., ಆಡಳಿತ ಸಹಾಯಕ ಪ್ರಬಂಧಕಿ ಪ್ರತಿಮಾ, ವಲಯ ಮೇಲ್ವಿಚಾರಕರು ಕೃಷ್ಣಮೂರ್ತಿ, ಭೂತಯ್ಯ, ಲೋಕೇಶ್, ಭಾರತಿ, ಚೈತ್ರ, ಪವಿತ್ರ, ಶಾಂತ, ವೀಣಾ ಸೇರಿದಂತೆ ಇತರರು ಉಪಸ್ಥಿತರಿದ್ದರು.


ಶಿಕ್ಷಕರಿಗೆ ಉಡುಗೊರೆ ವಿತರಿಸಲಾಯಿತು.

ಕೆ.ಪಿ.ಚಂದ್ರಶೇಖರಯ್ಯ ಅವರಿಗೆ ಶ್ರದ್ಧಾಂಜಲಿ

ಬೆಟ್ಟದಪುರ, ಅ.16– ಇತ್ತೀಚೆಗೆ ನಿಧನರಾದ ಪಿರಿಯಾಪಟ್ಟಣ ತಾಲೂಕಿನ ವೀರಶೈವ ಲಿಂಗಾಯತ ಮಹಾಸಭಾ ಮಾಜಿ ಅಧ್ಯಕ್ಷ ಕೆ.ಪಿ. ಚಂದ್ರಶೇಖರಯ್ಯ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಭೆಯಲ್ಲಿ ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಹೆಚ್.ವಿ.ಪರಮೇಶ್ ಅವರು ಚಂದ್ರಶೇಖರ್ ಅವರ ಬಗ್ಗೆ ಮಾತನಾಡಿದರು. ಈ ವೇಳೆ ಮುಖಂಡರಾದ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಹೊಲದಪ್ಪ, ಕಾರ್ಯದರ್ಶಿ ಕೆಲ್ಲೂರು ನಾಗರಾಜು, ಶಿವಕುಮಾರಸ್ವಾಮಿ, ಪತ್ರಕರ್ತ ಶಿವದೇವ್, ಟಿಂಬರ್‌ರಾಜು ಎಂ.ಎನ್.ಚಂದ್ರಶೇಖರ್ ಮಲ್ಲಿಕಾರ್ಜುನ್, ಮುಕೇಶ್, ಪ್ರಮೋದ್, ಹಿರಿಯ ನಿವೃತ್ತ ಶಿಕ್ಷಕರಾದ ಶಿವಸ್ವಾಮಿ, ಪುಟ್ಟರಾಜು, ಕೆಂಪಣ್ಣ, ತಾಲೂಕು ಉಪಾಧ್ಯಕ್ಷ ಗಿರೀಶ್, ಆರ್ಶಿ ವಿಶ್ವೇಶ್ವರಯ್ಯ, ಅಶೋಕ, ಮಹೇಶ್, ಮಹಿಳಾ ನಿರ್ದೇಶಕಿ ಅನಿತಾ, ವಿನಯ್ ಸೇರಿದಂತೆ ಇತರರಿದ್ದರು.


ಚಂದ್ರಶೇಖರಯ್ಯ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಶ್ರೀಕಂಠೇಶ್ವರನ ದರ್ಶನ ಪಡೆದ ನಟ ರಿಷಬ್ ಶೆಟ್ಟಿ


ಕಾಂತಾರ ಚಾಪ್ಟರ್–1 ಚಿತ್ರ ಬಿಡುಗಡೆಗೊಂಡು ಯಶಸ್ವಿ ಪ್ರದರ್ಶನ ಕಾಣುತ್ತಿರುವ ಹಿನ್ನೆಲೆಯಲ್ಲಿ ದಕ್ಷಿಣಕಾಶಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ನಟ ರಿಷಬ್ ಶೆಟ್ಟಿ ಭೇಟಿ ನೀಡಿ ದೇವರ ದರ್ಶನ ಪಡೆದರು.

5.5 ಅಡಿ ಎತ್ತರದಲ್ಲಿ ವಿದ್ಯುತ್ ಮಾಪಕ ಅಳವಡಿಸಿ

ತಿ.ನರಸೀಪುರ, ಅ.16– ಮನೆ/ವಾಣಿಜ್ಯ ಮಳಿಗೆಗಳಲ್ಲಿ ವಿದ್ಯುತ್ ಮಾಪಕಗಳನ್ನು ಕಡ್ಡಾಯವಾಗಿ 5.5 ಅಡಿ ಎತ್ತರದಲ್ಲಿ ಮಕ್ಕಳಿಗೆ ಎಟುಕದಂತೆ ಮತ್ತು ಮಳೆ ನೀರಿನಿಂದ ರಕ್ಷಣೆ ಇರುವ ಜಾಗದಲ್ಲಿ ಅಳವಡಿಸುವಂತೆ ಸೆಸ್ಕಾಂ ಅಧಿಕಾರಿಗಳು ಸಾರ್ವಜನಿಕರಿಗೆ ಸೂಚಿಸಿದ್ದಾರೆ.

ಇಲ್ಲಿನ ಉಪವಿಭಾಗ ವ್ಯಾಪ್ತಿಯ ಪಟ್ಟಣ ಪ್ರದೇಶಗಳು ಸೇರಿದಂತೆ ಬಹುತೇಕ ಗ್ರಾಮೀಣ ಪ್ರದೇಶದಲ್ಲಿನ ಮನೆ/ವಾಣಿಜ್ಯ ಮಳಿಗೆಗಳಲ್ಲಿ ವಿದ್ಯುತ್ ಮಾಪಕವನ್ನು ಹೆಚ್ಚು ಎತ್ತರದಲ್ಲಿ ಅಳವಡಿಸಿಕೊಂಡಿದ್ದು, ಇದರಿಂದಾಗಿ ಮಾಪಕ ಓದುಗರಿಗೆ ಮಾಪಕಗಳನ್ನು ಓದಿ ಬಿಲ್ಲುಗಳನ್ನು ವಿತರಿಸಲು ತುಂಬಾ ತೊಂದರೆಯಾಗುತ್ತಿದೆ ಹಾಗೂ ಸೆಸ್ಕ್ ಸುತ್ತೋಲೆಯ ಅನ್ವಯ ಮಾಪಕ ಓದುವಿಕೆಯ ಕಾರ್ಯವನ್ನು ಸ್ಪಾಟ್ ಆಪ್ಟಿಕಲ್ ಪೋರ್ಬ್ ಸಾಧನಗಳ ಮುಖಾಂತರ ನಿರ್ವಹಿಸುವಂತೆ ಮುಖ್ಯ ವ್ಯವಸ್ಥಾಪಕರು ಸೂಚಿಸಿರುವ ಹಿನ್ನೆಲೆಯಲ್ಲಿ ಈ ತಿಂಗಳ ಅಂತ್ಯದೊಳಗೆ ಈ ಕೆಳಗಿನ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೆಸ್ಕಾಂ ಕೋರಿದ್ದು, ಸೂಚನೆ ಪಾಲಿಸದಿದ್ದರೆ ಯಾವುದೇ ಮುನ್ಸೂಚನೆ ನೀಡದೆ ಅಂತಹ ಮನೆ/ವಾಣಿಜ್ಯ ಮಳಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.

ಗ್ರಾಮೀಣ ಮತ್ತು ನಗರ ಪ್ರದೇಶದ ಎಲ್ಲಾ ವಿದ್ಯುತ್ ಗ್ರಾಹಕರು ಹೊಸ ವಿದ್ಯುತ್ ಸಂಪರ್ಕ ಪಡೆಯುವ ಸಂದರ್ಭ ಕಡ್ಡಾಯವಾಗಿ 5.5 ಅಡಿಯೊಳಗೆ ಮೀಟರ್ ಅಳವಡಿಸಬೇಕು. ಈಗಾಗಲೇ ಬಹಳ ಎತ್ತರದಲ್ಲಿ ಮಾಪಕ ಅಳವಡಿಸಿರುವ ಗ್ರಾಮೀಣ ಮತ್ತು ನಗರ ಪ್ರದೇಶದ ಎಲ್ಲಾ ವಿದ್ಯುತ್ ಗ್ರಾಹಕರು ಕಡ್ಡಾಯವಾಗಿ 5.5 ಅಡಿ ಎತ್ತರದಲ್ಲಿ, ಮಕ್ಕಳಿಗೆ ಸುಲಭವಾಗಿ ಕೈಗೆಟುಕದ ಮತ್ತು ಮಳೆ ನೀರಿನಿಂದ ರಕ್ಷಣೆ ಇರುವಂತಹ ಜಾಗದಲ್ಲಿ ಮೀಟರ್‌ಗಳನ್ನು ಅಳವಡಿಸಿಕೊಳ್ಳಬೇಕು ಹಾಗೂ ಹಾಲಿ ಇರುವ ಮತ್ತು ನೂತನವಾಗಿ ನಿರ್ಮಿಸಿರುವ ಬಹುಮಹಡಿ ಕಟ್ಟಡಗಳು ಅಥವಾ 2 ಮತ್ತು 3 ಅಂತಸ್ತುಗಳುಳ್ಳ ಮನೆ/ ವಾಣಿಜ್ಯ ಮಳಿಗೆಗಳ ಎಲ್ಲಾ ವಿದ್ಯುತ್ ಮಾಪಕಗಳನ್ನು ನೆಲ ಮಹಡಿಯಲ್ಲಿಯೇ ಅಳವಡಿಸಬೇಕು ಎಂದು ಸೆಸ್ಕ್ ಇಇ ವೀರೇಶ್ ತಿಳಿಸಿದ್ದಾರೆ.

ಅ.31ರೊಳಗೆ ಅಧಿಕಾರಿಗಳು, ಜನಪ್ರತಿನಿಧಿಗಳು ಸಮಸ್ಯೆ ಬಗೆಹರಿಸದಿದ್ದರೆ

ನ.1ರಿಂದ ತಿ.ನರಸೀಪುರದಲ್ಲಿ ಅನಿರ್ದಿಷ್ಟಾವಧಿ ಧರಣಿ

ದಸಂಸ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ ಎಚ್ಚರಿಕೆ

ತಿ.ನರಸೀಪುರ, ಅ.16– ತಾಲೂಕಿನ ಕೇತುಪುರದಲ್ಲಿ ಪ.ಜಾತಿಯವರಿಗೆ ಕಾಯ್ದಿರಿಸಿದ್ದ ಆಶ್ರಯ ನಿವೇಶನಗಳನ್ನು ಸಮರ್ಪಕವಾಗಿ ಹಂಚಿಕೆ ಮಾಡಬೇಕು. ಬೇವಿನಹಳ್ಳಿಯಲ್ಲಿ ಸಿಎಂ, ಸಚಿವರೇ ಹಂಚಿದ್ದ ನಿವೇಶನಗಳಿಗೆ ಇ–ಸ್ವತ್ತು ನೀಡಲು, ದಲಿತರ ಸ್ಮಶಾನಗಳನ್ನು ಅಭಿವೃದ್ಧಿಪಡಿಸಲು ಹಾಗೂ ಸುಜ್ಜಲೂರು ದಲಿತರ ಕಾಲೋನಿಯಲ್ಲಿ ಚರಂಡಿ ಸಮಸ್ಯೆ ಪರಿಹರಿಸಲು ತಾಲೂಕು ಮಟ್ಟದ ಅಧಿಕಾರಿಗಳಿಗೆ ಅ.31 ರವರೆಗೆ ಗಡುವು ನೀಡಲಾಗಿದೆ. ಆಡಳಿತ ವರ್ಗ ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ಅಧಿಕಾರಿಗಳ ಬೇಜವಾಬ್ದಾರಿ ಹಾಗೂ ಜನಪ್ರತಿನಿಧಿಗಳ ರಾಜಕೀಯ ಇಚ್ಛಾಶಕ್ತಿ ಕೊರತೆ ಖಂಡಿಸಿ ನ.1 ರಿಂದ ತಾಲೂಕು ಕಚೇರಿ ಆವರಣದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು ಎಂದು ದಸಂಸ ಬಣ ರಹಿತ ಸಂಘಟನೆ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ ಎಚ್ಚರಿಕೆ ನೀಡಿದರು.

ಪಟ್ಟಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, 1972ರಲ್ಲಿ ಜಿಲ್ಲಾಧಿಕಾರಿಯಾಗಿದ್ದ ಜೆ.ಭಾಸ್ಕರ್ ಅವರು ತಾಲೂಕಿನ ಕೇತುಪುರದಲ್ಲಿ ಪರಿಶಿಷ್ಟರಿಗೆ ಮಂಜೂರು ಮಾಡಿ, ಮೀಸಲಿಟ್ಟಿದ್ದ 2.27 ಎಕರೆಯಲ್ಲಿದ್ದ ನಿವೇಶನವನ್ನು ಸಮರ್ಪಕವಾಗಿ ಹಂಚಿಕೆ ಮಾಡಿಲ್ಲ. ಬಲಾಢ್ಯ ಸಮುದಾಯದವರ ಪ್ರಾಬಲ್ಯದಿಂದ ಬೇವಿನಹಳ್ಳಿಯಲ್ಲಿ 2014ರಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ದಲಿತರಿಗೆ ಹಂಚಿಕೆ ಮಾಡಿದ್ದ ನಿವೇಶನಗಳ ಹಕ್ಕುಪತ್ರಗಳನ್ನು ನೀಡಿದರೂ, ಅಲ್ಲಿನ ಗ್ರಾಪಂ ಅಧಿಕಾರಿಗಳು ಇ–ಸ್ವತ್ತು ಮಾಡಿಕೊಡಲು ಮೀನಾಮೇಷ ಎಣಿಸುತ್ತಿದ್ದಾರೆ. ಹಕ್ಕುಪತ್ರ ಸಂಬಂಧ ಪಿಡಿಓ ಮತ್ತು ತಹಸೀಲ್ದಾರ್ ಪರಸ್ಪರ ಸಬೂಬು ಹೇಳುವ ಪತ್ರ ವ್ಯವಹಾರ ಮಾಡಿಕೊಂಡು ದಲಿತರು ಪರಿತಪಿಸುವಂತೆ ಮಾಡಿದ್ದಾರೆ ಎಂದು ದೂರಿದರು.


ದಸಂಸ ಬಣ ರಹಿತ ಸಂಘಟನೆ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ ಮಾತನಾಡಿದರು.

ಕ್ಷೇತ್ರದ ಶಾಸಕ, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಪ.ಜಾತಿ ಸ್ಮಶಾನಗಳ ಅಭಿವೃದ್ಧಿಗೆ 10 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದಾರೆ. ಆದರೆ ವಾಸ್ತವವಾಗಿ ತಾಲೂಕಿನಲ್ಲಿ ದಲಿತ ಸಮುದಾಯಗಳಿಗೆ ಸ್ಮಶಾನಗಳನ್ನು ಸರಿಯಾಗಿ ಕಲ್ಪಿಸಿಲ್ಲ. ಇರುವಂತಹ ರುದ್ರಭೂಮಿಗಳ ಬಗ್ಗೆ ಆರ್‌ಟಿಸಿಯಲ್ಲಿ ಸ್ಪಷ್ಟ ಮಾಹಿತಿಯನ್ನು ಅಧಿಕಾರಿಗಳು ನಮೂದಿಸಿಲ್ಲ. ದಲಿತರ ಸ್ಮಶಾನಗಳು ಸಾರ್ವಜನಿಕ ರುದ್ರಭೂಮಿಗಳೆಂದು ಭೂ ದಾಖಲೆಯಲ್ಲಿ ನಮೂದಾಗಿದ್ದರೆ ಸರ್ಕಾರ ಮಂಜೂರು ಮಾಡಿದ್ದ ಅಭಿವೃದ್ಧಿ ಅನುದಾನ ಬಳಕೆಯಾಗದೆ ವ್ಯರ್ಥವಾಗಲಿದೆ. ಹಾಗಾಗಿ ಇಂತಹ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ತಾಲೂಕು ಆಡಳಿತ ಹಾಗೂ ಸ್ಥಳೀಯ ಗ್ರಾಪಂ ಸಮುದಾಯಗಳ ರುದ್ರಭೂಮಿಗಳ ದಾಖಲೆಗಳನ್ನು ಸರಿಪಡಿಸಬೇಕು. ಸುಜ್ಜಲೂರು ಗ್ರಾಮದಲ್ಲಿ ಚರಂಡಿ ತ್ಯಾಜ್ಯ ನೀರು ಸರಾಗವಾಗಿ ಹರಿದು ಹೋಗಲು ಸ್ಥಳಾವಕಾಶ ಇಲ್ಲದೆ ಜಡ್ಡುಗಟ್ಟಿ ನಿಲ್ಲುತ್ತಿದ್ದು, ಚರಂಡಿ ಗಬ್ಬೆದ್ದು ನಾರುತ್ತಿದೆ. ಚರಂಡಿ ನೀರು ಹರಿದು ಹೋಗಲು ಸಂಪರ್ಕ ಚರಂಡಿ ಇಲ್ಲವೇ ಕಾಮಗಾರಿ ಕೈಗೊಂಡ ಅಧಿಕಾರಿ ತಾಂತ್ರಿಕ ವಿಭಾಗಕ್ಕೆ ಅಪವಾದವಾಗಿದ್ದು, ಕಾಮಗಾರಿಯಲ್ಲಿ ಭ್ರಷ್ಟಾಚಾರ ನಡೆಸಿದ್ದಾರೆ. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು.

> “ಕೇತುಪುರ ಹಾಗೂ ಬೇವಿನಹಳ್ಳಿ ಪ.ಜಾತಿಯವರ ನಿವೇಶನ ಹಂಚಿಕೆ ಸಮಸ್ಯೆಯ ಬಗ್ಗೆ ಈಗಾಗಲೇ ಮುಖ್ಯ ಕಾರ್ಯದರ್ಶಿಗಳಿಗೆ ದೂರು ನೀಡಿದ್ದೇವೆ. ತಾಲೂಕು ಮಟ್ಟದ ಅಧಿಕಾರಿಗಳಿಗೆ ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಿದ್ದೇವೆ. ನಮ್ಮ ಮನವಿಗೆ ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ನ.1ರ ಕನ್ನಡ ರಾಜ್ಯೋತ್ಸವದ ದಿನದಿಂದಲೇ ತಾಲೂಕು ಕಚೇರಿ ಆವರಣದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ ಕೂರುತ್ತೇವೆ. ನಮ್ಮ ಹೋರಾಟಕ್ಕೆ ಪುರಸಭೆಯಿಂದ ಆಹಾರ ವ್ಯವಸ್ಥೆ ಹಾಗೂ ತಾಲೂಕು ಆಡಳಿತದಿಂದ ಮೂಲ ಸೌಕರ್ಯ ಕಲ್ಪಿಸಿ ಕೊಡಬೇಕು.
> –ಸಿ.ಉಮಾ ಮಹದೇವ, ದಸಂಸ ಜಿಲ್ಲಾ ಸಂಚಾಲಕ.

ಈ ವೇಳೆ ದಸಂಸ ಬಣ ರಹಿತ ಜಿಲ್ಲಾ ಸಂಘಟನಾ ಸಂಚಾಲಕ ಶಿವರಾಜ್, ಅಶೋಕ್ ಕೆ.ಎಂ.ವಾಡಿ, ತಾಲೂಕು ಸಂಚಾಲಕ ಕೇತುಪುರ ಶಿವಪ್ರಕಾಶ್, ತಾಲೂಕು ಸಂಘಟನಾ ಸಂಚಾಲಕರಾದ ಕೇತುಪುರ ರವೀಂದ್ರ, ಶಿವನಂಜು, ಗೌರಮ್ಮ, ಶಶಿಕಲಾ, ಚಂದ್ರಕಲಾ, ಬೇವಿನಹಳ್ಳಿ ಲತಾ, ಹೇಮಾ, ಸುಜ್ಜಲೂರು ಸಿದ್ದರಾಜು ಇನ್ನಿತರರಿದ್ದರು.

ಮುಸ್ಲಿಂ ಮುಖಂಡರು ಜೆಡಿಎಸ್ ಸೇರ್ಪಡೆ


ಶಾಸಕ ಜಿ.ಡಿ.ಹರೀಶ್‌ಗೌಡರ ಕಾರ್ಯ ವೈಖರಿ, ನಾಯಕತ್ವ ಮೆಚ್ಚಿ ನಗರಸಭಾಧ್ಯಕ್ಷ ಮಾಲೀಕ್ ಪಾಷಾ, ನಬಿ ಸ್ಟೀಲ್ ಮಾಲೀಕ ನಬಿವುಲ್ಲಾ ಖಾನ್ ನೇತೃತ್ವದಲ್ಲಿ ರಜಾಕ್ ಮೊಹಲ್ಲಾ, ಶಬ್ಬೀರ್ ಮೊಹಲ್ಲಾ ಸೇರಿದಂತೆ ನಗರದ ಮುಸ್ಲಿಂ ಮುಖಂಡರು ಗುರುವಾರ ಜೆಡಿಎಸ್‌ಗೆ ಸೇರ್ಪಡೆಗೊಂಡರು. ಈ ವೇಳೆ ನಗರಸಭಾ ಸದಸ್ಯ ಹೆಚ್.ಪಿ.ಸತೀಶ್ ಕುಮಾರ್, ಜೆಡಿಎಸ್ ಯುವ ಮುಖಂಡರಾದ ಕಾಶಿ, ಸುಹೇಲ್ ಅಂಜತ್, ಅತಾವುಲ್ಲಾ ಖಾನ್, ಕಾಸೀಫ್, ಅಂಜದ್, ಅತ್ತಾವುಲ್ಲಾ ಮತ್ತಿತರರಿದ್ದರು.

ಡಿಸಿಎಂ ಆಗ್ತಿರೋ, ಇಲ್ಲ ಜೈಲಿಗೆ ಹೋಗ್ತಿರೋ...

ಹಾಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮಗೆ ಬಂದ ಫೋನ್ ಕರೆ ಬಹಿರಂಗ

● ಬಿಜೆಪಿ–ಜೆಡಿಎಸ್‌ನಿಂದ ವ್ಯಂಗ್ಯಭರಿತ ವಾಗ್ದಾಳಿ; ಯಾರು, ಯಾವ ನಂಬರ್ ಹೇಳಿ ನೋಡೋಣ... ● ಕೆ.ಎಂ.ರಘು ಬರೆದಿರುವ 'ಎ ಸಿಂಬಲ್ ಆಫ್ ಲಾಯಲ್ಟಿ ಡಿ.ಕೆ.ಶಿವಕುಮಾರ್' ಬಿಡುಗಡೆ ವೇಳೆ ಅಚ್ಚರಿ ಮಾಹಿತಿ ಬಹಿರಂಗ



ಬೆಂಗಳೂರು, ಅ.16(ಕೆಎಂಶಿ)– ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರದಿಂದ ಹೊರಬಂದು ಬಿಜೆಪಿ ಜೊತೆ ಕೈಜೋಡಿಸಿದರೆ ಉಪಮುಖ್ಯಮಂತ್ರಿ ಸ್ಥಾನ ನೀಡುವುದಾಗಿ ಆಹ್ವಾನ ಬಂದಿತ್ತು ಎಂಬ ಡಿ.ಕೆ.ಶಿವಕುಮಾರ್ ಅವರ ಹೇಳಿಕೆ ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಯನ್ನು ಬಿಜೆಪಿ ಮತ್ತು ಜೆಡಿಎಸ್ ನಾಯಕರು ವ್ಯಂಗ್ಯ ಮಾಡಿ, ನಿಮಗೆ ಯಾರು ಆಹ್ವಾನ ನೀಡಿದ್ದರು. ಅದನ್ನು ಬಹಿರಂಗಪಡಿಸುವಂತೆ ಆಗ್ರಹಿಸಿದ್ದಾರೆ.

ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್, ಈ ಹೇಳಿಕೆಯನ್ನು ಅಲ್ಲಗಳೆದಿದ್ದು, ನವೆಂಬರ್‌ನಲ್ಲಿ ಕಾಂಗ್ರೆಸ್‌ನಲ್ಲಿ ಕ್ರಾಂತಿ ವದಂತಿಗಳ ಬೆನ್ನಲ್ಲೇ ಶಿವಕುಮಾರ್ ಪಕ್ಷದ ರಾಷ್ಟ್ರೀಯ ಅಧಿನಾಯಕರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರನ್ನು ಬೆದರಿಸಲು ಇಂತಹ ಮಾತುಗಳನ್ನು ಆಡಿದ್ದಾರೆ ಎಂದು ದೂರಿದರು.

ಡಿ.ಕೆ. ಶಿವಕುಮಾರ್ ಅವರಿಗೆ ಯಾರು ಆಹ್ವಾನ ನೀಡಿದ್ದರು ಎಂಬುದನ್ನು ಸಾರ್ವಜನಿಕವಾಗಿ ಹೇಳಬೇಕು. ನಿಮಗೆ ಆ ಸಂದರ್ಭದಲ್ಲಿ ಯಾರು ಸಂಪರ್ಕಿಸಿದ್ದರು. ಯಾವ ದೂರವಾಣಿ ಸಂಖ್ಯೆಯಿಂದ ಕರೆ ಬಂದಿತ್ತು ಎಂಬುದನ್ನು ಬಹಿರಂಗಪಡಿಸಲಿ.

ಕಳೆದ ಎರಡೂವರೆ ವರ್ಷಗಳಲ್ಲಿ ಇಂತಹ ಮಾತುಗಳನ್ನು ಆಡದ ಡಿ.ಕೆ.ಶಿವಕುಮಾರ್, ನವೆಂಬರ್ ಬರುತ್ತಿದ್ದಂತೆ ಈ ಆಹ್ವಾನ ವಿಷಯ ಬಹಿರಂಗಪಡಿಸುತ್ತಿದ್ದಾರೆ. ಮುಖ್ಯಮಂತ್ರಿ ಸ್ಥಾನ ನೀಡಿದರೆ ಗ್ರೀನ್ ಬಸ್ ಹತ್ತುತ್ತಾರೆ,. ಅವಕಾಶ ಕೊಡದಿದ್ದರೆ ರೆಡ್ ಬಸ್ ಹತ್ತಲು ಮುಂದಾಗಿದ್ದಾರೆ ಎಂದರು.

> ನಾನು ರಾಜಕೀಯದಲ್ಲಿ ಎತ್ತರಕ್ಕೆ ಬೆಳೆಯಲು ಕ್ಷೇತ್ರದ ಜನತೆ ಹಾಗೂ ಪಕ್ಷದ ಕಾರ್ಯಕರ್ತರು ಕಾರಣ. ಷಡ್ಯಂತ್ರ ಮಾಡಿ ತಿಹಾರ್ ಜೈಲಿಗೆ ಕಳುಹಿಸಿದಾಗಲೂ ಕ್ಷೇತ್ರದ ಜನ ನನ್ನ ಜೊತೆ ನಿಂತಿದ್ದರು. ಲಕ್ಷಾಂತರ ಜನರು, ತಾಯಂದಿರು ನನ್ನ ಪರವಾಗಿ ಹರಕೆ ಕಟ್ಟಿಕೊಂಡು ಪ್ರಾರ್ಥನೆ ಮಾಡಿದ್ದರು. ಎಲ್ಲರ ಹರಕೆ, ಹಾರೈಕೆಯಿಂದ ಇಂದು ನಿಮ್ಮ ಮುಂದೆ ಇದ್ದೇನೆ.
> – ಡಿ.ಕೆ.ಶಿವಕುಮಾರ್, ಡಿಸಿಎಂ

ನನಗೆ ಸಿಎಂ ಸ್ಥಾನಕ್ಕೆ ಆಹ್ವಾನವಿತ್ತು: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರತ್ಯೇಕವಾಗಿ ಮಾತನಾಡಿ, ಶಿವಕುಮಾರ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ಆಹ್ವಾನ ಬಂದರೆ, ನನಗೆ ಮುಖ್ಯಮಂತ್ರಿ ಸ್ಥಾನಕ್ಕೇ ಆಹ್ವಾನ ಬಂದಿತ್ತು. ಬಿಜೆಪಿ ಆಹ್ವಾನವನ್ನು ಅಂದು ಸ್ವೀಕರಿಸಿದ್ದರೆ ಇಂದು ನಾನೇ ಮುಖ್ಯಮಂತ್ರಿ ಆಗಿರುತ್ತಿದ್ದೆ. ಅದನ್ನು ಬಿಟ್ಟು ಕಾಂಗ್ರೆಸ್ ಜೊತೆ ಹೋದೆ ಎಂದರು.

ಸಾಹಿತಿ ಕೆ.ಎಂ.ರಘು ಬರೆದಿರುವ "ಎ ಸಿಂಬಲ್ ಆಫ್ ಲಾಯಲ್ಟಿ ಡಿ.ಕೆ.ಶಿವಕುಮಾರ್" ಪುಸ್ತಕ ಬಿಡುಗಡೆ ವೇಳೆ ಮಾತನಾಡಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಮ್ಮಿಶ್ರ ಸರ್ಕಾರ ಬಿದ್ದು ಹೋಗುವ ವೇಳೆ ಪಕ್ಷ ನಿಷ್ಠನಾಗಿ ಜೈಲುವಾಸ ಆಯ್ಕೆ ಮಾಡಿಕೊಂಡೆ.

ಸಮ್ಮಿಶ್ರ ಸರ್ಕಾರದಲ್ಲಿ ಹತ್ತು ಜನ ಶಾಸಕರು ರಾಜೀನಾಮೆ ನೀಡಲು ಹೊರಟಿದ್ದರು. ಕನಕಪುರದಲ್ಲಿದ್ದ ನಾನು ಬೆಂಗಳೂರಿಗೆ ಬಂದು ಐದಾರು ಜನರನ್ನು ವಾಪಸ್ ಕರೆದುಕೊಂಡು ಬಂದೆ.

ಆಗ ನನಗೆ ಒಬ್ಬ ಆದಾಯ ತೆರಿಗೆ ಆಡಿಟರ್ ಫೋನ್‌ನಿಂದ ಕರೆ ಬಂದಿತ್ತು. ನನ್ನ ಜೊತೆ ಡಿಜಿಯೂ ಇದ್ದರು. ಅವರು ದೂರವಾಣಿ ಕರೆಯಲ್ಲಿ ಮಾತನಾಡಿದರು. ನನ್ನ ಜೊತೆ ಡಿ.ಕೆ.ಸುರೇಶ್ ಅವರೂ ಇದ್ದರು. ಕರೆ ಮಾಡಿದವರು ನೀವು ಡಿಸಿಎಂ ಆಗುವಿರಾ ಅಥವಾ ಜೈಲಿಗೆ ಹೋಗುವಿರಾ ಎಂದು ಕೇಳಿದರು. ಎಲ್ಲಾ ಶಾಸಕರನ್ನು ವಾಪಸ್ಸು ಕರೆದುಕೊಂಡು ಬನ್ನಿ ಎಂದು ಆಯ್ಕೆ ನೀಡಿದರು.

ಆಗ ನಾನು, ನನಗೆ ಇಷ್ಟೆಲ್ಲಾ ಸ್ಥಾನ ನೀಡಿರುವ ಪಕ್ಷವನ್ನು ಬಿಡುವುದಿಲ್ಲ. ಬೇಕಾದರೆ ಜೈಲಿಗೆ ಹೋಗುತ್ತೇನೆ ಎಂದೆ. ರಾಜೀವ್ ಗಾಂಧಿ ನನಗೆ ಟಿಕೆಟ್ ನೀಡಿ ಮಂತ್ರಿ ಮಾಡಿದ್ದರು.

ಬಂಗಾರಪ್ಪ ನನಗೆ ಸಹಕಾರ ನೀಡಿದ್ದರು. ಪಕ್ಷದಿಂದ ಈ ಮಟ್ಟಕ್ಕೆ ಬೆಳೆದಿದ್ದೇನೆ ಎಂಬುದಾಗಿ ಹೇಳಿ ಜೈಲು ಆಯ್ಕೆ ಮಾಡಿಕೊಂಡೆ. ಅಂದು ನಾನು ಬೇರೆ ಆಯ್ಕೆ ಮಾಡಿದ್ದರೆ ಏನೇನು ಆಗುತ್ತಿತ್ತೋ ಗೊತ್ತಿಲ್ಲ ಎಂದು ಮಾರ್ಮಿಕವಾಗಿ ನುಡಿದರು.

ವಿದ್ಯಾರ್ಥಿ ಆಗಿದ್ದಾಗಲೇ ರಾಜಕೀಯ ನಾಯಕನಾಗಬೇಕೆಂಬ ಅಭಿಲಾಷೆ ಹೊಂದಿದ್ದೆ. ರಾಜಕಾರಣದಲ್ಲಿ ಶೇಕಡ 80ರಷ್ಟು ಮಂದಿ ಪಕ್ಷಕ್ಕಾಗಿ ದುಡಿಯುತ್ತಲೇ ಇದ್ದಾರೆ. ಕೇವಲ ಶೇಕಡ 20 ರಷ್ಟು ಜನರಿಗೆ ಮಾತ್ರ ಸಣ್ಣ ಪುಟ್ಟ ಸ್ಥಾನಮಾನ ದಕ್ಕಿದೆ.

ನನಗೀಗ 63 ವರ್ಷಗಳಾಗಿದೆ, ಇನ್ನೆಷ್ಟು ದಿನ ರಾಜಕಾರಣ ಮಾಡಲು ಸಾಧ್ಯ. ಹೊಸಬರಿಗೂ ಅವಕಾಶ ನೀಡಬೇಕು. ಜಾತ್ಯತೀತ ತತ್ವದಲ್ಲಿ ಬೆಳೆದ ನನಗೆ ಆರ್‌ಎಸ್‌ಎಸ್ ಬಗ್ಗೆಯೂ ತಿಳಿದಿದೆ ಎಂಬುದನ್ನು ವಿಧಾನಸಭೆಯಲ್ಲಿ ಹೇಳಿದ್ದಕ್ಕೆ ದೊಡ್ಡ ರಾದ್ಧಾಂತ ಎಬ್ಬಿಸಿದರು.

ನನ್ನನ್ನು ನಂಬಿದ ಕಾರ್ಯಕರ್ತರಿಗೆ ನೋವಾಗಬಾರದೆಂಬ ಕಾರಣಕ್ಕೆ ಅಂದು ಮಾತನಾಡಲಿಲ್ಲ. ಯಾರ ಒತ್ತಡವೂ ಇಲ್ಲದೆ, ಕಾರ್ಯಕರ್ತರ ಕ್ಷಮೆಯಾಚಿಸಿದೆ.

ರಾಜಕೀಯ ಕ್ಷೇತ್ರದಲ್ಲಿ ಬೆಳೆದು 8 ಬಾರಿ ಶಾಸಕನಾಗಿ ಈಗ ಉಪಮುಖ್ಯಮಂತ್ರಿ ಆಗಿದ್ದೇನೆ. ನಾನು ರಾಜೀವ್ ಗಾಂಧಿ ಮಾತಿನ ಮೇಲೆ ನಂಬಿಕೆ ಇಟ್ಟವನು. ಹಿಂಬಾಲಕರನ್ನು ಸೃಷ್ಟಿಸಬೇಡಿ ನಾಯಕರನ್ನು ಸೃಷ್ಟಿಸಿ ಎನ್ನುವ ಮಾತನ್ನು ಹೆಚ್ಚು ನಂಬುವವನು ಎಂದರು.

ದೇವೇಗೌಡ, ಕುಮಾರಸ್ವಾಮಿ ವಿರುದ್ಧ ರಾಜಕೀಯ ಮಾಡಿದ್ದೇನೆ. ಪಕ್ಷದ ಹೈಕಮಾಂಡ್ ಆದೇಶಕ್ಕೆ ತಲೆಬಾಗಿ ಅವರೊಂದಿಗೆ ಕೈಜೋಡಿಸಿದ್ದೆ ಎಂದು ವಿವರಿಸಿದರು. ಪುಸ್ತಕದಲ್ಲಿ ಶೇ.99ರಷ್ಟು ಸತ್ಯ ಸಂಗತಿಗಳಿವೆ. ನನ್ನ ಶ್ರಮ, ಫಲವನ್ನು ಇದರ ಮೂಲಕ ತಿಳಿದುಕೊಳ್ಳಬಹುದು ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೇ ಕಾಲ್ ಹಿಮ್ ಓಜಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಬೈಸನ್ (ತ)	4 ಪ್ರದರ್ಶನಗಳು
ಸಂಗಂ	
ಡ್ಯೂಡ್ (ತ)	4 ಪ್ರದರ್ಶನಗಳು
ಲಿಡೋ	
ಇಡ್ಲಿ ಕೊಟ್ಟು (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಏಳುಮಲೆ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಬೆ.9.45ಕ್ಕೆ, ಮ.1.10ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸುನ್ನಿ ಸಂಸ್ಕಾರಿ ಕಿ ತುಳಸಿ ಕುಮಾರಿ (ಹಿಂ): ಸಂ.4.30ಕ್ಕೆ.
ಸ್ಕ್ರೀನ್ 2	ತ್ರೋನ್ ಎರ್ಸ್ (ಇಂ): ಮ.1.35ಕ್ಕೆ, ರಾ.7.30ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ.4.05ಕ್ಕೆ, ರಾವಣ ಪ್ರಭು (ಮ): ರಾ.10.05ಕ್ಕೆ.
ಸ್ಕ್ರೀನ್ 3	ಕಾಂತಾರ ಚಾಪ್ಟರ್ 1(ಕ): ಬೆ.10.05ಕ್ಕೆ, ಮ.1.25ಕ್ಕೆ, ಸಂ.4.45ಕ್ಕೆ, ರಾ.8.15ಕ್ಕೆ.
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪತ್ನಿಯ ಬರ್ಬರವಾಗಿ ಹತ್ಯೆಗೈದ ಪತಿ; ಜಟ್ಟಿಹುಂಡಿ ಗ್ರಾಮದಲ್ಲಿ ಘಟನೆ

ಮೈಸೂರು,ಅ.16(ಪಿಎಂ)– ಮನೆಗೆ ಬಾರದ ಕಾರಣಕ್ಕೆ ಪತ್ನಿಯ ಕತ್ತು ಕೊಯ್ದು ಪತಿಯೇ ಬರ್ಬರವಾಗಿ ಹತ್ಯೆಗೈದಿರುವ ಘಟನೆ ಮೈಸೂರು ತಾಲೂಕಿನ ಜಟ್ಟಿಹುಂಡಿ ಗ್ರಾಮದಲ್ಲಿ ಗುರುವಾರ ಬೆಳಗ್ಗೆ ನಡೆದಿದೆ.

ತಾಲೂಕಿನ ಗೋಪಾಲಪುರ ಗ್ರಾಮದ ಸವಿತಾ (37), ತನ್ನ ಪತಿ ದೇವರಾಜು ವಿನಿಂದ (49) ಭೀಕರವಾಗಿ ಹತ್ಯೆಯಾದ ದುರ್ದೈವಿ. 16 ವರ್ಷಗಳ ಹಿಂದೆ ಸವಿತಾ ಮತ್ತು ದೇವರಾಜು ವಿವಾಹವಾಗಿದ್ದರು. ಈ ದಂಪತಿಗೆ ಪುತ್ರಿ (13) ಇದ್ದಾಳೆ.

ನಿತ್ಯವೂ ಮದ್ಯಪಾನ ಮಾಡಿಕೊಂಡು ಮನೆಗೆ ಬರುತ್ತಿದ್ದ ದೇವರಾಜು, ಕುಡಿದ ಮತ್ತಿನಲ್ಲಿ ಸವಿತಾಗೆ ಹೊಡೆದು ಬಡಿದು ಚಿತ್ರಹಿಂಸೆ ಕೊಡುತ್ತಿದ್ದ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಪತಿಯೊಂದಿಗೆ ಜಗಳ ಮಾಡಿಕೊಂಡಿದ್ದ ಸವಿತಾ, ಕಳೆದ ಆರು ತಿಂಗಳ ಹಿಂದೆ ಮನೆ ಬಿಟ್ಟು ಬಂದು ಜಟ್ಟಿಹುಂಡಿ ಬಳಿಯ ಕ್ರಿಶ್ಚಿಯನ್ ವೃದ್ಧಾಶ್ರಮವೊಂದರಲ್ಲಿ ಕೆಲಸ ಮಾಡಿಕೊಂಡು ಅಲ್ಲೇ ವಾಸವಿದ್ದರು. ಈ ನಡುವೆ ಸವಿತಾ, ಪತಿಗೆ ವಿವಾಹ ವಿಚ್ಛೇದನದ ನೋಟಿಸ್ ಸಹ ಕಳುಹಿಸಿದ್ದ ಹಿನ್ನೆಲೆಯಲ್ಲಿ ದೇವರಾಜು ಕೋಪಗೊಂಡಿದ್ದ ಎಂದು ಪ್ರಾಥಮಿಕ ಹಂತದ ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುರುವಾರ ಬೆಳಗ್ಗೆ ಆಶ್ರಮದ ಬಳಿ ಬಂದ ದೇವರಾಜು, ಸವಿತಾ ಅವರನ್ನು ಮನೆಗೆ ಬರುವಂತೆ ಒತ್ತಾಯಿಸಿದ್ದಾನೆ. ಈ ವೇಳೆ ಆಕೆ ಮನೆಗೆ ಬರಲು ನಿರಾಕರಿಸಿದ್ದಕ್ಕೆ ಕೋಪಗೊಂಡ ದೇವರಾಜು, ವೃದ್ಧಾಶ್ರಮದ ಆವರಣದಲ್ಲೇ ಚಾಕುವಿನಿಂದ ಆಕೆಯ ಹೊಟ್ಟೆಗೆ ಇರಿದಿದ್ದು ಮಾತ್ರವಲ್ಲದೆ, ಕತ್ತು ಕೊಯ್ದು ಬರ್ಬರವಾಗಿ ಹತ್ಯೆಗೈದು ಪರಾರಿಯಾಗಿದ್ದಾನೆ. ಮೈಸೂರು ವೈದ್ಯಕೀಯ ಕಾಲೇಜು ಶವಾಗಾರದಲ್ಲಿ ಮೃತದೇಹ ಇರಿಸಿದ್ದು, ನಾಳೆ(ಅ.17) ಬೆಳಗ್ಗೆ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ದೇಹ ಒಪ್ಪಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಮೃತ ಸವಿತಾ ಅವರ ಕುಟುಂಬದವರು ನೀಡಿದ ದೂರಿನ ಅನ್ವಯ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತಲೆಮರೆಸಿಕೊಂಡಿರುವ ಆರೋಪಿ ದೇವರಾಜು ಪತ್ತೆಗೆ ಪೊಲೀಸರು ಶೋಧ ಕಾರ್ಯ ನಡೆಸುತ್ತಿದ್ದಾರೆ.

ಹುಲಿ ಗಣತಿ ಸಿಬ್ಬಂದಿಗೆ ತರಬೇತಿ



ಮೈಸೂರು ತಾಲೂಕಿನ ಇಲವಾಲದಲ್ಲಿರುವ ಅರಣ್ಯ ತರಬೇತಿ ಕೇಂದ್ರದಲ್ಲಿ ಹುಲಿ ಗಣತಿ ಪ್ರಕ್ರಿಯೆಗೆ ನಿಯೋಜನೆಗೊಂಡಿರುವ ಸಿಬ್ಬಂದಿ ತರಬೇತಿ ಕಾರ್ಯಾಗಾರ ನಡೆಯಿತು.

ಮೈಸೂರು, ಅ.16(ಎಂಟಿವೈ)– ಮೈಸೂರು ತಾಲೂಕಿನ ಇಲವಾಲದಲ್ಲಿರುವ ಅರಣ್ಯ ತರಬೇತಿ ಕೇಂದ್ರದಲ್ಲಿ ಹುಲಿ ಗಣತಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ 112 ಸಿಬ್ಬಂದಿ ಇರುವ ಮೊದಲ ತಂಡಕ್ಕೆ ಗುರುವಾರ ಎರಡು ದಿನಗಳ ತರಬೇತಿ ಕಾರ್ಯಾಗಾರ ಆರಂಭವಾಯಿತು.

ಈ ವೇಳೆ ಮಾತನಾಡಿದ ಹುಲಿ ಗಣತಿ ರಾಜ್ಯ ನೋಡಲ್ ಅಧಿಕಾರಿಯೂ ಆದ ಹುಲಿ ಯೋಜನೆ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಪ್ರಸ್ತುತ ಹುಲಿ ಸಂಖ್ಯೆಯಲ್ಲಿ ಕರ್ನಾಟಕ ದೇಶದಲ್ಲಿ ಎರಡನೇ ಸ್ಥಾನ ಪಡೆದಿದೆ. 2026ರ ಜನವರಿಯಲ್ಲಿ ನಡೆಯುವ ಹುಲಿ ಗಣತಿಯಲ್ಲಿ ಯಾವುದೇ ಲೋಪವಾಗದಂತೆ ಎಚ್ಚರ ವಹಿಸಬೇಕು. ಕ್ಯಾಮರಾ ಟ್ರ್ಯಾಪ್‌ಗಿಂತ ಎಂ–ಸ್ಟ್ರೈಪ್ಸ್ ವಿಧಾನದಲ್ಲಿ ಮಾಡುವ ಗಣತಿ ಕಾರ್ಯ ಬಹುಮುಖ್ಯ. ಆ ಕಾರಣದಿಂದ ಸೂಕ್ಷ್ಮವಾಗಿ ಗಮನಿಸಿ, ಕಂಡದ್ದೆಲ್ಲ ದಾಖಲಿಸಬೇಕು ಎಂದರು.

ಕ್ಯಾಮರಾ ಟ್ರ್ಯಾಪ್‌ನಲ್ಲಿ ಎಲ್ಲಾ ಹುಲಿಗಳ ಚಿತ್ರಗಳು ಸೆರೆಯಾಗುವುದಿಲ್ಲ. ಆ ಕಾರಣದಿಂದ ಎಂ–ಸ್ಟ್ರೈಪ್‌ನಲ್ಲಿ ಗಣತಿ ಮಾಡುವಾಗ ಮಾಂಸಹಾರಿ, ಸಸ್ಯಹಾರಿ ಪ್ರಾಣಿಗಳ ಬಗ್ಗೆಯೂ ಮಾಹಿತಿ ಕಲೆ ಹಾಕಬೇಕು. ಲೈನ್ ಟ್ರಾನ್ಸಾಕ್ಟ್ ಬಗ್ಗೆಯೂ ಸೂಕ್ಷ್ಮವಾಗಿ ಗಮನಿಸಿ, ಕ್ರೋಢೀಕರಿಸಿದ ಮಾಹಿತಿ ಉತ್ತಮವಾಗಿದ್ದರೆ, ಹುಲಿ ಗಣತಿ ನಿಖರವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವೃತ್ತದ ಸಿಎಫ್ ಡಾ.ಎಸ್.ಎಸ್.ರವಿಶಂಕರ್ ಮಾತನಾಡಿ, ಕಳೆದ ಬಾರಿ ನಡೆದ ಹುಲಿ ಗಣತಿ ಕೆಲವು ಅಂಕಿ ಅಂಶಗಳ ನಮೂದಿಸುವಾಗ ಲೋಪವಾಗಿತ್ತು. ಆ ಕಾರಣದಿಂದ ಮೊದಲ ಸ್ಥಾನ ಕೈತಪ್ಪಿತ್ತು. ಈ ಬಾರಿ ಕಟ್ಟುನಿಟ್ಟಾಗಿ ಗಣತಿ ಮಾಡಿ, ರಾಜ್ಯವನ್ನು ಹುಲಿಗಳ ಸಂಖ್ಯೆಯಲ್ಲಿ ಮತ್ತೆ ನಂಬರ್ ಒನ್ ರಾಜ್ಯ ಎನಿಸಬೇಕು ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಡಿಸಿಎಫ್‌ಗಳಾದ ಕೆ.ಪರಮೇಶ್, ಡಿ.ರಘು, ಶಂಕರೇಗೌಡ, ಮಹಮದ್ ಫಯಾಜುದ್ದೀನ್, ಎಸಿಎಫ್‌ಗಳಾದ ರವೀಂದ್ರ, ನವೀನ್‌ಕುಮಾರ್, ಮಹದೇವಸ್ವಾಮಿ, ಮೋಹನ್ ಬಿದರಿ, ಸುಮಿತ್ರ ಸೇರಿದಂತೆ ಮೈಸೂರು ಪ್ರಾದೇಶಿಕ ವಲಯ, ಹುಣಸೂರು, ಮಂಡ್ಯ ವನ್ಯಜೀವಿ ವಿಭಾಗದ ಸಿಬ್ಬಂದಿ, ಟೈಗರ್ ಸೆಲ್ ಸಿಬ್ಬಂದಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡು ದಿನ ಮೈಸೂರು ಪ್ರವಾಸ



ಮೈಸೂರು, ಅ.16(ಎಂಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ 'ಮೈಸೂರು ಬೃಹತ್ ಉದ್ಯೋಗ ಮೇಳ' ಉದ್ಘಾಟನೆ ಸೇರಿದಂತೆ ವಿವಿಧ ಕಾರ್ಯಕ್ರಮಗಳ ಹಿನ್ನಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡು ದಿನಗಳ ಮೈಸೂರು ಪ್ರವಾಸ ಕೈಗೊಂಡಿದ್ದಾರೆ.

ನಾಳೆ(ಅ.17) ಬೆಳಗ್ಗೆ 11ಕ್ಕೆ ಬೆಂಗಳೂರು ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಹೊರಟು, ಬೆಳಗ್ಗೆ 11.25ಕ್ಕೆ ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ಮುಖ್ಯಮಂತ್ರಿಗಳು ಮಹಾರಾಜ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿರುವ ಬೃಹತ್ ಉದ್ಯೋಗ ಮೇಳದಲ್ಲಿ ಭಾಗವಹಿಸಲಿದ್ದಾರೆ.

ನಂತರ ಸ್ಥಳೀಯ ಖಾಸಗಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ, ಇಲ್ಲಿಯೇ ವಾಸ್ತವ್ಯ ಹೂಡಲಿದ್ದಾರೆ. ಅ.18ರ ಬೆಳಗ್ಗೆ 11 ಗಂಟೆಗೆ ಮೈಸೂರು ವಿವಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ವತಿಯಿಂದ ಹಮ್ಮಿಕೊಂಡಿರುವ 'ರಾಜ್ಯಮಟ್ಟದ ಸುದ್ದಿ ಛಾಯಾಚಿತ್ರ ಸ್ಪರ್ಧೆಯ ಮುಖ್ಯಮಂತ್ರಿ ಕಪ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ' ಹಾಗೂ ಮಧ್ಯಾಹ್ನ 12 ಗಂಟೆಗೆ ಕಬಿನಿ ನೀರು ಸರಬರಾಜು ಯೋಜನೆಯ 2ನೇ ಹಂತದ ಉನ್ನತೀಕರಣ ಕಾಮಗಾರಿಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಹಾಗೆಯೇ ಸಂಜೆ 4 ಗಂಟೆಗೆ ಮೈಸೂರು ವಿವಿ ಮಾನಸಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ರಜತ ಮಹೋತ್ಸವ ಹಾಗೂ ನೂತನ ಜ್ಞಾನದರ್ಶನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ, ರಾತ್ರಿ 7 ಗಂಟೆಗೆ ಬೆಂಗಳೂರಿಗೆ ತೆರಳಲಿದ್ದಾರೆ.

ಅರಣ್ಯ ಇಲಾಖೆಯಿಂದ ಅಕ್ರಮವಾಗಿ ಜಮೀನು ವಶಕ್ಕೆ; ರೈತರ ಆರೋಪ

ಮೈಸೂರು,ಅ.16(ಎಂಟಿವೈ)– ಪಿರಿಯಾಪಟ್ಟಣ ತಾಲೂಕಿನ ರಾವಂದೂರು ಹೋಬಳಿಯ ಕಲ್ಕೆರೆ ಗ್ರಾಮದ ಸ.ನಂ.122ರಲ್ಲಿನ ನನ್ನ ಜಮೀನನ್ನು ಅಕ್ರಮವಾಗಿ ಅರಣ್ಯ ಇಲಾಖೆ ವಶಪಡಿಸಿಕೊಂಡಿದೆ ಎಂದು ರೈತ ಎಚ್.ಎಸ್.ನಟರಾಜು ದೂರಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ವೆ ನಂ.122ರಲ್ಲಿ ಉಳುಮೆ ಮಾಡುತ್ತಿದ್ದ ಭೂಮಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಹಿಡುವಳಿ ಜಾಗವೆಂದು ದಾಖಲೆಗಳಿದ್ದರೂ ಅರಣ್ಯ ಇಲಾಖೆಯು ಅಕ್ರಮವಾಗಿ ಭೂಮಿಯನ್ನು ವಶಕ್ಕೆ ಪಡೆದಿದೆ. ಸದರಿ ಸರ್ವೆ ನಂಬರ್‌ನಲ್ಲಿ 5 ಎಕರೆ 29 ಗುಂಟೆ ಜಮೀನು ಇದ್ದು, ಎಲ್ಲಾ ದಾಖಲೆಗಳು ನಮ್ಮ ಹೆಸರಿನಲ್ಲಿವೆ. ಏಕಾಏಕಿ ಈ ಜಾಗವನ್ನು ಅರಣ್ಯ ಇಲಾಖೆ ವಶಕ್ಕೆ ಪಡೆಯಿತು. ಈ ಬಗ್ಗೆ ಅಹವಾಲು ಸಲ್ಲಿಸಿದಾಗ ಮೈಸೂರು ವಿಭಾಗ ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಜಾಗವನ್ನು ಅರಣ್ಯ ವ್ಯಾಪ್ತಿಯಿಂದ ಕೈಬಿಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ಆದರೆ ಇಂದಿಗೂ ಸಮಸ್ಯೆ ಪರಿಹಾರವಾಗಿಲ್ಲ. ಉನ್ನತ ಅಧಿಕಾರಿಗಳೂ ಸ್ಪಂದಿಸುತ್ತಿಲ್ಲ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದ ಅಧ್ಯಕ್ಷ ಜಿ.ಲೋಕೇಶ್, ಕಾರ್ಯಾಧ್ಯಕ್ಷ ಮೋಹನ್ ರಾಜ್, ಪದಾಧಿಕಾರಿಗಳಾದ ರಾಜಶೇಖರ್, ರಾಜು ಇದ್ದರು.

ಶುಭ ಹಾರೈಕೆ



ಕಾಂತಾರ ಚಾಪ್ಟರ್–1 ನಾಯಕ–ನಿರ್ದೇಶಕ ರಿಷಬ್ ಶೆಟ್ಟಿ ಅವರಿಗೆ ಮೈಸೂರಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ, ಸ್ವೀಟ್ ಮಹೇಶ್, ಪ್ರದೀಪ್, ಸೂರಜ್ ಇತರರು ಅಭಿನಂದಿಸಿ ಚಿತ್ರದ ಯಶಸ್ಸಿಗೆ ಶುಭ ಕೋರಿದರು.

ಜಾತಿ ಗಣತಿಯಲ್ಲಿ ಭಾಗವಹಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಅ.16–ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯಲ್ಲಿ ಸಿಎಂ ಸಿದ್ದರಾಮಯ್ಯ ಗುರುವಾರ ಪಾಲ್ಗೊಂಡು ಮಾಹಿತಿ ನೀಡಿದ್ದಾರೆ.

ಕಾವೇರಿ ನಿವಾಸದಲ್ಲಿ ಆರ್ಥಿಕ, ಸಾಮಾ ಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಆಗಮಿಸಿದ್ದ ಗಣತಿದಾರರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 45 ನಿಮಿಷಕ್ಕೂ ಹೆಚ್ಚು ಕಾಲ ಸಮಾಧಾನದಿಂದ ಉತ್ತರಿಸಿ ದರು. ಗಣತಿದಾರರು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಮುಖ್ಯಮಂತ್ರಿಗಳು ಉತ್ತ ರಿಸಿ, ಸಂಪೂರ್ಣ ಮಾಹಿತಿ ನೀಡಿದರು.

ಈ ಕುರಿತು ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಸಿದ್ದರಾಮಯ್ಯ, ನಮ್ಮ ಸರ್ಕಾರವು ಹಿಂದುಳಿದ ವರ್ಗಗಳ ಆಯೋಗದ ಮೂಲಕ ನಡೆಸುತ್ತಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಗಾಗಿ ನನ್ನ ಮನೆಗೆ ಭೇಟಿ ನೀಡಿದ ಸಿಬ್ಬಂದಿಗೆ ಮಾಹಿತಿ ನೀಡಿ, ನನ್ನ ಕರ್ತವ್ಯವನ್ನು ಯಶಸ್ವಿಯಾಗಿ ಪೂರೈಸಿದೆ ಎಂದು ತಿಳಿಸಿದ್ದಾರೆ.

ಮೈಸೂರು ಮಾನ್ಸೂನ್ ರೇಸ್

13ನೇ ದಿನ, ಶುಕ್ರವಾರ, 17–10–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಲಲಿತ ಮಹಲ್ ಪ್ಲೇಟ್ –1100 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಇಮ್ಮಾರ್ಟಲ್ ಬ್ಯೂಟಿ 2. ಫ್ಯಾಷನಿಸ್ಟ್

II. BVL ಲೇಡಿಸ್ ಸರ್ಕಲ್ ಇಂಡಿಯಾ ಕಪ್ 1200 ಮೀ. (ಮೈಸೂರು ಬೆಸ್ಟ್ ಹಾರ್ಸ್). ಮ.2.30ಕ್ಕೆ
1 ಅಲ್ಲುರಿಂಗ್ ಬ್ಯೂಟಿ 2. ಜನ್ನತ್

III. ಅಲೆಕೋನ ಟ್ರೋಫಿ –1600 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಸ್ಟಾರ್ ಸ್ಪೆಡ್ ಡೆಡ್ 2 ಕೌಂಟ್ ಬೆಸಿ

IV. K. ತಮ್ಮಣ್ಣಗೌಡ ಮೆಮೋರಿಯಲ್ ಟ್ರೋಫಿ –1200 ಮೀ. ರೇಟೆಡ್ 40 ರಿಂದ 65. (ಮೈಸೂರು ಬೆಸ್ಟ್ ಹಾರ್ಸ್). ಮ.3.30ಕ್ಕೆ
1. ಫಾಲ್ಕನ್ ಫ್ಯೂರಿ 2. ದ್ರಿಶನಾ

V. ಗೌರ್ನರ್ಸ್ ಕಪ್ –2000 ಮೀ. 4 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ಮ್ಯಾಗ್ನೆಟಿಕ್ 2. ಸಿ ದಿ ಸನ್

VI. A.R. ಸುಬ್ರಮಣ್ಯರಾಜ್ ಅರಸ್ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ವಿಂಟರ್ ಅಜೆಂಡಾ 2 ಗೋಲ್ಡ್ ಕೈಟ್


VIII. BVL ಲೇಡಿಸ್ ಸರ್ಕಲ್ ಇಂಡಿಯಾ ಕಪ್ 1200 ಮೀ. (ಮೈಸೂರು ಬೆಸ್ಟ್ ಹಾರ್ಸ್). ಸಂ.5.00ಕ್ಕೆ
1. ಎಲ್ ಆಲ್‌ಮಿನ್ 2 ಚಿಂಕಿ ಪಿಂಕಿ

ದಿನದ ಅತ್ಯುತ್ತಮ	ಮ್ಯಾಗ್ನೆಟಿಕ್
ಡಬ್ಬಲ್	ಅಲ್ಲುರಿಂಗ್ ಬ್ಯೂಟಿ, ಸ್ಟಾರ್ ಸ್ಪೆಡ್ ಡೆಡ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಇಂದು ಮೈಸೂರಲ್ಲಿ ವಿಭಾಗ ಮಟ್ಟದ ಉದ್ಯೋಗ ಮೇಳ

● 221 ಕಂಪನಿಗಳು ಭಾಗಿ; 24 ಸಾವಿರ ಅಭ್ಯರ್ಥಿಗಳ ನೋಂದಣಿ ● ಮಹಾರಾಜ ಕಾಲೇಜು ಮೈದಾನದಲ್ಲಿ ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಆಯೋಜನೆ ● ಸ್ಥಳದಲ್ಲೇ ನೋಂದಣಿಗೆ ಅವಕಾಶ



ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ವಿಭಾಗ ಮಟ್ಟದ ಉದ್ಯೋಗ ಮೇಳಕ್ಕೆ ವೇದಿಕೆ ಸಿದ್ಧವಾಗಿರುವುದು.

ಮೈಸೂರು, ಅ.16(ಎಂಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಾಳೆ(ಅ.17) 'ಮೈಸೂರು ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳ (ಯುವ ಸಮೃದ್ಧಿ ಸಮ್ಮೇಳನ)' ನಡೆಯಲಿದ್ದು, 221 ಕಂಪನಿಗಳು ಭಾಗವಹಿಸಲಿವೆ.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮೈಸೂರು ನಗರಪಾಲಿಕೆ ಸಂಯುಕ್ತಾಶ್ರಯದಲ್ಲಿ ಈ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದ್ದು, 24 ಸಾವಿರ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ.

ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಉದ್ಯೋಗ ಮೇಳ ನಡೆಯಲಿದೆ 221 ಕಂಪನಿಗಳು ಹೆಸರು ನೋಂದಾಯಿಸಿದ್ದು, ಸುಮಾರು 45,000 ಉದ್ಯೋಗಾವಕಾಶ ಲಭ್ಯವಿದೆ.

ಈಗಾಗಲೇ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ 6 ಉದ್ಯೋಗ ಮೇಳಗಳಲ್ಲಿ 12,966 ಹಾಗೂ ವಿವಿಧ ಕಾಲೇಜುಗಳ ಸಹಯೋಗದೊಂದಿಗೆ ನಡೆಸಿದ 3 ಉದ್ಯೋಗ ಮೇಳದಲ್ಲಿ 1177 ಅಭ್ಯರ್ಥಿಗಳಿಗೆ ಉದ್ಯೋಗ ದೊರೆತಿದೆ ಎಂದು ಮಾಹಿತಿ ನೀಡಲಾಗಿದೆ.

ಸಿದ್ಧತೆ ಪೂರ್ಣ: 'ಮೈಸೂರು ಬೃಹತ್ ಉದ್ಯೋಗ ಮೇಳ' ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದೆ ಮೇಳದಲ್ಲಿ ಭಾಗವಹಿಸುವ ಕಂಪನಿಗಳಿಗೆ ಪ್ರತ್ಯೇಕ ಸ್ಟಾಲ್‌ಗಳನ್ನು ಒದಗಿಸಲಾಗಿದೆ ಹಾಗೆಯೇ ವಿದ್ಯಾರ್ಥಿಗಳ ಅನುಕೂಲತೆ ಅಗತ್ಯ ಆಸನಗಳ ವ್ಯವಸ್ಥೆ ಹಾಗೂ ಇನ್ನಿತರೆ ಸೌಕರ್ಯ ಕಲ್ಪಿಸಲಾಗಿದೆ.

ಬೆಳಗ್ಗೆ 11ಕ್ಕೆ ಉದ್ಘಾಟನೆ: ಬೆಳಗ್ಗೆ 11 ಗಂಟೆಗೆ ಉದ್ಯೋಗ ಮೇಳವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವ ಡಾ.ಶರಣಪ್ರಕಾಶ್ ಆರ್. ಪಾಟೀಲ್ ಸೇರಿದಂತೆ ಸ್ಥಳೀಯ ಶಾಸಕರು, ಸಂಸದರು, ನಿಗಮ ಮಂಡಳಿಗಳ ಅಧ್ಯಕ್ಷರು, ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಆನ್‌ಲೈನ್ ನೋಂದಣಿ ಮಾಡಿಕೊಳ್ಳದಿದ್ದರೂ ಅವಕಾಶ...!

'ಮೈಸೂರು ಬೃಹತ್ ಉದ್ಯೋಗ ಮೇಳ'ಕ್ಕೆ ಆನ್‌ಲೈನ್ ಮೂಲಕ ಹೆಸರು ನೋಂದಣಿ ಮಾಡಿಕೊಳ್ಳದಿದ್ದರೂ ಅಗತ್ಯ ದಾಖಲೆಗಳೊಂದಿಗೆ ನೇರವಾಗಿ ಉದ್ಯೋಗ ಮೇಳದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಹೆಸರು ನೋಂದಾಯಿಸಿಕೊಂಡು ಉದ್ಯೋಗ ಮೇಳದಲ್ಲಿ ಭಾಗವಹಿಸಿದ ನಂತರವೂ ಉದ್ಯೋಗ ಸಿಗದೇ ಇರುವ ಅಭ್ಯರ್ಥಿಗಳ ವಿವರವನ್ನು ಪಡೆದುಕೊಂಡು ಅವರಿಗೆ ಬೇಕಿರುವ ಕೌಶಲ್ಯಗಳ ಬಗ್ಗೆ ತರಬೇತಿಯನ್ನು ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದಿನಿಂದ ಮೈಸೂರು ಎಎಸ್‌ಜಿ ಆಸ್ಪತ್ರೆಯಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ

ಮೈಸೂರು,ಅ.16(ಎಂಟಿವೈ)– ದೀಪಾವಳಿ ಹಬ್ಬದ ಅಂಗವಾಗಿ ಕಣ್ಣಿನ ಸುರಕ್ಷತೆಯ ಜಾಗೃತಿಗಾಗಿ ಮೈಸೂರಿನ ಎಎಸ್‌ಜಿ ಕಣ್ಣಿನ ಆಸ್ಪತ್ರೆಯಲ್ಲಿ ಅ.17ರಿಂದ 24ರವರೆಗೆ ಕಣ್ಣಿನ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಆಸ್ಪತ್ರೆ ವೈದ್ಯ ಡಾ.ಹೆಚ್.ಎಂ. ಮಹೇಶ್ ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಬ್ಬದಲ್ಲಿ ಪಟಾಕಿ ಬಳಸುವಾಗ ಪ್ರತಿಯೊಬ್ಬರು ಎಚ್ಚರಿಕೆಯನ್ನು ವಹಿಸಬೇಕು. ಮುಖ್ಯವಾಗಿ ಮಕ್ಕಳನ್ನು ಜಾಗ್ರತೆಯಿಂದ ಗಮನಿಸಬೇಕು. ರಕ್ಷಣಾತ್ಮಕ ಕನ್ನಡಕಗಳನ್ನು ಧರಿಸಿ, ಸುರಕ್ಷಿತ ಅಂತರ ಕಾಯ್ದುಕೊಳ್ಳಬೇಕು. ಕಣ್ಣಿಗೆ ಸಂಬಂಧಿಸಿದ ಯಾವುದೇ ಸಮಸ್ಯೆ ಉಂಟಾದರೆ ಸ್ವಯಂ ಚಿಕಿತ್ಸೆ ಮಾಡದೆ ಕೂಡಲೇ ತಜ್ಞ ವೈದ್ಯರನ್ನು ಸಂಪರ್ಕಿಸುವಂತೆ ಸಲಹೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆ ಕೇಂದ್ರದ ನಿರ್ವಾಹಕ ಪ್ರದೀಪ್ ಪ್ರಸಾದ್ ಇದ್ದರು.

9ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ
ದುಃಖತಪ್ತರು:
ಪತಿ ಎನ್. ನಾಗರಾಜು ಡ್ರೈವರ್(ನಿ) ಕಾಡಾ ಇಲಾಖೆ, ಮೈಸೂರು.
ಮಗಳು ಎನ್.ಪ್ರತಿಮಾ,
ಮೊಮ್ಮಗಳು ಮೌಲ್ಯ (ಅಮ್ಮು)
ಹಾಗೂ ಬಂಧು ಮಿತ್ರರು

ಶ್ರೀಮತಿ ನಾಗಮ್ಮ
ನಿಧನ: 17.10.2016

ಹಸಿರು ನಮ್ಮ ಉಸಿರು

ನಾಯಿ ಕಾಣೆಯಾಗಿದೆ



ಹೆಸರು: ವಂಶಿ
ವಯಸ್ಸು: 1.5 ವರ್ಷ, ಬಣ್ಣ: ಬಿಳಿ ಮತ್ತೆ ಕೆಂದು, ಉದ್ದ: 3.5, ಎತ್ತರ: 2.5, ಎಲ್ಲೆ ಇದ್ದರು ಕಣ್ಣಿಗೆ ಕಾಣಿಸಿದರೆ ಯಾರಾದರೂ ಮನೆಗೆ ಕರೆದುಕೊಂಡು ಹೋಗಿದ್ದರೆ ದಯವಿಟ್ಟು ದಯಮಾಡಿ ತಿಳಿಸಿ.
ಕರೆ ಮಾಡಿ: 7676028360 / 7483605767/ 8431225342 / 9448785977
ವಿಳಾಸ : 1ನೇ ಮುಖ್ಯ ರಸ್ತೆ, ಟೋಲ್‌ಗೇಟ್, ಜಯದೇವ ಆಸ್ಪತ್ರೆ ಪಕ್ಕ, ಕುಂಬಾರಕೊಪ್ಪಲ್



ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು





19ನೇ ವರ್ಷದ ಸವಿನೆನಪು



ಶ್ರೀ ಬಿ.ಬೋರಯ್ಯನವರು
(ಅಡ್ಡೆಮರಿ ಸಿದ್ದಪ್ಪನವರ ಮಗ)
ಕೆ.ಜಿ. ಕೊಪ್ಪಲು, ಜಯನಗರ

ನೀವು ನಮ್ಮನ್ನಗಲಿ ಇಂದಿಗೆ 19 ವರ್ಷಗಳು ಕಳೆದರೂ ನಿಮ್ಮ ಪ್ರೀತಿ, ಆದರ್ಶಗಳು ನಮಗೆ ದಾರಿದೀಪವಾಗಿದೆ. ಸದಾ ನಿಮ್ಮ ನೆನಪು ನಮ್ಮ ಮನಸ್ಸಿನಲ್ಲಿ ಹಚ್ಚ ಹಸಿರಾಗಿದೆ.

ಸದಾ ನಿಮ್ಮನ್ನು ಸ್ಮರಿಸುತ್ತಿರುವ

ಗಂಡು ಮಕ್ಕಳಾದ: ಬಿ. ಮಹದೇವು ಮತ್ತು ಬಿ. ಕುಮಾರ್, ಸೊಸೆಯಂದಿರು: ಗಾಯಿತ್ರಿ ಮತ್ತು ಸೌಮ್ಯ, ಹೆಣ್ಣು ಮಕ್ಕಳು: ಪುಷ್ಪ ಮತ್ತು ಗೌರಿ, ಅಳಿಯಂದಿರು: ವಿಜಿಕುಮಾರ್ ಮತ್ತು ಬೋರಪ್ಪ, ಮೊಮ್ಮಕ್ಕಳಾದ: ಶರತ್,ಅರ್ಪಿತ,ಯುಕ್ತ,ಅಕ್ಷತ, ಅಭಿಷೇಕ್, ಅನುಶ್ರೀ, ಅನಿಲ್, ಹಾಸಿನಿ, ಬಂಧು–ಮಿತ್ರರು ಹಾಗೂ ಕುಟುಂಬ ವರ್ಗದವರು, ಕೆ.ಜಿ. ಕೊಪ್ಪಲು, ಜಯನಗರ, ಮೈಸೂರು.

ಪ್ರಕಟಣೆ: **ಬಿ.ಮಹದೇವು ಮತ್ತು ಬಿ.ಕುಮಾರ್, ಜೆಡಿಎಸ್ ಮುಖಂಡರು**
ಭೈರವ ಕಾಂಪ್ಲೆಕ್ಸ್ ಹಾಗೂ ಭೈರವ ಗ್ರೂಪ್ಸ್ ಮಾಲೀಕರು
ಕೆ.ಜಿ. ಕೊಪ್ಪಲ್, ಜಯನಗರ

